ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 38

ಸೆಪ್ಟೆಂಬರ್ 20, 2009

ರೂ. 5/-

ಕನ್ನಡ ವಾರಪತ್ರಿಕೆ





ಆರೆಸ್ಸೆಸ್ ಅಜೆಂಡಾ ಜಾರಿ :

- ಶಾಲಾ ಮಕ್ಕಳ ಮಿದುಳಿಗೆ ವಿಷ
- ಚರ್ಚ್ ಮೇಲೆ ದಾಳಿ

ಚಳುವಳಿಗೆ ಧುಮುಕಿದ ಅಸಂಘಟಿತ ಕಾರ್ಮಿಕರು

ಹಂದಿಜ್ವರ : ಅಪರಾಧಿ ಯಾರು?


ಪಶ್ಚಿಮ ಬಂಗಾಳ : ಐತಿಹಾಸಿಕ ಆಹಾರ ಆಂದೋಲನಕ್ಕೆ - 50







ಮಹತ್ವದ ಕೃತಿಗಳ ಬಿಡುಗಡೆ



ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ದುರಂತ ಸಾವನ್ನು ಕಂಡಿದ್ದಾರೆ. ಅವರ ಅಕಾಲಿಕ ಸಾವಿನ ಕುರಿತು ಸಂತಾಪ ವ್ಯಕ್ತಪಡಿಸುವುದು ಸಹಜವೇ: ಆದರೆ ಸಾವಿನ ಸಂದರ್ಭ ಎಂದೋ ಅಥವಾ ಮತ್ತೇನೋ ಕಾರಣವೆಂದು ರಾಜಶೇಖರ ರೆಡ್ಡಿಯವರು ನಡೆಸಿದ ರಾಜಕಾರಣದ ಬಗೆಗೆ ಏನೆಂದೂ ವಿಮರ್ಶಾತ್ಮಕ ದೃಷ್ಟಿಯಿಲ್ಲದೇ ವಾಚಾಮಗೋಚರವಾಗಿ ಹೊಗಳುವುದು ಸಾಧ್ಯವೇ? ಬಹಳಷ್ಟು ಮಾಧ್ಯಮಗಳಲ್ಲಿ ಅಂತಹ ಪ್ರವೃತ್ತಿ ಕಂಡುಬಂದಿದೆ.
ಈ ಹಿನ್ನೆಲೆಯಲ್ಲಿ ಪ್ರಜಾವಾಣಿಯಲ್ಲಿ ಪ್ರಕಟವಾದ ಲೇಖನದ ಆಯ್ದ ಭಾಗ ಇಲ್ಲಿದೆ.

'ಪುಲಿವೆಂದಲ ಪುಲಿ' ಇನ್ನೊಂದು ಮುಖ

ಆಂಧ್ರ ಪ್ರದೇಶದಲ್ಲಿ ಕೇರಳದ ಇ.ಎಂ.ಎಸ್. ನಂಬೂದಿರಿಪಾಡ್, ಅಚ್ಯುತಮೆನನ್, ತಮಿಳುನಾಡಿನ ಸಿ.ಎಸ್.ಅಣ್ಣಾದುರೈ, ಕರುಣಾನಿಧಿ ಇಲ್ಲವೇ ಕರ್ನಾಟಕದ ಡಿ.ದೇವರಾಜ ಅರಸು ಅವರಂತಹ ರಾಜಕೀಯ ನಾಯಕರು ಕಾಣಿಸಿಕೊಳ್ಳಲೇ ಇಲ್ಲ. ವೈ.ಎಸ್.ರಾಜಶೇಖರರೆಡ್ಡಿಯವರಲ್ಲಿಯೂ ಮೇಲೆ ಹೇಳಿದ ನಾಯಕರಲ್ಲಿದ್ದ ಸಾಮಾಜಿಕ ಚಿಂತನೆಯಾಗಲಿ, ರಾಜಕೀಯ ಮುನ್ನೋಟವಾಗಲಿ ಇರಲಿಲ್ಲ. ತಮಿಳುನಾಡಿನ ಎಂ.ಜಿ.ಆರ್, ಜಯಲಲಿತಾ ಮಾತ್ರವಲ್ಲ ತನ್ನದೇ ರಾಜ್ಯದ ಎನ್.ಟಿ.ರಾಮರಾಯರಂತೆ ಚಿತ್ರರಂಗದ ಜನಪ್ರಿಯತೆಯನ್ನು ಬಂಡವಾಳ ಮಾಡಿಕೊಂಡು ಅವರು ರಾಜಕೀಯ ಪ್ರವೇಶಿಸಿದವರೂ ಅಲ್ಲ. ಆಂಧ್ರಪ್ರದೇಶದ ಗ್ರಾಮೀಣ ಭಾಗವನ್ನು ಈಗಲೂ ನಿಯಂತ್ರಿಸುತ್ತಿರುವ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾಗಿಯೇ ವೈಎಸ್ಆರ್ ರಾಜಕೀಯಕ್ಕೆ ಕಾಲಿಟ್ಟವರು. ಮೂರು ದಶಕಗಳ ತಮ್ಮ ರಾಜಕೀಯದ ಆಟದಲ್ಲಿಯೂ ಅವರು ಪ್ರಜಾಪ್ರಭುತ್ವದ ನಿಯಮಾವಳಿಗಳಿಗಿಂತ ಹೆಚ್ಚಾಗಿ ಪಾಳೆಯಗಾರಿಕೆಯ ವರಸೆಗಳನ್ನೇ ಹೆಚ್ಚು ನೆಚ್ಚಿಕೊಂಡವರು.

ವೈಎಸ್ಆರ್ ರಾಜಕೀಯದ ಪ್ರಥಮ ಪಾಠವನ್ನು ಯಾವುದೇ ರಾಜಕೀಯ ಚಿಂತಕರ ಚಾವಡಿಯಲ್ಲಿ ಕಲಿತವರಲ್ಲ. ರಾಯಲಸೀಮೆಯ ಕಡಪಾದಲ್ಲಿ ಪಾಳೆಯಗಾರನಂತೆಯೇ ಬದುಕಿದ ಮತ್ತು ಅಂತಹ ಬದುಕಿಗೆ ಸಹಜವಾದ ಸಾವು ಕಂಡ ತಂದೆ ರಾಜಾರೆಡ್ಡಿಯೇ ಅವರ ರಾಜಕೀಯ ಗುರು.

14 ರಿಂದ 15ನೇ ಶತಮಾನದಲ್ಲಿ ಹಂಪಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯಕ್ಕೊಳಪಟ್ಟ ಪ್ರಾಂತ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ ಮತ್ತು ಕಂದಾಯ ವಸೂಲಿಗಾಗಿ ಸ್ಥಳೀಯ ಮುಖ್ಯಸ್ಥರನ್ನಿಟ್ಟಿದ್ದರು. ವಿಜಯನಗರದ ಪತನದ ನಂತರ ಈ ಮುಖ್ಯಸ್ಥರೇ ಪಾಳೆಯಗಾರರಾಗಿ ಬೆಳೆದರು. ಅಂತಹದ್ದೊಂದು ಪಾಳೆಯಪಟ್ಟು ರಾಯಲಸೀಮೆ. ಬಲ ಇದ್ದವನು ಮಾತ್ರ ಬದುಕುಳಿಯಲು ಸಾಧ್ಯ ಇರುವಂತಹ ಈ ರೀತಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಪಾಳೆಯಗಾರರು ತಮ್ಮದೇ ಗುಂಪು ಕಟ್ಟಿಕೊಂಡು, ಬೆಂಬಲಿಗರನ್ನು ಪೋಷಿಸುತ್ತಾ, ವಿರೋಧಿಗಳನ್ನು ಹಲ್ಲೆ, ಹತ್ಯೆಗಳ ಮೂಲಕ ನಿಯಂತ್ರಿಸುತ್ತಿದ್ದುದು ಮಾಮೂಲಿ. ರಾಜಾರೆಡ್ಡಿ ಇಂತಹದ್ದೊಂದು ವ್ಯವಸ್ಥೆಯ ಭಾಗವಾಗಿದ್ದವರು. ಧಾರ್ಮಿಕ ಒಲವಿಗಿಂತ ಹೆಚ್ಚಾಗಿ ಲೌಕಿಕ ಬದುಕಿನ ಲಾಭಗಳ ಆಮಿಷಕ್ಕೆ ಬಲಿಬಿದ್ದು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡಿದ್ದ ರಾಜಾರೆಡ್ಡಿ ಒಕ್ಕಲುತನದ ಜತೆ ಸಣ್ಣಪುಟ್ಟ ಗುತ್ತಿಗೆ ಮಾಡಿಕೊಂಡಿದ್ದರು.

ರಾಜಾರೆಡ್ಡಿ ಪ್ರಾಣ ಕಳೆದುಕೊಂಡಾಗ, ಅದಕ್ಕೆ ಕಾರಣವಾದ ಶತ್ರುವಿನ ತಲೆ ಉರುಳಿಬಿದ್ದ ನಂತರವೇ ವೈಎಸ್ಆರ್ ತಂದೆಯ ಹೆಣದ ಸಂಸ್ಕಾರ ನಡೆಸಿದ್ದು. ರಾಯಲಸೀಮೆಯ ಚುನಾವಣೆಯಲ್ಲಿನ ಅಕ್ರಮ ಉತ್ತರಪ್ರದೇಶ, ಬಿಹಾರಗಳನ್ನು ಮೀರಿಸಿದ್ದು. ಅನಿವಾರ್ಯವಾದರೆ ಚುನಾವಣೆಗಳನ್ನು ಮುಂದೂಡಲು ಬೇಕಾಗಬಹುದೆಂದು ಪಕ್ಷೇತರ ಅಭ್ಯರ್ಥಿಗಳನ್ನು ನಿಲ್ಲಿಸಿ ಕೊಲೆ ಮಾಡಿಸಿದ ಪ್ರಕರಣಗಳು ಅಲ್ಲಿ ನಡೆದಿವೆ. ಚುನಾವಣಾಧಿಕಾರಿಯೊಬ್ಬರನ್ನು ಮತಗಟ್ಟೆಯಿಂದ ಹೊರಗೆಳೆದು ಹೊಡೆದು ಸಾಯಿಸಿದ ಘಟನೆ ಕೆಲ ವರ್ಷಗಳ ಹಿಂದೆ ದೊಡ್ಡ ಸುದ್ದಿಯಾಗಿತ್ತು. ಈ 'ಪರಾಕ್ರಮ'ಗಳಿಂದಾಗಿಯೇ ವೈಎಸ್ಆರ್ 'ಕಡಪಾದ ಹುಲಿ' ಎಂಬ ಬಿರುದು ಗಳಿಸಿದ್ದೇ ವಿನಃ ತಮ್ಮ ಜನಕಲ್ಯಾಣ ಕಾರ್ಯಕ್ರಮಗಳಿಂದಲ್ಲ.

ವೈಎಸ್ಆರ್ ರಾಜಕೀಯ ಉತ್ಕರ್ಷಕ್ಕೆ ದೊಡ್ಡ ಕೊಡುಗೆ ನೀಡಿದ್ದು ಆಗಷ್ಟೇ ಕಡಪಾ ಸುತ್ತಮುತ್ತ ಪತ್ತೆಯಾದ ಬ್ಯಾರೈಟ್ ಎಂಬ ಖನಿಜ. ಕೇಳುವವರಿಲ್ಲದ ಈ ಖನಿಜ ಯಾವಾಗ ತೈಲ ಸಂಸ್ಕರಣೆಯಲ್ಲಿ ಬಳಕೆಯಾಗತೊಡಗಿತೋ ಅಲ್ಲಿಂದ ಅದು ಬಂಗಾರವಾಯಿತು. ವೈಎಸ್ಆರ್ ಅವರ ರಾಜಕೀಯ ಉತ್ಕರ್ಷದಲ್ಲಿ ಬ್ಯಾರೈಟ್ ಗಣಿಗಾರಿಕೆಯ ಪಾಲು ದೊಡ್ಡದು. ಈ ಗಣಿಗಾರಿಕೆಯಲ್ಲಿ ಏಕಸ್ವಾಮ್ಯ ಸ್ಥಾಪಿಸಲು ನಡೆದ ಸಂಘರ್ಷದಲ್ಲಿ ವೆಂಕಟಸುಬ್ಬಯ್ಯ ಎಂಬ ಗಣಿ ಮಾಲಿಕರು ಸೇರಿದಂತೆ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಇನ್ನು ಕೆಲವರು ಶಾಶ್ವತವಾಗಿ ಅಂಗವಿಕಲರಾಗಿ ಊರುಬಿಟ್ಟು ಓಡಿ ಹೋಗಿದ್ದಾರೆ. ತೆಲುಗುದೇಶಂ ಆಳ್ವಿಕೆಯ ಕಾಲದಲ್ಲಿ ವೈಎಸ್ಆರ್ ಬ್ಯಾರೈಟ್ ಗಣಿಗಾರಿಕೆಯ ಹಗರಣಗಳು ವಿಧಾನಸಭೆಯನ್ನು ರಣರಂಗವಾಗಿಸಿತ್ತು.

ಶಾಶ್ವತ ಭಿನ್ನಮತೀಯನೆಂದು ಪಕ್ಷದೊಳಗಡೆಯೇ ಅಪಖ್ಯಾತಿ ಪಡೆದಿದ್ದ ವೈಎಸ್ಆರ್ ತನ್ನ ರಾಜಕೀಯ ಶೈಲಿಯನ್ನು ಬಹುಶ: ಬದಲಾಯಿಸಿಕೊಂಡದ್ದು ಒಂದು ಕಾಲದ ಗೆಣೆಕಾರ ಚಂದ್ರಬಾಬು ನಾಯ್ಡು ಮುಖ್ಯಮಂತ್ರಿಯಾದ ನಂತರ. ಗ್ರಾಮೀಣ ಪ್ರದೇಶವನ್ನು ಮರೆತ ನಾಯ್ಡು ಅವರ ಅಭಿವೃದ್ಧಿ ಮಾದರಿಯ ದೋಷ ಏನೆಂಬುದು ವೈಎಸ್ಆರ್‌ಗೆ ಬಹುಬೇಗ ಗೊತ್ತಾಗಿತ್ತು. ಎಂತಹ ರಾಜಕೀಯ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಜನಸಂಪರ್ಕವನ್ನು ಕಡಿದುಕೊಳ್ಳದ ವೈಎಸ್ಆರ್‌ಗೆ ನಾಯ್ಡು ಅವರಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ದೊಡ್ಡ ಜನಸಮೂಹವೊಂದರ ಮುಖದಲ್ಲಿನ ಅತೃಪ್ತಿ, ಅಸಮಾಧಾನಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಲಿಲ್ಲ. ಅಲ್ಲಿಂದಲೇ ಅವರ ಪಾದಯಾತ್ರೆಯ ರಾಜಕೀಯ ಪ್ರಾರಂಭವಾಯಿತು. ರೈತರಿಗೆ ಉಚಿತ ವಿದ್ಯುತ್ ಮತ್ತು ನೀರಾವರಿಗೆ ಹೆಚ್ಚು ಹಣದ ವಾಗ್ದಾನಗಳ ಜತೆಯಲ್ಲಿ ಎರಡು ರೂಪಾಯಿಗೆ ಅಕ್ಕಿ ಕೊಡುವಂತಹ ಜನಪ್ರಿಯ ಕಾರ್ಯಕ್ರಮಗಳ ಭರವಸೆಗಳೆಲ್ಲವೂ ಅವರಿಂದ ಹೊರಬಿದ್ದದ್ದು ಈ ಪಾದಯಾತ್ರೆಯ ನಂತರ.

ಈ ಕಾಲದಲ್ಲಿಯೇ ಕಡಪಾದ 'ಹುಲಿ' ಕೇಳಿದ್ದೆಲ್ಲವನ್ನೂ ಕೊಡುವ 'ಕಾಮಧೇನು'ವಾಗಿ ಪರಿವರ್ತನೆಗೊಂಡದ್ದು..... ಅಧಿಕಾರದ ಎರಡನೇ ಅವಧಿಯಲ್ಲಿ ವೈಎಸ್ಆರ್ ಸಂಯಮ ಕಳೆದುಕೊಂಡಂತೆ ಕಾಣತೊಡಗಿದ್ದರು. ಮೊದಲ ಅವಧಿಯಲ್ಲಿ ವಿರೋಧಪಕ್ಷಗಳನ್ನು ನಿರ್ಲಕ್ಷಿಸುತ್ತಾ ಬಂದಿದ್ದ ಅವರು ಎರಡನೇ ಅವಧಿಯಲ್ಲಿ ಅದನ್ನು ನಿರ್ನಾಮ ಮಾಡಲು ಹೊರಟಿದ್ದರು. ಕರ್ನಾಟಕದಲ್ಲಿ 'ಆಪರೇಷನ್ ಕಮಲ'ದಂತೆ ಅಲ್ಲಿ 'ಆಪರೇಷನ್ ಹ್ಯಾಂಡ್' ಪ್ರಾರಂಭವಾಗಿತ್ತು. ಆಗಲೇ ತೆಲಂಗಾಣ ರಾಷ್ಟ್ರೀಯ ಸಮಿತಿ ಛಿದ್ರವಾಗಿತ್ತು. ಇತ್ತೀಚೆಗೆ ತೆಲುಗುದೇಶಂ ನಾಯಕರು ಸಾಮೂಹಿಕವಾಗಿ ಪಕ್ಷ ತೊರೆದು ಕಾಂಗ್ರೆಸ್ ಸೇರತೊಡಗಿದ್ದರು. ನಟ ಚಿರಂಜೀವಿಯವರ ಪ್ರಜಾರಾಜ್ಯಂ ಪಕ್ಷವನ್ನು ಕಾಂಗ್ರೆಸ್ ಜೊತೆ ವಿಲೀನಗೊಳಿಸುವ ಪ್ರಯತ್ನ ನಡೆದಿತ್ತು. ಇದೇ ವೇಳೆ ಮಗ ಜಗನ್‌ಮೋಹನ್ ರೆಡ್ಡಿಯನ್ನು ಲೋಕಸಭಾ ಚುನಾವಣೆಯಲ್ಲಿ ನಿಲ್ಲಿಸಿ ಗೆಲ್ಲಿಸುವ ಮೂಲಕ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡುವ ಪೂರ್ವತಯಾರಿಯನ್ನೂ ಅವರು ಮಾಡಿಮುಗಿಸಿದ್ದರು. ಇವ್ಯಾವುದೂ ಮುಂದಿನ ದಿನಗಳಲ್ಲಿ ವೈಎಸ್ಆರ್‌ಗೆ ಜನಪ್ರಿಯತೆಯನ್ನು ತಂದುಕೊಡುತ್ತಿರಲಿಲ್ಲ.

ಜನಪ್ರಿಯ ಕಾರ್ಯಕ್ರಮಗಳಿಂದಾಗಿ ವೈಎಸ್ಆರ್ ದಿಢೀರ್ ಜನಪ್ರಿಯತೆಯನ್ನು ಗಳಿಸಿಕೊಂಡದ್ದು ನಿಜ. ಅವರ ಸಾವಿನ ಸಂದರ್ಭದಲ್ಲಿನ ಜನರ ಪ್ರತಿಕ್ರಿಯೆಯೇ ಇದಕ್ಕೆ ಸಾಕ್ಷಿ. ಆದರೆ ಇದನ್ನು ಇನ್ನು ಐದು ವರ್ಷಗಳ ಕಾಲ ಉಳಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿತ್ತೇ? ಮುಂದೊಂದು ದಿನ ಆಂಧ್ರಪ್ರದೇಶದ ಜನತೆ ವೈ.ಎಸ್.ರಾಜಶೇಖರರೆಡ್ಡಿ ಎಂಬ ನಾಯಕನನ್ನು ನೆನಪು ಮಾಡಿಕೊಳ್ಳುವುದಿದ್ದರೆ ಯಾವ ಕಾರಣಗಳಿಗಾಗಿ?....

ಊಳಿಗಮಾನ್ಯ ವ್ಯವಸ್ಥೆಯಿಂದಲೇ ಬಂದಿದ್ದ ವೈಎಸ್ಆರ್ ಗೆ ಭೂ ಸುಧಾರಣೆಯಂತಹ ಸಾಮಾಜಿಕ ನ್ಯಾಯದ ಬಗ್ಗೆ ಗೊತ್ತಿಲ್ಲದೇ ಏನಿಲ್ಲ. ಪೊಲೀಸರ ಕೈಗೆ ಬಂದೂಕು ನೀಡಿ ನಕ್ಸಲೀಯರನ್ನು ಹೊಡೆದುಹಾಕುವ ಮೂಲಕವೇ ಅವರ ದಮನಕ್ಕೆ ಹೊರಟ ಅವರಿಗೆ, ನಕ್ಸಲೀಯರು ಎತ್ತುತ್ತಾ ಬಂದ ಭೂಮಿಯ ಅಸಮಾನ ಹಂಚಿಕೆಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಮನಸ್ಸಿರಲಿಲ್ಲವೆನ್ನುವುದೂ ನಿಜ. ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಲು ಹೊರಟ ಈ ಜನನಾಯಕ ತನ್ನ ಮಕ್ಕಳ ಭದ್ರತೆಯ ಬಗ್ಗೆಯೇ ಭಯಪಟ್ಟು ನೆರೆಯ ರಾಜ್ಯದಲ್ಲಿ ಆಶ್ರಯ ಕೇಳುವ ಮಟ್ಟಿಗೆ ರಾಜ್ಯವನ್ನು ಭಯಭೀತ ಸ್ಥಿತಿಗೆ ತಂದಿಟ್ಟದ್ದಕ್ಕೆ ಏನನ್ನೋಣ? ಜನಪ್ರಿಯತೆಯ ದೀಪದ ಕೆಳಗಿನ ಕತ್ತಲು ಎನ್ನಬಹುದೇ?

ದಿನೇಶ ಅಮೀನ್ ಮಟ್ಟು
'ಪ್ರಜಾವಾಣಿ'ಯ 'ಅನಾವರಣ'ದ ಆಯ್ದ ಭಾಗ.

ಸಾವಿಗೆ ಆಹ್ವಾನ : ನಾಯಕರು ಮತ್ತು ಅಮಾಯಕರು

ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರು ಹೆಲಿಕಾಪ್ಟರ್ ಅಪಘಾತದಲ್ಲಿ ದುರ್ಮರಣಕ್ಕೀಡಾದ ಸುದ್ದಿಯನ್ನು ಕೇಳಿ ಮತ್ತು ಮಾಧ್ಯಮಗಳಲ್ಲಿ ನೋಡಿ ಸಾವನ್ನು ಆಹ್ವಾನಿಸಿದ ಅಭಿಮಾನಿಗಳ ಸಂಖ್ಯೆ 344 ಎನ್ನುವ ವರದಿಯೊಂದು ಆಘಾತಕಾರಿಯಾದುದು.

ಪ್ರಭು, ಒಡೆಯ ಅಥವಾ ಸ್ವಾಮಿಗಾಗಿ ಪ್ರಾಣಾರ್ಪಣೆ ಮಾಡುವ ಪ್ರಾಚೀನ ಮತ್ತು ಮಧ್ಯಯುಗೀನ ಪ್ರಭುತ್ವದ ಅಥವಾ ಪಾಳೆಯಗಾರಿಕೆಯ ಸಮಾಜವೊಂದು ಪ್ರಜಾಪ್ರಭುತ್ವದ ಯುಗದಲ್ಲಿಯೂ ಪಳೆಯುಳಿಕೆಯಾಗಿ ಉಳಿದುಕೊಂಡು ಬಂದು ಜೀವಂತವಾಗಿರುವುದು ಆತಂಕದ ಸಂಗತಿ. ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಒಡೆಯನಿಗಾಗಿ ಪ್ರಾಣತ್ಯಾಗ ಮಾಡುವ, ಆತ್ಮಬಲಿದಾನದ ನಿದರ್ಶನಗಳು ಇತಿಹಾಸದಲ್ಲಿ ಕಾಣಸಿಗುತ್ತವೆ.

-ಬಿ.ಎ. ವಿವೇಕ ರೈ ರವರ ಪ್ರಜಾವಾಣಿ ಲೇಖನದ ಆಯ್ದ ಭಾಗ

ಆಂಧ್ರ : ರಾಜಕೀಯ ಪೈಪೋಟಿ

'ವೈ.ಎಸ್.ಆರ್ ಅವರ ಅಕಾಲಿಕ ಸಾವು ಅವರ ಅಧಿಕಾರದ ಅವಧಿಯ ಹಗರಣಗಳನ್ನು ಸದ್ಯಕ್ಕೆ ಮುಚ್ಚಿ ಹಾಕಿದೆ. ಅವರದು ರಕ್ತಸಿಕ್ತ ರಾಜಕೀಯ. ಅಷ್ಟೇ ಅಲ್ಲ ಅವರ ಆಡಳಿತ ಹಲವು ಹಗರಣಗಳ ಗಣಿ. ಅವರ ಆಪ್ತ ಉದ್ಯಮಿಗಳಿಗೆ ಅನುಕೂಲವಾಗಲೆಂದೇ ಹಲವು ರೀತಿಯ ವಿನಾಯ್ತಿಗಳನ್ನು ಸರ್ಕಾರ ಪ್ರಕಟಿಸಿದ್ದುದನ್ನು ವಿರೋಧಿ ನಾಯಕ ಚಂದ್ರ ಬಾಬು ನಾಯ್ಡು ಅವರು ಈಗಾಗಲೇ ಬಯಲು ಮಾಡಿದ್ದಾರೆ. ವೈಎಸ್ಆರ್ ಆಡಳಿತದ ಮೇಲೆ ಹಿಡಿತ ಸಾಧಿಸಿದ ಪಟ್ಟಭದ್ರರು ಇದೀಗ ಒಟ್ಟಾಗಿದ್ದು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಜಗನ್‌ಮೋಹನ್ ಅವರ ಬೆಂಬಲಕ್ಕೆ ನಿಂತಿದ್ದಾರೆ ಎನ್ನಲಾಗಿದೆ....'

'ಪ್ರಜಾವಾಣಿ' ಸಂಪಾದಕೀಯ

ಸಂಪಾದಕೀಯ

ಎಳೆಯ ಮನದೊಳಗೆ ವಿಷದ ಕಳೆ

ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನದ ಸುಮಾರು 300 ಪುಸ್ತಕಗಳನ್ನು ಸರ್ಕಾರಿ ಹಾಗೂ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳ ವಾಚನಾಲಯಕ್ಕೆ ಕಡ್ಡಾಯವಾಗಿ ಖರೀದಿಸಬೇಕೆಂಬ ರಾಜ್ಯ ಸರ್ಕಾರದ ನಿರ್ದೇಶನ ಅತ್ಯಂತ ಆಘಾತಕಾರಿಯಾಗಿದೆ. 'ರಾಷ್ಟ್ರೋತ್ಥಾನ'ವು ರಾಷ್ಟ್ರೀಯ ಸ್ವಯಂ ಸೇವಕ ಸಂಘಟನೆಯ ಸೈದ್ಧಾಂತಿಕ ಸಾಹಿತ್ಯ ಪ್ರಕಟಣೆಗೆಂದೇ ಪೂರ್ಣ ತೊಡಗಿರುವ ಸಂಸ್ಥೆಯಾಗಿದೆ. ಫ್ಯಾಸಿಸ್ಟ್ ಮಾದರಿಯ 'ಹಿಂದುತ್ವ'ದ ಕೋಮುವಾದಿ ಸಾಹಿತ್ಯ ಪ್ರಸಾರವೇ ಇದರ ಧ್ಯೇಯ. ಹೀಗಿರುವಾಗ ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಗ್ರತೆಯಂತಹ ಮೌಲ್ಯಗಳನ್ನು ಪ್ರತಿಪಾದಿಸುವ ಸಂವಿಧಾನದ ಅನುಸಾರ ಆಯ್ಕೆಯಾಗಿ ಅದನ್ನು ರಕ್ಷಿಸುವುದಾಗಿ ಪ್ರಮಾಣ ಮಾಡಿ ಬಂದ ಸರ್ಕಾರ ಇದಕ್ಕೆ ವ್ಯತಿರಿಕ್ತವಾಗಿರುವ ಸಂಸ್ಥೆಯಿಂದ ಸಾಹಿತ್ಯ ಖರೀದಿಸುವುದೇ ಅಕ್ಷಮ್ಯ ಅಪರಾಧ. ಅದೂ ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ! ಆದರೆ ಸಂಘ ಪರಿವಾರದ ಅಂಗವೇ ಆಗಿರುವ ಬಿಜೆಪಿ ಪಕ್ಷವು ಇಡೀ ಸರ್ಕಾರವನ್ನೇ, ಅದರ ಬಲವನ್ನು ಸಂಘ ಪರಿವಾರದ ಸಿದ್ಧಾಂತ ಮತ್ತು ಕಾರ್ಯಾಚರಣೆಗೆ ತೊಡಗಿಸುತ್ತಿರುವುದು ಗಂಭೀರ ಅಪಾಯವಾಗಿದೆ.

ಭಾರತದ ಮಹಾಚೇತನಗಳನ್ನು, ಪುಣ್ಯ ಪುರುಷರ ಪರಿಚಯಿಸುವ 'ಮಹತ್ಕಾರ್ಯ' ಕೈಗೊಂಡಿರುವ (ಹಾಗೆ ಹೇಳುವ) ಈ ಸಂಸ್ಥೆಯು 'ಭಾರತ-ಭಾರತಿ' ಪುಸ್ತಕ ಸಂಪದವೆಂಬ ಸುಮಾರು 510 ಕಿರುಹೊತ್ತಿಗೆಗಳನ್ನು ಸಿದ್ಧಪಡಿಸಿದೆ (1972-80) ಇದರಲ್ಲಿನ 300 ಪುಸ್ತಕಗಳನ್ನು ಸರ್ಕಾರದ ಆದೇಶದಂತೆ ಖರೀದಿಸಬೇಕಾಗುತ್ತದೆ. ಇದರಲ್ಲಿ ಸಂಘ ಪರಿವಾರದ ಅಧ್ವೈರ್ಯುಗಳಾದ ಸಾವರ್ಕರ್, ಗೋಲ್ವಾಳ್ಕರ್, ಹೆಡ್ಗೇವಾರ್, ಮುಂತಾದವರ ಪುಸ್ತಕಗಳಿವೆ. ದೇಶ ಕಟ್ಟುವ ಆದರ್ಶಗಳನ್ನು ತುಂಬಬೇಕಾದ ಎಳೆಯ ಮನಸ್ಸುಗಳಲ್ಲಿ ದೇಶ ವಿಭಜನೆಯ, ಕೋಮುದ್ವೇಷದ ವಿಷ ಕುಡಿಯಲು ಕೊಡುತ್ತಿರುವುದು ದ್ರೋಹದ ಕೆಲಸ. ಹಕ್ಕ-ಬುಕ್ಕ, ಕೃಷ್ಣದೇವರಾಯ, ನೃಪತುಂಗ, ಶಂಕರಾಚಾರ್ಯ, ಗುರುನಾನಕ್ ಅಥವಾ ಭಗತ್‌ಸಿಂಗ್, ಅಂಬೇಡ್ಕರ್ ಇಂತಹ ಐತಿಹಾಸಿಕ ಹಾಗೂ ಆಧುನಿಕ ರಾಷ್ಟ್ರ ನಾಯಕರ ಪುಸ್ತಕಗಳಲ್ಲಿಯೂ ಹಿಂದುತ್ವದ ವಿಭಜನಕಾರಿ ಧೋರಣೆಗಳನ್ನು ಸಂಘ ಪರಿವಾರದ ಕಾರ್ಯತಂತ್ರ ಅನುಸರಿಸಿ ಅತ್ಯಂತ ನಾಜೂಕು, ಚಾಣಾಕ್ಷತೆಯಿಂದ ಹೆಣೆಯಲಾಗಿದೆ. ಇವನ್ನು ಓದಿದವರಲ್ಲಿ ದೇಶಪ್ರೇಮ ಹುಟ್ಟುವದಕ್ಕಿಂತ ಬೆಳೆಯುವುದು ಜನಾಂಗ ದ್ವೇಷ, ಮತೀಯತೆ, ಜಾತಿ ಮನೋಭಾವ ಬೇದ, ಸನಾತನೀಯತೆ ಮತ್ತು ಮೌಢ್ಯತೆ, ಶೋಷಣಾ ವ್ಯವಸ್ಥೆಯ ಸಂರಕ್ಷಣೆ. ಇಲ್ಲಿ ನಮ್ಮ ನಾಡಿನ ವೈವಿಧ್ಯಮಯ ಬಹುಮುಖಿ ಸಂಸ್ಕೃತಿ, ಪರಂಪರೆ ಇತಿಹಾಸದ ಬಗೆಗಿನ ವಾಸ್ತವಿಕ - ವೈಜ್ಞಾನಿಕ ಅರಿವಿಗೆ ಬದಲಾಗಿ ವಿಕೃತ ವಿರೂಪದ ವ್ಯಾಖ್ಯಾನಗಳೇ ತುಂಬಿವೆ. ರಾಷ್ಟ್ರೋತ್ಥಾನದ ಈ ಸಾಹಿತ್ಯ, ಅದು ಪ್ರತಿಪಾದಿಸುವ ಮೌಲ್ಯಗಳು ಹಾಗೂ ಬಳಸುತ್ತಿರುವ ಭಾಷೆಯ ಬಗ್ಗೆ ರಾಷ್ಟ್ರಕವಿ ಕುವೆಂಪುರವರು ಹಲವು ಬಾರಿ ತೀಕ್ಷ್ಣವಾಗಿಯೇ ಟೀಕಿಸಿದ್ದಾರೆ. ಈ ಕಾರಣದಿಂದಲೂ ಅವರು 'ಪರಿವಾರ'ದಿಂದ ಸಾಕಷ್ಟು ಕಿರಿಕಿರಿ, ನೋವು ಅನುಭವಿಸಿದ್ದಾರೆ.



ಸಂಘ ಪರಿವಾರವು ತನ್ನ ಯೋಜಿತ ಗುರಿಸಾಧನೆಗೆ ಎಳೆಯ ಮಕ್ಕಳನ್ನೇ ಗುರಿಯಾಗಿರಿಸಿಕೊಂಡಿರುವುದು ಎಂದಿನಿಂದಲೂ ನಡೆದುಬಂದಿದೆ. ಆಟ, ಮನೋರಂಜನೆ ಹೆಸರಿನಲ್ಲಿ ಸಂಘದ ಶಾಖೆಗಳಿಗೆ ಮಕ್ಕಳನ್ನು ಸೆಳೆದು ಮನಸ್ಸು ಮಲಿನಗೊಳಿಸುವುದು ನಡೆದೇ ಇದೆ. ಇದರಂತೆ ಶಿಕ್ಷಣ ಹಾಗೂ ಸಾಮಾಜಿಕ ಸಂಸ್ಥೆಗಳನ್ನು ತಾನು ಆರಂಭಿಸಿ ಅದೇ ಕೆಲಸ ನಡೆಸುತ್ತಿದೆ. ವಿವಿಧ ರಾಜಕೀಯ ಸಂದರ್ಭಗಳಿಂದಾಗಿ ಅಧಿಕಾರಕ್ಕೆ ಬಿಜೆಪಿ ಬಂದಲ್ಲೆಲ್ಲಾ (ಹಲವಾರು ಕೋಮು ಗಲಭೆಗಳ ಬಳಿಕ) ಸರ್ಕಾರದ ಆಡಳಿತ ಯಂತ್ರ ಬಳಸಿ ತನ್ನ ಗುರಿಯನ್ನು ಸಾರ್ವತ್ರಿಕಗೊಳಿಸಲು ಯತ್ನಿಸುತ್ತಲೇ ಇರುತ್ತದೆ. ಒಟ್ಟಾರೆ ಶಿಕ್ಷಣ ಕ್ಷೇತ್ರ ಅದಕ್ಕೆ 'ಪ್ರಿಯ'ವಾದ ಕ್ಷೇತ್ರವಾಗಿದೆ. ಹೀಗಾಗಿಯೇ ಕೇಂದ್ರ ಅಥವಾ ರಾಜ್ಯದ ಯಾವುದೇ ಸರ್ಕಾರದಲ್ಲಿ ಕಟ್ಟರ್ ಆರ್.ಎಸ್.ಎಸ್ಸಿಗರನ್ನೇ ಶಿಕ್ಷಣ ಸಚಿವರನ್ನಾಗಿಸುತ್ತದೆ. ಈ ಮೂಲಕ ಪ್ರಧಾನವಾಗಿ ಸಂಘ ಪರಿವಾರದ ಕಾಲಾಳುಗಳನ್ನು ಎಲ್ಲೆಡೆ ಸ್ಥಾಪಿಸುವುದು ಮುಖ್ಯವಾಗಿ ಶಿಕ್ಷಣದ ಪಠ್ಯಕ್ರಮವನ್ನೇ ಸಂಘ ಪರಿವಾರದ ಕೋಮುವಾದೀ ಅಜೆಂಡಾಕ್ಕೆ ಬದಲಿಸುವುದು 'ಆದ್ಯ ಕರ್ತವ್ಯ'ವನ್ನಾಗಿ ಪರಿಗಣಿಸಿದೆ. ಜಾರಿಗೆ ಇಳಿದಿದೆ.

ಈಗಾಗಲೇ ಯಡಿಯೂರಪ್ಪನವರ ಸರ್ಕಾರ ಪಠ್ಯಪುಸ್ತಕಗಳ ಪುನರ್ ರಚನೆಗೆ ಚಾಲನೆ ನೀಡಿದೆ. (ಸಂಘ ಪರಿವಾರದ ಪಡೆ ಅದನ್ನಾಗಲೇ ಸಿದ್ಧಗೊಳಿಸಿಕೊಂಡು ಕುಳಿತಿದೆ) ಶಿಕ್ಷಕರ ತರಬೇತಿಯಲ್ಲಿ

ಪುಟ 7 ಕ್ಕೆ

ಬಾಬಾಬುಡನ್‌ಗಿರಿ ಗುಹೆಯ ದುರಸ್ತಿ :

ನ್ಯಾಯಾಲಯದ ತೀರ್ಪು ಉಲ್ಲಂಘಿಸಿದ ಸರ್ಕಾರ



ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ವಿಶೇಷವಾಗಿ ಚರ್ಚಿಸಿ ಮಹತ್ವದ ಯೋಜನೆಗಳನ್ನು ರೂಪಿಸಲೆಂದೇ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲಾಗಿದೆಯೆಂದು ಬಿಜೆಪಿ ಪಕ್ಷವು ಪೋಜು ನೀಡುತ್ತಿದ್ದರೆ, ಇನ್ನೊಂದೆಡೆ ಈ ಸಂಘ ಪರಿವಾರಿಗಳು ರಾಜ್ಯದಲ್ಲಿ ಕೋಮುವಾದಿ ಅಜೆಂಡಾವನ್ನು ಎಂದಿನಂತೆ ಜಾರಿಗೊಳಿಸಲು ತೊಡಗಿದ್ದಾರೆ, ಕಾನೂನು ಪರಂಪರೆಯನ್ನು ಉಲ್ಲಂಘಿಸುತ್ತಿದ್ದಾರೆ, ಅಲ್ಪಸಂಖ್ಯಾತರ ಮೇಲೆ ಧಾಳಿಯನ್ನು ಮುಂದುವರಿಸಿದ್ದಾರೆ.

ಬಾಬಾಬುಡನ್‌ಗಿರಿಯ ಗುಹೆಯ ಮೇಲ್ಛಾವಣಿ ಮಣ್ಣು ಕುಸಿದಿದ್ದು ಕಳೆದ ವರುಷದ ಇದೇ ಮಳೆಗಾಲದಲ್ಲಿ. ಅದನ್ನು ಪುನರ್ ನಿರ್ಮಾಣ ಮಾಡುವುದಾಗಿ ಯಡಿಯೂರಪ್ಪನವರ ಸರ್ಕಾರವೇನೋ ಹೇಳಿಕೊಂಡಿತು. ಹೈದ್ರಾಬಾದ್ ಇಂಜನಿಯರ್‌ಗಳಿಂದ ಯೋಜನೆಯನ್ನು ತಯಾರಿಸಲು ಒಂದಿಷ್ಟು ತಿಂಗಳು, ಕಾಮಗಾರಿ ಆರಂಭಿಸುವುದಾಗಿ ಹೇಳುತ್ತಾ ತಿಂಗಳು, ನಂತರ ಒತ್ತಡ ಹೆಚ್ಚಾದಾಗ ಒಂದಿಷ್ಟು ಕಾಮಗಾರಿ ಆರಂಭಿಸಿ ಮತ್ತೆ ನಿಲುಗಡೆ... ಹೀಗೆ ಇದೀಗ ಒಂದು ವರುಷವಾದರೂ ಕಾಮಗಾರಿ ಪೂರ್ಣಗೊಳ್ಳಲೇ ಇಲ್ಲ. ಈಗ ಕಾಮಗಾರಿಗಳಿಗೆ 'ಅಧಿಕೃತ' ಚಾಲನೆ ಕೊಡಲು ಪುನ: ಮುಂದಾಗಿದೆ.

ಇದೇ ಸಂದರ್ಭವನ್ನು ಬಳಸಿಕೊಂಡಿರುವ ಸಂಘ ಪರಿವಾರಿಗಳು ಕಾಮಗಾರಿಗಳಿಗೆ ಚಾಲನೆ ನೀಡುವ ನೆಪದಲ್ಲಿ ಗುಹೆಯ ಆವರಣದಲ್ಲಿ ದತ್ತಾತ್ರೇಯನ ವಿಗ್ರಹವನ್ನಿಟ್ಟು ಪೂಜೆ ಮಾಡುವ ಮೂಲಕ ಬಾಬಾಬುಡನ್‌ಗಿರಿಯ ಸೂಫಿ ಪರಂಪರೆಗೆ ಮತ್ತು ನ್ಯಾಯಾಲಯದ ತೀರ್ಪನ್ನು ರಾಜಾರೋಷವಾಗಿ ಉಲ್ಲಂಘಿಸಿ ಅಪಚಾರ ಎಸಗಿದ್ದಾರೆ. ಸ್ವತ: ಲೋಕೋಪಯೋಗಿ ಸಚಿವರಾದ ಈಶ್ವರಪ್ಪ, ಶಾಸಕ ಸಿ.ಟಿ.ರವಿ ಮುಂತಾದವರೇ ಈ ಸಂವಿಧಾನ ವಿರೋಧಿ ಕೃತ್ಯವನ್ನು ಎಸಗಿದ್ದಾರೆ. ಅಲ್ಲಿ ದತ್ತಪೀಠವನ್ನಾಗಿಸುವ ಸಂಕಲ್ಪ ತೊಟ್ಟಿದ್ದಾರೆ. ಇದೆಲ್ಲ ನಡೆದಿದ್ದು ಜಿಲ್ಲಾ ದಂಡಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ನಾರಾಯಣಸ್ವಾಮಿ ಮತ್ತಿತರೆ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲೇ. ಇವರೆಲ್ಲರೂ ಸಚಿವರ ಕಾನೂನುಬಾಹಿರ ಕೃತ್ಯಗಳಿಗೆ ಸಾಕ್ಷಿಯಾಗಿ ಅಪರಾಧವೆಸಗಿದ್ದಾರೆ.

ಬಾಬಾಬುಡನ್‌ಗಿರಿಯ ದರ್ಗಾ ಪೀಠದ ಸೌಹಾರ್ದತೆಯ ಸೂಫಿ ಪರಂಪರೆಯನ್ನು ನಾಶಗೊಳಿಸಿ ಅದನ್ನು ವೈದಿಕಶಾಹಿ ಸ್ವರೂಪಕ್ಕೆ ತೊಡಗಿಸಿ ವಿಕೃತಗೊಳಿಸಲು ಬಿಜೆಪಿ, ಬಜರಂಗದಳ, ವಿ.ಹಿಂ.ಪ. ಮುಂತಾದ ಸಂಘ ಪರಿವಾರದ ಪಡೆಗಳು ಸತತವಾಗಿ ಯತ್ನಿಸುತ್ತಾ ಬಂದಿವೆ. ಇದಕ್ಕೆ ಪ್ರಗತಿಪರ ಶಕ್ತಿಗಳ ಪ್ರಬಲ ಪ್ರತಿರೋಧವೂ ವ್ಯಕ್ತವಾಗುತ್ತಲೇ ಬಂದಿದೆ. ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳೂ ಸಂಘ ಪರಿವಾರದ ವಾದಗಳನ್ನು ತಿರಸ್ಕರಿಸಿ ಅಲ್ಲಿನ ವಿಶಿಷ್ಟ ಸಾಮರಸ್ಯದ ಪರಂಪರೆಯನ್ನು ಕಾಯ್ದಿವೆ ಮತ್ತು 1975 ರ ಹಿಂದಿನ ಆಚರಣೆಗಳಿಗೆ ಮಾತ್ರ ಅವಕಾಶ ಕಲ್ಪಿಸಿವೆ. ಆದ್ದರಿಂದ ದತ್ತ ವಿಗ್ರಹ, ಪೂಜೆ, ಯಜ್ಞ ಇತ್ಯಾದಿಯ ಹಿಂದೆ ಎಂದೂ ಇರದ ಆಚರಣೆಗಳು. ಹೀಗಾಗಿ ಅವು ನಿಷಿದ್ಧ. ಹೀಗಿರುವಾಗ ಇದರ ನಾಶಕ್ಕೆ ಕಟಿಬದ್ಧರಾಗಿರುವ ಚೆಡ್ಡಿಪಡೆಯ ಆಣತಿಯಂತೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವುದನ್ನು ಬಳಸಿ ನಿರ್ದೇಶನ ಉಲ್ಲಂಘಿಸಿರುವುದು ಖಂಡನೀಯ. ಹೀಗೆ ಇದೇ ಚೆಡ್ಡಿಪಡೆ ನಾಳೆ ಗುಹೆಯ ಕಾಮಗಾರಿ ಪೂರ್ಣವಾದ ಬಳಿಕ ಯಾವುದೋ ಮಾರ್ಗದಲ್ಲಿ ದತ್ತವಿಗ್ರಹ ಸ್ಥಾಪಿಸಿಬಿಡುವ ಹುನ್ನಾರ ಇಲ್ಲದಿಲ್ಲ.

ಆದ್ದರಿಂದ ಗುಹೆಯಲ್ಲಿ ಪರಂಪರೆಯನ್ನು ವಿಕೃತಗೊಳಿಸುವ ಮತ್ತು ನ್ಯಾಯಾಲಯದ ತೀರ್ಪನ್ನು ಬಹಿರಂಗವಾಗಿ ಉಲ್ಲಂಘಿಸಿದ ಸಚಿವ ಶಾಸಕ ಹಾಗೂ ಅಧಿಕಾರಿಗಳ ಮೇಲೆ ಕಾನೂನಾತ್ಮಕ ಕಠಿಣ ಕ್ರಮಗಳನ್ನು ಜರುಗಿಸಬೇಕು. ಅಧಿಕಾರದ ಮದದಿಂದ ಏನು ಮಾಡಿದರೂ ನಡೆದೀತು ಎಂಬ ಭಂಡತನ ಮತ್ತು ದುಷ್ಟಯೋಜನೆಗಳನ್ನು ಮಟ್ಟಹಾಕಬೇಕು. ತೀರ್ಪಿನ ಜಾರಿಗಾಗಿ ಕೂಡಲೇ ನ್ಯಾಯಾಲಯದ ಕ್ರಮ ಕೈಗೊಳ್ಳಬೇಕು.

ರಾಜ್ಯದಲ್ಲಿ ಸಂವಿಧಾನ, ಕಾನೂನು, ಸಾಮರಸ್ಯ ಕಾಪಾಡುವುದಾಗಿ ಸಂವಿಧಾನದ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿಗಳ ಮುಂದೆ ಈ ಸವಾಲಿದೆ. ಇಲ್ಲಿಯವರೆಗೂ ಈ ಬಗ್ಗೆ ಏನೂ ಮಾತನಾಡಲಾರದ ಯಡಿಯೂರಪ್ಪನವರು ತಾವು ಸಾಂವಿಧಾನಾತ್ಮಕ ಹೊಣೆಯುಳ್ಳ ಮುಖ್ಯಮಂತ್ರಿ ಎಂಬುದನ್ನೇ ಮರೆತಂದಿದೆ. ಈ ಧೋರಣೆಯನ್ನು, ಪರಿವಾರದ ಕೃತ್ಯಗಳನ್ನು ಪ್ರತಿಭಟಿಸಲೇಬೇಕು.

ಹೆಬ್ಬುಗೋಡಿ ಚರ್ಚ್ ಮೇಲೆ ಧಾಳಿ

ಬೆಂಗಳೂರಿನ ಹೊಸೂರು ರಸ್ತೆಯ ಹೆಬ್ಬುಗೋಡಿಯಲ್ಲಿರುವ ಸೇಂಟ್ ಫ್ರಾನ್ಸಿಸ್ ಡಿ ಸೆಲ್ಸ್ ಚರ್ಚ್ ಮೇಲೆ ಇದೇ ಗುರುವಾರ ಬೆಳಿಗ್ಗೆ ಧಾಳಿ ನಡೆದಿದೆ. ಅಲ್ಲಿನ ಏಸು, ಮಾತೆ ಮೇರಿ, ಮರಿಯಾ ಮ್ಯಾಗ್ದಲೀನ್ ವಿಗ್ರಹಗಳನ್ನು ಧ್ವಂಸಗೊಳಿಸಲಾಗಿದೆ ಹಾಗೂ ಕಿಟಕಿ ಗಾಜು ಇತರೆ ಆಸ್ತಿಗೂ ಹಾನಿ ಮಾಡಲಾಗಿದೆ.

ಮತಾಂತರದ ವಿವಾದವನ್ನೆತ್ತಿ ಈ ಹಿಂದೆ ರಾಜ್ಯದಲ್ಲಿ ಅನೇಕ ಚರ್ಚ್‌ಗಳು ಹಾಗೂ ಕ್ರಿಶ್ಚಿಯನ್ನರ

ಪುಟ 4ಕ್ಕೆ

ಬಾಬಾಬುಡನ್‌ಗಿರಿ ಗುಹೆಯ ದುರಸ್ತಿ ...

ಪುಟ 3 ರಿಂದ

ಮೇಲೆ ಧಾಳಿಯನ್ನು ಸಂಘ ಪರಿವಾರವೇ ನಡೆಸಿತ್ತು. ಅದನ್ನು ಸಮರ್ಥಿಸಿಕೊಂಡಿತ್ತು. ಇದಕ್ಕೆ ರಾಜ್ಯದ ಬಿಜೆಪಿಯ ಸರ್ಕಾರವೂ ರಾಜಾರೋಷವಾಗಿ ವಿತಂಡವಾದಗಳ ಮೂಲಕ ಅಭಯ ಹಸ್ತವನ್ನು ನೀಡಿತ್ತು. ತೀವ್ರ ಪ್ರತಿಭಟನೆ, ಒತ್ತಡಗಳ ಬಳಿಕ ನ್ಯಾಯಮೂರ್ತಿ ಸೋಮಶೇಖರ ವಿಚಾರಣಾ ಆಯೋಗವನ್ನು ರಚಿಸಿ ಕೈ ತೊಳೆದುಕೊಂಡಿತ್ತು. ಈ ಆಯೋಗ ಧಾಳಿಗೊಳಗಾದವರಿಗೆ ಸಾಂತ್ವನ ಅಥವಾ ಪರಿಹಾರ ನೀಡುವ ಬದಲು ತನ್ನ ಈ ಆಯೋಗವು



'ಕಾನೂನುಬದ್ಧ' ರೀತಿಯಲ್ಲಿ ಸಾಕಷ್ಟು ಮಾನಸಿಕ ಕಿರುಕುಳ ಮತ್ತು ಹಾನಿಗೊಳಗಾದವರನ್ನೇ ಆರೋಪಿಗಳನ್ನಾಗಿಸಲು ನಡೆದಿರುವ ಸತತ ಪ್ರಯತ್ನಗಳೂ ಜನಜನಿತವೇ.

ಅಲ್ಪಕಾಲ 'ಇಲ್ಲ'ವಾಗಿದ್ದ ಇಂತಹ ಧಾಳಿ ಮತ್ತೆ ಈಗ ನಡೆದಿದೆ. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಈ ವಾರದಲ್ಲೇ ಕರ್ನಾಟಕದ ಮಾನ್ಯ ರಾಜ್ಯಪಾಲರಾದ ಶ್ರೀ ಹೆಚ್.ಆರ್.ಭಾರದ್ವಾಜ್‌ರವರು ರಾಜ್ಯದ 'ಕೆಲವು' ಜಿಲ್ಲೆಗಳಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿರುವುದನ್ನು ಸಾರ್ವಜನಿಕವಾಗಿಯೇ ಟೀಕಿಸಿದ್ದರು. ದಕ್ಷಿಣ ಕನ್ನಡ, ಮೈಸೂರು, ದಾವಣಗೆರೆ, ಚಿಕ್ಕಮಗಳೂರು ಹೀಗೆ ಹಲವಾರು ಜಿಲ್ಲೆಗಳಲ್ಲಿ ಸಂಘ ಪರಿವಾರದ ಗೂಂಡಾಪಡೆ ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ದಾಂಧಲೆ, ಧಾಳಿಗಳು ಮತ್ತು ರಾಜ್ಯಸರ್ಕಾರದ ಆಡಳಿತ ಯಂತ್ರದ ರಕ್ಷಣೆ ಪ್ರಸಂಗಗಳು ರಾಜ್ಯಪಾಲರ ಮಾತನ್ನು ಸಮರ್ಥಿಸಿವೆ. ಇಂತಹ ನಿರಂತರ ಘಟನೆಗಳಿಂದ ಜನಸಾಮಾನ್ಯರಲ್ಲಿನ ಭೀತಿ, ಅಶಾಂತಿಯ ವಾತಾವರಣವು ರಾಜ್ಯಪಾಲರನ್ನು ಹೀಗೆ ಮಾತನಾಡಿಸಿರಲೂ ಬಹುದು. ಆದರೆ ಅವರ ಟೀಕೆಯನ್ನು ಪರಿಶೀಲನಾತ್ಮಕವಾಗಿ, ಸ್ವಯಂ ವಿಮರ್ಶೆಗೆ ಒಳಪಡಿಸದೇ ಯಡಿಯೂರಪ್ಪ ಹಾಗೂ ಸಂಪುಟದ ಕೆಲವು ಸಚಿವರು, ಬಿಜೆಪಿ ನಾಯಕರೂ ಸೌಜನ್ಯ ಮೀರಿ ಟೀಕಿಸಿದ್ದಾರೆ. ರಾಜಕೀಯ ದುರುದ್ದೇಶವನ್ನು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿಯೂ ವಿಧಾನಸಭಾ ಅಧಿವೇಶನ ನಡೆದಿರುವುದು ಇನ್ನೊಂದು. ಚರ್ಚ್ ಮೇಲಿನ ಈ ಧಾಳಿಯು ರಾಜ್ಯಪಾಲರ ವಿಮರ್ಶೆಗೆ ಸಂಘ ಪರಿವಾರವು ಸೊಪ್ಪು ಹಾಕುವುದಿಲ್ಲ ಎಂಬ ಧಮಕಿಯನ್ನು ಪರೋಕ್ಷವಾಗಿ ನೀಡಿದಂತಿದೆ ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ದಾಳಿಗಳು ನಡೆಸುತ್ತಿರುವಾಗಲೇ ಕ್ರಿಶ್ಚಿಯನ್ ಅಲ್ಪಸಂಖ್ಯಾತರನ್ನು ಬಿಟ್ಟಿಲ್ಲ ಎಂದು ಘೋಷಿಸಿದೆ.

ಹೆಬ್ಬುಗೋಡಿ ಚರ್ಚ್‌ನ ಮೇಲಿನ ಧಾಳಿಯು ಸಂಘ ಪರಿವಾರದ ಬಿಜೆಪಿಯ ಯೋಜಿತ ಕೃತಿ ಎಂಬುದರಲ್ಲಿ ಅನುಮಾನವಿಲ್ಲ. ಇಂತಹ ಧಾಳಿಗಳು ಹಿಂದೆಲ್ಲಾ ನಡೆದಾಗ 'ದುಷ್ಕರ್ಮಿ'ಗಳ ಮೇಲೆ ಸರ್ಕಾರ ಕಠಿಣ ಕ್ರಮ ವಹಿಸಿದ್ದರೆ ಮರುಕಳಿಸುತ್ತಿರಲಿಲ್ಲ. ಸಂಸತ್ ಚುನಾವಣೆಗಳಲ್ಲಿ ಸೋತ ಬಳಿಕವೂ ಹಿಂದುತ್ವದ ಕೋಮುವಾದಿ ಅಜೆಂಡಾಕ್ಕೆ ಬಿಜೆಪಿ ಬದ್ಧವಾಗಿರಲು ಪುನರುಚ್ಚರಿಸಿದೆ. ಅದರಂತೆ ಆಡಳಿತ ಯಂತ್ರವನ್ನು ಈ ಸರ್ಕಾರ ಬಳಸುತ್ತಿರುವುದು ಅಪಾಯಕಾರಿಯಾಗಿದೆ.

ಚರ್ಚ್‌ನ ಮೇಲಿನ ಧಾಳಿಯ ಬಗ್ಗೆ 'ದಿಗ್ಭ್ರ... ಹೇಳಿರುವ ಮುಖ್ಯಮಂತ್ರಿ ಯಡಿಯೂರಪ್ಪನವ... ದುಷ್ಕರ್ಮಿಗಳನ್ನು ಪತ್ತೆಹಚ್ಚಲು, ಕಂಡಲ್ಲಿ ಗುಂ... ಹಾರಿಸಲು ಪೊಲೀಸರಿಗೆ ಸೂಚಿಸಿದ್ದಾರೆ. ಕಂಡ... ತಾನೇ ಗುಂಡು ಹಾರಿಸುವುದು? ಇಂತಹ ಬೊ... ಮಾತು ಬಿಟ್ಟು ಸರ್ಕಾರ ಕಾರ್ಯಪ್ರವೃತ್ತವಾಗಬೇಕಿ...

ಇ.ಎಂ.ಎಸ್. ಭವನ ನವೆಂಬರ್ 7 ಕ್ಕೆ ಉದ್ಘಾಟನೆ

ತ್ವರಿತ ನಿಧಿ ಸಂಗ್ರಹಕ್ಕೆ ಕರೆ

ಇದೊಂದು ಸಂತಸದ ಸುದ್ದಿ. ಮನುಕುಲದ ಮುನ್ನಡೆಯ ಮಹಾನ್ ಹೆಜ್ಜೆಯಾದ ಅಕ್ಟೋಬರ್ ಕ್ರಾಂತಿ ದಿನಾಚರಣೆಯಂದು ಅಂದರೆ ನವೆಂಬರ್ 7, 2009 ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯಲ್ಲಿ ಎ.ಕೆ.ಗೋಪಾಲನ್ ಸ್ಮಾರಕ ಸಾಮಾಜಿಕ ಶೈಕ್ಷಣಿಕ ಟ್ರಸ್ಟ್ ನಿರ್ಮಿಸುತ್ತಿರುವ ಇ.ಎಂ.ಎಸ್.ಭವನ'ದ ಉದ್ಘಾಟನೆಯಾಗಲಿದೆ.

ಅಂತಿಮ ಹಂತದ ಕೆಲಸ ಕಾರ್ಯಗಳು ವೇಗವಾಗಿ ನಡೆಯುತ್ತಿವೆ. ಈಗಿನ ಹಂತದಿಂದ ಕಟ್ಟಡವು ಪೂರ್ಣಗೊಳ್ಳಲು ಕನಿಷ್ಟ ಇನ್ನೂ 40 ಲಕ್ಷ ಅಗತ್ಯವೆಂದು ಅಂದಾಜು ಮಾಡಲಾಗಿದೆ. ಇನ್ನೂ 3... ಲಕ್ಷ ಸಂಗ್ರಹವಾಗಬೇಕಿದೆ. ಸಂಗಾತಿಗಳು, ಜನಪರ ಚಳುವಳಿ ಹಿತೈಷಿಗಳು ಉದಾರವಾದ ನೆರವನ್ನು ನೀಡಬೇಕೆಂದು ಹಾಗೂ ಸಂಗ್ರಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಕಾಮ್ರೇಡ್ ಹೋಳೂರು ಶಂಕರ್ ಕುಟುಂಬ ಸಹಾಯ ನಿಧಿಗೆ ಕೊಡುಗೆ ನೀಡಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಮುಖಂಡರು, ರೈತ ಆಂದೋಲನದ ಮುಂಚೂಣಿ ಸಂಗಾತಿಯಾಗಿದ್ದ ಕಾಂ.ಹೋಳೂರು ಶಂಕರ್ ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಜನಪರ ಆಂದೋಲನದ ಪೂರ್ಣಾವಧಿ ಕಾರ್ಯಕರ್ತರಾಗಿ ತಮ್ಮನ್ನು ತಾವು ಚಳುವಳಿಗೆ ಸಮರ್ಪಿಸಿಕೊಂಡಿದ್ದ ಶಂಕರ್ ಅವರ ಕುಟುಂಬಕ್ಕೆ ಇದೀಗ ಜನಪರ ಚಳುವಳಿಯ ಆಸರೆ ಅಗತ್ಯವಾಗಿದೆ.

ಕಾಂ.ಹೋಳೂರು ಶಂಕರ್ ಕುಟುಂಬ ಪರಿಹಾರ ನಿಧಿಗೆ ಉದಾರವಾಗಿ ಕೊಡುಗೆ ನೀಡಲು ಈ ಮೂಲಕ ವಿನಂತಿಸಲಾಗಿದೆ.

ಯಡಿಯೂರಪ್ಪ ವಿಲ್ ಬರೆಸುತ್ತಿದ್ದಾರಂತೆ

ಕ್ಯಾತೆ

ಶ್ರೀ

'ಏನಯ್ಯ ಕವಿವರ್ಯ, ಏನು ಕೆತ್ತುತ್ತಿದ್ದೀಯ'?
'ನೋಡಯ್ಯ ಇದು ದಿನಕರ ದೇಸಾಯಿಯವರ ಜನ್ಮ ಶತಾಬ್ದಿ ವರ್ಷ ಅಂತೆ'
'ಹೌದು ಅದಕ್ಕೇನೀಗ'
'ಏನಿಲ್ಲ ಅವರ ನೆನಪಿಗೆ ಕೆಲವು ಚೌಪದಿಗಳನ್ನು ಬರೆದಿದ್ದೇನೆ.'
'ಯಾರ್ಯಾರನ್ನೋ ಅನುಸರಿಸಿ ಏನೇನೋ ಬರೆದೆ. ಇನ್ನು ಇವರೊಬ್ಬರು ಬಾಕಿ ಇದ್ದರು ನಿನ್ನ ಕೈಲಿ ಸಿಕ್ಕಾಕ್ಕೋಳೋಕೆ.'
'ಮೊದಲು ನಾನು ಬರೆದಿರೋದನ್ನು ಓದಿ ಆಮೇಲೆ ಮಾತಾಡು. ಓದೋಕೆ ಮುಂಚೆ ಪುಸ್ತಕ ನಿಷೇಧ ಮಾಡೋ ಮೋದಿ ಥರ ಆಡಬೇಡ?
'ಸರಿ ಅದೇನು ಬರೆದಿದಿಯೋ ವದರಪ್ಪ?

ಹಾಕಬೇಡಿ ಬುರ್ಖಾ,
ಎಂದು ಇವರ ತರ್ಕ,
ಹಾಕಿರೆಲ್ಲ ಚೆಡ್ಡಿ,
ಎನ್ನುತಿಹರು ಯೆಡ್ಡಿ.

'ಅಯ್ಯಾ ಕವಿಪುಂಗವ,
ಬರೆದು ಇಂಥ ಚುಟುಕ,
ಆಗಬೇಡ ಕಟುಕ.
ಕೊರೆಯ ಬೇಡ ಹೀಗೆ,
ಭೈರಿಗೆಯ ಹಾಗೆ.

' ಎಲಾ, ಎಲಾ , ಕ್ಯಾತೆ, ಅದಕ್ಕೇ ನಿನ್ನನ್ನು ಕ್ಯಾತೆ ಅನ್ನೋದು. ನಾನು ಬರೆದಿರೋದನ್ನು ಹೇಳಲೋ ಇಲ್ಲಾ....,'
' ಏ ಹೇಳಪ್ಪಾ...., ನಿನ್ನ ಸ್ಫೂರ್ತಿಯಿಂದ ನಾನೂ ಹಾಗೇ ಒಂದು ವಗೆದೆ ಅಷ್ಟೇ'
'ಸರಿ ಕೇಳು'

ನರಹಂತಕ ಮೋದಿ ಗುಜರಾತು,
ಅದೆಷ್ಟು ಹೆಣಗಳು ಹೋಗಿವೆ ಹೂತು'.

ಜನಗಳ ನಡುವೆ ಹಚ್ಚಿ ಬೆಂಕಿ ದ್ವೇಷ,
ಸುಡುತ್ತಿರುವ ಈ ಬಿಜೇಪಿ ಆದರ್ಶ ಪುರುಷ.
ಬಿಜೇಪಿಯಲ್ಲಿ ಇದ್ದರೂ ಮೂವತ್ತು ವರುಷ,
ಜಸ್ವಂತ ಸಿಂಗನ ಓಡಿಸಲು ಒಂದೇ ನಿಮಿಷ.

ಚರ್ಚೆ ವಿಚಾರಣೆ ಇಲ್ಲದೇ
ಮಾಡಿದರು ಫತ್ವಾ,
ಅಚ್ಚರಿಯೇನಿದೆ ಇದೇ
ಬಿಜೇಪಿಗಳ ತತ್ವ.

"ಓಹೋ ಇಷ್ಟೇನೋ ಇನ್ನೂ ಇದೆಯೋ "
'ಇನ್ನೊಂದಿದೆ ಕೇಳು?

ಸಂಘದ ಚಡ್ಡಿ ಪುಸ್ತಕಗಳನ್ನೇ ಕೊಳ್ಳಿ,
ಎಂದು ವಿದ್ಯಾಭ್ಯಾಸಕ್ಕೇ ಇಡುತ್ತಿದೆ ಕೊಳ್ಳಿ,
ಮಕ್ಕಳಿಗೆ ಕೋಮು ವಿಷ ಉಣಿಸುವ ಹುನ್ನಾರ,
ಮಾಡುತ್ತಿದೆ ಈ ಬಿಜೇಪಿ ಸರಕಾರ.

'ಅಲ್ಲಪಾ ಕವಿವರ್ಯ, ನಿನ್ನ ಕವಿತೆ ರಾಜ್ಯಗೀತೆ ಆಗಬೇಕೂ ಅಂತ ಏನೇನೋ ಬರೀತಿದ್ದೋನ... ಈಗ ಬಿಜೇಪಿ ಬಗ್ಗೆ ಹೀಗೆ ಬರೆದರೆ,

ಇಂಥ ಪದ್ಯ ಬರೆದರೆ,
ಹಾಕುವರು ನಿನಗೆ ಬರೆ.
ಆದರೆ ನೀನು ಹೊಗಳು ಭಟ್ಟ.
ಸಿಗುವುದು ನಿನಗೆ ಪಟ್ಟ.

' ಏ ಹಾಗಾದರೆ ಇವುನ್ನೆಲ್ಲ ಬಿಟ್ಟು, ಇದೊಂದನ್ನು ಸರಕಾರಕ್ಕೆ ಕೊಡ್ತೀನಿ'
'ಯಾವುದು'?

ಆಗುವ ಮೊದಲೇ ರೆಡ್ಡಿಯ ಸಂಸ್ಕಾರ,
ಆಂಧ್ರದಿ ಅಧಿಕಾರ ದಾಹದ ಚೀತ್ಕಾರ,
ಕಾಂಗ್ರೇಸ್ ನಲ್ಲಿದು ಸಾಮಾನ್ಯ ಬಿಡಿ,
ಅಧಿಕಾರಕ್ಕಾಗಿ ಇವರು ಯಾವುದಕ್ಕೂ ರೆಡಿ.

' ಕಾಂಗ್ರೇಸ್ ಗೂ ಬಿಜೇಪಿಗೂ ವ್ಯತ್ಯಾಸ ಏನಿ... ಬಿಡು, ಆಗಲೇ ಯಡಿಯೂರಪ್ಪ ವಿಲ್ ಬರೆಸುತ್ತಿದ್ದಾರಂತೆ'



ಮಂಗಳೂರು

ಸರ್ಕಾರಿ ಆಸ್ಪತ್ರೆಗೆ ಸಾವಿನ ಷರಾ

ಸಂಜಯ

150 ವರ್ಷಗಳ ಇತಿಹಾಸವಿರುವ ಮಂಗಳೂರಿನ ನ್‌ಲಾಕ್ ಸರಕಾರಿ ಆಸ್ಪತ್ರೆ ಆರೋಗ್ಯದ ಮಸ್ಯೆಗಳಿಗೆ ತನ್ನನ್ನೇ ಆಶ್ರಯಿಸಿಕೊಂಡಿದ್ದ ಬಡವರನ್ನು ಕಾಪಿಕಿ ಹೊರದಬ್ಬಿದೆ. ಆ ಮೂಲಕ ಗತೀಕರಣದ ಯುಗದಲ್ಲಿ ಸರಕಾರದ ತಿಗಳಿಂದಾಗಿಯೇ ಬಡವರಾಗಿರುವ ಸಹಾಯಕರಿಗೆ ಬದುಕುವ ಹಕ್ಕಿಲ್ಲ ಎಂದು ಸಾರಿ ಳಿದೆ. ಬಡವರ ಅಸಹಾಯಕತೆ, ಹತಾಶೆಯನ್ನು ಷ್ಟು ಹೆಚ್ಚಿಸಿದೆ.

ಇದು ಅಧಿಕೃತವಾಗಿ ಘೋಷಣೆಯಾದದ್ದು ಗಸ್ಟ್ 17 ರಂದು ವೆನ್‌ಲಾಕ್‌ನ ಅಧೀಕ್ಷಕರು ರಡಿಸಿದ ಸುತ್ತೋಲೆಯಲ್ಲಾದರೂ ಇದರ ಪ್ರಕ್ರಿಯೆ ರಂಭವಾಗಿ ವರ್ಷಗಳೇ ಕಳೆದಿವೆ. ಎಲ್ಲವನ್ನೂ ರಾಟದ ಸರಕನ್ನಾಗಿ ಕಾಣುವ ಜಾಗತೀಕರಣದ ಪೀಠಕ್ಕೆ ಈ ದೇಶವನ್ನು ಒಪ್ಪಿಸಿದ ನಂತರ ಜನತೆ ದುಕೊಳ್ಳುತ್ತಿರುವ ತಮ್ಮ ಮೂಲಭೂತ ಹಕ್ಕುಗಳಲ್ಲಿ ರೋಗ್ಯವೂ ಒಂದಷ್ಟೇ. ಖಾಸಗೀ ಆಸ್ಪತ್ರೆಗಳ, ದ್ಯಕೀಯ ಕಾಲೇಜುಗಳ ಸಂತೆಯಾದ ಅವಿಭಜಿತ ಣ ಕನ್ನಡ ಜಿಲ್ಲೆಯಲ್ಲಿ ವೈದ್ಯಕೀಯ ವ್ಯಾಪಾರಿಗಳ ಕದೃಷ್ಟಿ ಜಿಲ್ಲೆಯ ಹೆಮ್ಮೆಯ ವೆನ್‌ಲಾಕ್ ಆಸ್ಪತ್ರೆಯ ಲೆ ದಶಕದ ಹಿಂದೆಯೇ ಬಿದ್ದಿತ್ತು.


ದೂವರೆ ಶತಮಾನಗಳ ಹಿಂದೆ...

150 ವರ್ಷಗಳ ಹಿಂದೆ ನಮ್ಮನ್ನಾಳುತ್ತಿದ್ದ ಟೀಷ್ ಆಳರಸರು ಈ ಭಾಗದಲ್ಲಿ ವೆನ್‌ಲಾಕ್ ತ್ರೆಯನ್ನು ಆರಂಭಿಸಿದ್ದರು. ಅಂದಿನಿಂದ ಣಕನ್ನಡ ಮಾತ್ರವಲ್ಲದೆ ಉಡುಪಿ, ಕೊಡಗು, ಕ್ಕಮಗಳೂರು, ಶಿವಮೊಗ್ಗ, ಹಾಸನ, ಸರಗೋಡು ಹೀಗೆ ಐದಾರು ಜಿಲ್ಲೆಗಳ ಬಡವರು ಮ್ಮ ಆರೋಗ್ಯದ ಸಮಸ್ಯೆಗಳಿಗೆ ವೆನ್‌ಲಾಕನ್ನು ಶ್ರಯಿಸುತ್ತಾ ಬಂದಿದ್ದಾರೆ. ವೈದ್ಯರು, ಸಿಬ್ಬಂದಿಗಳ ರ್ಜ, ಭ್ರಷ್ಟಾಚಾರ, ಅನಾದರ ಎಲ್ಲವೂ ಚಿತವಾಗಿದ್ದರೂ ದುಬಾರಿ ಔಷಧಿ, ಶಸ್ತ್ರಚಿಕಿತ್ಸಾ ಧನಗಳನ್ನು ತಾವು ಹೊರಗಿನಿಂದಲೇ ಖರೀದಿ ಡಬೇಕಾದ ಪರಿಸ್ಥಿತಿ ಮೊದಲಾದ ಕೊರತೆಗಳ ನ್ನೆಯೂ ಈ ಭಾಗದ ಬಡವರಿಗೆ ವೆನ್‌ಲಾಕ್ ಜೀವಿನಿಯಾಗಿತ್ತು. ಕಳೆದೆರಡು ದಶಕಗಳಿಂದ ಲ್ಲೆಯಲ್ಲಿ ದಿನಸಿ ಅಂಗಡಿಗಳಂತೆ ತಲೆಯೆತ್ತಿರುವ ಸಗಿ ಆಸ್ಪತ್ರೆಗಳು ತಮ್ಮ ಹೈಟೆಕ್, 'ಆಕರ್ಷಕ' ತ್ಸಾ ವಿಧಾನಗಳು, ವೈದ್ಯಕೀಯ ತಂತ್ರಗಳಿಂದ ಗಿಡುತ್ತಿವೆ. ವೆನ್‌ಲಾಕ್‌ನಂತಹ ಸರಕಾರಿ ತ್ರೆಗಳ ಅವ್ಯವಸ್ಥೆ, ಖಾಸಗಿ ಆಸ್ಪತ್ರೆಗಳ ನವಿರೇಳಿಸುವ' ಸುವ್ಯವಸ್ಥೆ, ವೆನ್‌ಲಾಕ್‌ನಲ್ಲಿ ಡಿಯುವ ವೈದ್ಯರ ಖಾಸಗಿ ಆಸ್ಪತ್ರೆಗಳ ಹದಿಂದಾಗಿ ಅಲ್ಪಸ್ವಲ್ಪ ಸಾಲ ಮಾಡಲು ಥ್ಯತೆಯಿರುವ ಬಡವರು ಸಹ ಖಾಸಗಿ ತ್ರೆಗಳನ್ನೇ ಅವಲಂಬಿಸುತ್ತಿರುವುದು ಈ ಭಾಗದಲ್ಲಿ ಮಾನ್ಯ. ತೀರಾ ಬಡತನದಲ್ಲಿರುವ ಖಾಸಗಿ ತ್ರೆಗಳಿಗೆ ತೆರಳಲು ಸಾಧ್ಯವೇ ಇಲ್ಲದ ರೋಗಿಗಳಷ್ಟೇ ವೆನ್‌ಲಾಕ್‌ಗೆ ಚಿಕಿತ್ಸೆಗಾಗಿ ತೆರಳುತ್ತಾರೆ.

ಖಾಸಗಿಯವರ ಕೈಗೆ

ಇಂತಹ ವೆನ್‌ಲಾಕ್ ಆಸ್ಪತ್ರೆಯನ್ನು ಖಾಸಗಿಯವರ ಕೈಗಿಡುವ ಪ್ರಕ್ರಿಯೆ ಐದಾರು ವರ್ಷಗಳಿಂದ ನಡೆಯುತ್ತಾ ಬಂದಿದೆ. ಆರಂಭದಲ್ಲಿ ವೆನ್‌ಲಾಕ್‌ನ ಶವಾಗಾರವನ್ನು ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನವರಿಗೂ, ರಕ್ತನಿಧಿಯನ್ನು ಎಂ.ವಿ.ಶೆಟ್ಟಿ ಮೆಡಿಕಲ್ ಕಾಲೇಜಿನವರಿಗೂ ನೀಡಲಾಗಿದೆ. ಆ ಸಂದರ್ಭದಲ್ಲಿ ದಕ್ಷ ನಿರ್ವಹಣೆಗಾಗಿ ಖಾಸಗಿಯವರಿಗೆ ನೀಡಲಾಗುತ್ತಿದೆ ಎಂಬ ಬಾಲಿಷ ಹೇಳಿಕೆಯನ್ನು ನೀಡಿ ವೆನ್‌ಲಾಕ್ ಆಡಳಿತ ಮಂಡಳಿ ತಾವು ಅದಕ್ಷರು ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಂಡಿತ್ತು. ತದನಂತರ ಮಂಗಳೂರಿನ 18 ನರ್ಸಿಂಗ್ ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳ ಕಲಿಕೆಗೆ ವೆನ್‌ಲಾಕ್‌ನ ಬಡ ರೋಗಿಗಳ ದೇಹವನ್ನು ಪ್ರಯೋಗದ ವಸ್ತುವನ್ನಾಗಿಸುವ ತೀರ್ಮಾನ ಜ್ಯಾರಿಯಾಯಿತು. 2006 ರಲ್ಲಿ ಸಂಪೂರ್ಣ ಖಾಸಗೀಕರಿಸುವ ಭಾಗವಾಗಿ ಉತ್ತಮ, ಆಧುನಿಕ ಸೇವೆಯ ನೆಪವನ್ನಿಟ್ಟು ಖಾಸಗಿ, ಸರಕಾರಿ ಸಹಬಾಗಿತ್ವ (ಪಿ.ಪಿ.ಸಿ.)ದ ಹೆಸರಿನಲ್ಲಿ ಪ್ರತಿಯೊಂದು ಬಳಕೆಗೂ ಶುಲ್ಕ ಪಾವತಿ ಎಂಬ ನೀತಿಯನ್ನು ಜ್ಯಾರಿಗೊಳಿಸಲಾಯಿತು. ಈ ತೀರ್ಮಾನಕ್ಕೆ ಸಾರ್ವಜನಿಕ ಪ್ರತಿರೋಧ ಉಂಟಾಗದಂತೆ ತಡೆಗಟ್ಟಲು ಬಿ.ಪಿ.ಎಲ್ ಪಟ್ಟಿಯಲ್ಲಿರುವವರಿಗೆ ಯಾವುದೇ ಶುಲ್ಕವಿಲ್ಲ ಎಂಬ ಒಂದು ಸಾಲನ್ನು ಸೇರಿಸಲಾಯಿತು. ವಿಶ್ವಬ್ಯಾಂಕ್‌ನ ತೀರ್ಮಾನದಂತೆ ಬಡವರ ರೇಶನ್ ಕಾರ್ಡುಗಳನ್ನು ಕಿತ್ತುಕೊಂಡಿರುವ ಸರಕಾರಗಳು ಅರ್ಹ ಬಡವರಿಗೆ ಬಿಪಿಎಲ್ ಕಾರ್ಡುಗಳನ್ನೇ ನೀಡದಿರುವಾಗ ಬಿ.ಪಿ.ಎಲ್ ಇರುವವರಿಗೆ ಮಾತ್ರ ಉಚಿತ ಚಿಕಿತ್ಸೆ ಎಂಬುದು ಬಡವರ ಸಾವಿನಲ್ಲೂ ಸಂತಸಪಡುವ ಆಳುವವರ ವಿಕೃತಿಯಲ್ಲದೆ ಮತ್ತೇನು ಅಲ್ಲ ಎಂದು ತಿಳಿಯಲು ಇಲ್ಲಿನ ಪ್ರಜ್ಞಾವಂತರಿಗೆ ವಿಶೇಷ ಬುದ್ಧಿಯೇನು ಬೇಕಿರಲಿಲ್ಲ.

ಗುಣಮಟ್ಟದ ಆಹಾರ, ವಸತಿ, ಶಿಕ್ಷಣದಿಂದ ವಂಚಿತರಾಗುತ್ತಿರುವ ಬಡಜನತೆಗೆ ಕನಿಷ್ಟ ವೈದ್ಯಕೀಯ ಚಿಕಿತ್ಸೆಯನ್ನು ನಿರಾಕರಿಸುವ ಸರಕಾರದ ಈ ಅಮಾನವೀಯವಾದ ತೀರ್ಮಾನವನ್ನು ವಿರೋಧಿಸಿ ಅಂದು ತಕ್ಷಣವೇ ಬೀದಿಗಿಳಿದು ಪ್ರತಿಭಟಿಸಿದ್ದು ಡಿವೈಎಫ್‌ಐ ಮತ್ತು ಜೆಎಂಎಸ್ ಸಂಘಟನೆಗಳು. ವೆನ್‌ಲಾಕ್ ಉಳಿಸಿ ಆಂದೋಲನ ಎಂಬ ಹೆಸರಿನಲ್ಲಿ ಆರಂಭವಾದ ಈ ಹೋರಾಟ ಇಡೀ ಕರಾವಳಿಯಲ್ಲಿ ವೆನ್‌ಲಾಕ್ ಖಾಸಗೀಕರಣದ ವಿರುದ್ಧ ಜನಾಭಿಪ್ರಾಯ ಮೂಡಿಸಲು ಸಫಲವಾಯಿತು. ಸರಕಾರದ ನೀತಿಗಳು, ಶಾಸಕ ಮಂತ್ರಿಗಳ ಮೌನವನ್ನು ಪ್ರಶ್ನಿಸುವ, ಶುಲ್ಕ ವಸೂಲಾತಿಯ ಹಿಂದಿನ ಹುನ್ನಾರಗಳನ್ನು ತೆರೆದಿಡುವ ಕೈಬರಹದ ಪೋಸ್ಟರ್‌ಗಳನ್ನು ಜಿಲ್ಲೆಯಾದ್ಯಂತ ಅಂಟಿಸಿ ವೆನ್‌ಲಾಕ್ ಮುಂದೆ ಮೂರು ಹಂತದ ಪ್ರತಿಭಟನೆ, ಆ ಸಂದರ್ಭದಲ್ಲಿ ಜಿಲ್ಲೆಗೆ ಆಗಮಿಸಿದ ಆಗಿನ ಆರೋಗ್ಯ ಸಚಿವ ಅಶೋಕ್ ಖೇರಾವ್ ಮುಂತಾದ ಚಳುವಳಿಗಳು ಆಳುವ ದೊರೆಗಳಲ್ಲಿ ನಡುಕವನ್ನು ಮೂಡಿಸಿದವು. ಹೋರಾಟದ ತೀವ್ರತೆಯಿಂದಾಗಿ ಅಂದು ಬಿಪಿಎಲ್ ರೇಶನ್ ಕಾರ್ಡ್ ಇಲ್ಲದವರು ಆದಾಯ ಸರ್ಟಿಫಿಕೇಟ್ ನೀಡಿದರೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಘೋಷಿಸಬೇಕಾಯಿತು. ಆದರೂ ಹೋರಾಟಗಾರರು ಬಗ್ಗದಿದ್ದಾಗ ಶುಲ್ಕ ವಸೂಲಾತಿಯನ್ನು



ತಾತ್ಕಾಲಿಕವಾಗಿ ತಡೆಹಿಡಿಯಲಾಯಿತು ಮತ್ತು ಅರೆಬರೆಯಾಗಿ ಹಿಂಬಾಗಿಲಿನಿಂದ ಜ್ಯಾರಿಗೊಳಿಸಲಾಯಿತು. ಡಯಾಲಿಸಿಸ್, ಎಕ್ಸ್‌ರೇ, ಇ.ಸಿ.ಜಿ.ಗಳಿಗೆ ಶುಲ್ಕ ವಸೂಲಾತಿಯನ್ನು ಮುಂದುವರಿಸಲಾಯಿತು.

ಬಿಡುಗಡೆಗೆ ತಡೆ

ಈಗ ಮತ್ತೆ 2009 ರ ಆಗಸ್ಟ್ 17 ರಂದು ಮತ್ತೊಂದು ಅಧಿಕೃತ ಸುತ್ತೋಲೆಯನ್ನು ಹೊರಡಿಸಲಾಗಿದೆ. ಹಣಕಾಸು ಇಲಾಖೆ ಅನುದಾನ ನೀಡಲು ಸಾಧ್ಯವಿಲ್ಲ ಎಂದು ಹೇಳಿರುವುದರಿಂದ ಪ್ರತಿಯೊಂದಕ್ಕೂ ಶುಲ್ಕ ಪಾವತಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಅದರ ಪ್ರಕಾರ ಬೆಡ್, ಔಷಧಿ, ಶಸ್ತ್ರ ಚಿಕಿತ್ಸೆ, ಆಸ್ಪತ್ರೆಯಲ್ಲಿ ರೋಗಿಗಳಿಗೆ ನೀಡಲಾಗುತ್ತಿದ್ದ ಆಹಾರ ಹೀಗೆ ಪ್ರತಿಯೊಂದಕ್ಕೂ ಶುಲ್ಕ ನೀಡಬೇಕಾಗಿದೆ. ವೆನ್‌ಲಾಕ್‌ಗೆ ದಾಖಲಾಗುವ ರೋಗಿ ಬಿಡುಗಡೆ ಹೊಂದುವಾಗ ಬಿಲ್ ಪಾವತಿಸದಿದ್ದರೆ ಯಾವುದೇ ಕಾರಣಕ್ಕೂ ರೋಗಿಯನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಬಾರದು ಎಂದು ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ. ದುಡ್ಡು ಪಾವತಿಸಲಾಗದ ಬಡ ರೋಗಿಯನ್ನು ಅಕ್ರಮ ಬಂಧನದಲ್ಲಿಡುವ ಖಾಸಗಿ ಆಸ್ಪತ್ರೆ ವ್ಯಾಪಾರಿಗಳ ಅನಾಗರಿಕ ನೀತಿಯನ್ನು ವೆನ್‌ಲಾಕ್ ಸರಕಾರಿ ಆಸ್ಪತ್ರೆಯೂ ಈ ಮೂಲಕ ಅಳವಡಿಸಿಕೊಂಡಿದೆ. ಸರಕಾರದ ಈ ಆದೇಶದಿಂದ ವೆನ್‌ಲಾಕನ್ನೇ ನೆಚ್ಚಿಕೊಂಡಿರುವ ಜನತೆ ಕಂಗಾಲಾಗಿದ್ದಾರೆ. ಒಂದೆಡೆ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆ, ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲಾಗದ ಅಸಹಾಯಕತೆ, ಗಗನ ಮುಟ್ಟುತ್ತಿರುವ ಮನೆ ಬಾಡಿಗೆ ಒಟ್ಟು ಬದುಕೇ ದುಸ್ತರವಾಗಿರುವ ಸಂದರ್ಭದಲ್ಲಿ ದುಡ್ಡಿಲ್ಲದಿದ್ದರೆ ಕನಿಷ್ಟ ಜ್ವರಕ್ಕೂ ನಿಮಗೆ ಮದ್ದಿಲ್ಲ ಎಂಬ ನೀತಿ ಜನತೆಯ ಅಸಹಾಯಕತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ವಲಸಿಗರ ಪಾಡು

ಬಿಪಿಎಲ್ ಕಾರ್ಡ್ ಇಲ್ಲದೆ ಪರದಾಡುತ್ತಿರುವ ಸ್ಥಳೀಯ ಜನತೆ ಒಂದೆಡೆಯಾದರೆ ಮಂಗಳೂರಿನಲ್ಲಿ ಹರಡುವ ಮಲೇರಿಯಾ, ಡೆಂಗ್ಯೂ ಮುಂತಾದ ಸಾಂಕ್ರಾಮಿಕ ರೋಗಗಳ ಬಲಿಪಶುಗಳಾದ ಉತ್ತರಕರ್ನಾಟಕದ ವಲಸೆ ಕಾರ್ಮಿಕರು ಮತ್ತೊಂದೆಡೆ. ಬರ, ನಿರುದ್ಯೋಗಗಳಿಂದ ಕಂಗೆಟ್ಟು ಉತ್ತಮ ಕೂಲಿಯ ಆಕರ್ಷಣೆಯಿಂದ ಉತ್ತರ ಕರ್ನಾಟಕದ ಬಡ ಜನತೆ ಸಾವಿರಾರು ಸಂಖ್ಯೆಯಲ್ಲಿ ಮಂಗಳೂರಿಗೆ ಒಗ್ಗೆಯಿಡುತ್ತಾರೆ. ಉಳಕೊಳ್ಳಲು ಸರಿಯಾದ ವ್ಯವಸ್ಥೆಯಿಲ್ಲದೆ ಕೊಳಚೆ ಪ್ರದೇಶಗಳಲ್ಲಿ ಟೆಂಟ್ ನಿರ್ಮಿಸಿ, ಅನಾರೋಗ್ಯಕರ ಪ್ರದೇಶದಲ್ಲಿ, ಬಸ್ ನಿಲ್ದಾಣಗಳಲ್ಲಿ ವಸತಿ ಹೂಡುವ ಈ ಶ್ರಮಜೀವಿಗಳು ಇಲ್ಲಿ ಹರಡುವ ಪ್ರತಿಯೊಂದು ಸಾಂಕ್ರಾಮಿಕ ರೋಗಗಳ ಪ್ರಥಮ ಬಲಿಪಶುಗಳಾಗುತ್ತಾರೆ. ಬಿಪಿಎಲ್ ಕಾರ್ಡ್ ಬಿಡಿ ಕನಿಷ್ಟ ಗುರುತು ಚೀಟಿಯೂ ಇಲ್ಲದ ಈ ದುರ್ಬಲರಿಗೆ ಬಿಪಿಎಲ್ ಕಾರ್ಡ್ ಇಲ್ಲ ಎಂಬ ನೆಪದಲ್ಲಿ ಸರಕಾರಿ ಆಸ್ಪತ್ರೆಗಳು ಚಿಕಿತ್ಸೆ ನಿರಾಕರಿಸಿದರೆ ಈ ಜನ ಬದುಕುವುದಾದರೂ ಹೇಗೆ? ಇದನ್ನು ಕೇಳುವುದಾದರೂ ಯಾರಲ್ಲಿ?

ಡೀಲಕ್ಸ್ ಆಸ್ಪತ್ರೆ ಯಾರಿಗುಂಟು?

ಒಂದೆಡೆ ಶ್ರೀಮಂತರ ಡೀಲಕ್ಸ್ ದರ್ಜೆಯ ಆಸ್ಪತ್ರೆಗಳಲ್ಲಿ ದಿನಕ್ಕೆ ಸಾವಿರಾರು ರೂಪಾಯಿ ಬೆಡ್‌ಚಾರ್ಜ್ ಕೊಟ್ಟು ಏರ್‌ಕಂಡೀಶನ್ ರೂಂಗಳಲ್ಲಿ ಮಲಗಿ ಯಾವುದೇ ರೋಗವಿಲ್ಲದಿದ್ದರೂ ಪ್ರತಿಯೊಂದು ಪರೀಕ್ಷೆಯನ್ನು ಮುಂಜಾಗರೂಕತೆಯಿಂದ ಮಾಡಿಸಿಕೊಳ್ಳುವ ಮೇಲ್ವರ್ಗದ ಶ್ರೀಮಂತರು ಒಂದೆಡೆಯಾದರೆ ತೀವ್ರ ಅನಾರೋಗ್ಯವಿದ್ದರೂ ಕನಿಷ್ಠ ಚಿಕಿತ್ಸೆ ಪಡೆಯಲಾಗದೆ ಸರಕಾರಿ ವೆನ್‌ಲಾಕ್ ಆಸ್ಪತ್ರೆಯಿಂದ ಹೊರದಬ್ಬಿಸಿಕೊಳ್ಳುತ್ತಿರುವ ಬಡ ಶ್ರಮಜೀವಿಗಳು ಇನ್ನೊಂದೆಡೆ. ಇದನ್ನೆಲ್ಲಾ ಕಂಡು ಸುಮ್ಮನಿರಲು ಸಾಧ್ಯವೇ? ಇಂತಹ ಯಾವುದೇ ಜನವಿರೋಧಿ ತೀರ್ಮಾನಗಳು ಜ್ಯಾರಿಯಾದರೂ ತಕ್ಷಣ ಬೀದಿಗಿಳಿದು ಪ್ರತಿಭಟಿಸುವ ಡಿವೈಎಫ್‌ಐ ಮತ್ತೆ ಬೀದಿಗಿಳಿದು ಪ್ರತಿಭಟಿಸಲು ನಿರ್ಧರಿಸಿದೆ. ಜನವಾದಿ ಮಹಿಳಾ ಸಂಘಟನೆಯನ್ನು ಜೊತೆಯಾಗಿಸಿ, ದುಡಿಯುವ ವರ್ಗದ ಸಂಘಟನೆಗಳನ್ನು ಒಟ್ಟು ಸೇರಿಸಿ ಮತ್ತೊಮ್ಮೆ ವೆನ್‌ಲಾಕ್ ಉಳಿಸಿ ಆಂದೋಲನವನ್ನು ಆರಂಭಿಸಲು ನಿರ್ಧರಿಸಿದೆ. ಸರಕಾರವು ತನ್ನ ಆದೇಶವನ್ನು ಹಿಂದಕ್ಕೆ ಪಡೆಯುವವರೆಗೂ ಚಳುವಳಿಯನ್ನು ಮುಂದಕ್ಕೊಯ್ಯಲು ನಿರ್ಧರಿಸಿದೆ. ಕೋಮುಶಕ್ತಿಗಳ ಧೃತರಾಷ್ಟ್ರಾಲಿಂಗನಕ್ಕೊಳಗಾಗಿರುವ ಕರಾವಳಿಯ ಯುವಜನತೆ ವಾಸ್ತವವನ್ನು ಅರಿತು ಕನಿಷ್ಟ ಬದುಕುವ ಹಕ್ಕನ್ನು ನಿರಾಕರಿಸುವ ಸರಕಾರದ ಈ ತೀರ್ಮಾನದ ವಿರುದ್ಧ ಹೋರಾಟದಲ್ಲಿ ಕೈಜೋಡಿಸಬೇಕಿದೆ. ಅಂತಹ ಹೋರಾಟ ಮಾತ್ರ ನಮ್ಮ ಮನುಷ್ಯನಂತೆ ಬದುಕುವ ಹಕ್ಕನ್ನು ಉಳಿಸೀತು.

ಜನದ್ರೋಹಿ ನೀತಿಗಳ ಮುಂದುವರಿಕೆ

ಇದೇ ಯುಪಿಎ ಸರ್ಕಾರದ ನೂರು ದಿನಗಳ ದಾಖಲೆ

ಕಾಂಗ್ರೆಸ್ ನೇತೃತ್ವದ ಸರಕಾರದ ಮೊದಲ ನೂರು ದಿನಗಳ ದಾಖಲೆ ಈ ಸರಕಾರವೂ ಅವೇ ನವ- ಉದಾರವಾದಿ ನೀತಿಗಳನ್ನು ಅನುಸರಿಸುತ್ತದೆ ಎಂಬುದನ್ನು ದೃಢಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ನವದೆಹಲಿಯಲ್ಲಿ ಸಪ್ಟೆಂಬರ್ 5-6ರಂದು ಸಭೆ ಸೇರಿದ ಪೊಲಿಟ್ ಬ್ಯುರೊ ದೇಶದ ಒಟ್ಟಾರೆ ರಾಜಕೀಯ ಪರಿಸ್ಥಿತಿಯ ಪರಾಮರ್ಶೆ ಮಾಡಿದ ನಂತರ ಅದು ಒಂದು ಹೇಳಿಕೆಯಲ್ಲಿ ಅದು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ವಿವಿಧ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗಳನ್ನು ಇನ್ನಷ್ಟು ಉದಾರಗೊಳಿಸುವ, ಸಾರ್ವಜನಿಕ ವಲಯದಲ್ಲಿ 'ಜನಗಳ ಭಾಗವಹಿಸುವಿಕೆ' ಎಂಬ ನೆಪವೊಡ್ಡಿ ಲಾಭದಲ್ಲಿರುವ ಘಟಕಗಳಲ್ಲಿನ ಹೂಡಿಕೆಗಳ ವಿಕ್ರಯ ಮತ್ತು ಕಾರ್ಪೊರೇಟ್ ವಲಯಕ್ಕೆ ಇನ್ನಷ್ಟು ತೆರಿಗೆ ರಿಯಾಯ್ತಿಗಳ ಕ್ರಮಗಳನ್ನು ಯುಪಿಎ ಸರ್ಕಾರ ಪ್ರಕಟಿಸಿದೆ.

ಈ ಸರಕಾರ ಪ್ರಕಟಿಸಿರುವ 'ನೇರ ತೆರಿಗೆ ಸಂಹಿತೆ' ಒಂದು ಪ್ರತಿಗಾಮಿ ಕ್ರಮ. ವಾರ್ಷಿಕ ವರಮಾನ ರೂ. 10ಲಕ್ಷಕ್ಕಿಂತ ಹೆಚ್ಚಿರುವವರಿಗೆ ತೆರಿಗೆ ದರಗಳನ್ನು ಕಡಿತಗೊಳಿಸಲಾಗುತ್ತದೆ, ಕಾರ್ಪೊರೇಟ್ ತೆರಿಗೆಗಳನ್ನು 30ಶೇ.ದಿಂದ 25ಶೆ.ಕ್ಕೆ ಇಳಿಸಲಾಗುತ್ತದೆ ಹಾಗೂ ಸಂಪತ್ತು ತೆರಿಗೆಯನ್ನೂ ಇನ್ನಷ್ಟು ದುರ್ಬಲಗೊಳಿಸಲಾಗುತ್ತದೆ. ದೊಡ್ಡ ವ್ಯಾಪಾರಸ್ಥರು ಅಪಾರ ಲಾಭ ಗಳಿಸುತ್ತಿರುವಾಗ, ಶ್ರೀಮಂತ ವಿಭಾಗಗಳ ಸಂಪತ್ತು ದೊಡ್ಡ ಪ್ರಮಾಣದಲ್ಲಿ ಹೆಚ್ಚಿರುವಾಗ ಇಂತಹ ತೆರಿಗೆ ಕಡಿತಗಳನ್ನು ಕೊಡಮಾಡಲಾಗುತ್ತಿದೆ.

ನಿರಂತರ ಬೆಲೆಯೇರಿಕೆ-ಅರ್ಧದಷ್ಟು ದೇಶದಲ್ಲಿ ಬರ

ಆಹಾರ ಮತ್ತು ಆವಶ್ಯಕ ಸರಕುಗಳ ಎಡೆಬಿಡದ ಬೆಲೆಯೇರಿಕೆ ಈ ಯುಪಿಎ ಸರಕಾರದ ಮೊದಲ ಮೂರು ತಿಂಗಳಲ್ಲಿ ಎದ್ದು ಕಾಣುವ ಸಂಗತಿ. ಬೇಳೆ, ಅಡುಗೆ ಎಣ್ಣೆ, ಸಕ್ಕರೆ ಮತ್ತು ಆಹಾರಧಾನ್ಯಗಳ ಬೆಲೆಗಳಲ್ಲಿ ತೀವ್ರ ಬೆಲೆಯೇರಿಕೆ ಆಗುತ್ತಿದೆ. ಸರಿಯಾಗಿ ಮಳೆ ಬಾರದೆ ದೇಶದ ಅರ್ಧದಷ್ಟು ಭಾಗವನ್ನು ಬರ ತಟ್ಟಿದೆ. ಸಕ್ಕರೆಯಂತಹ ಸರಕುಗಳ ಆಮದುನ್ನು ಉದಾರಗೊಳಿಸುವುದು ಮತ್ತು ರೈತರಿಗೆ ಡೀಸೆಲ್ ಸಬ್ಸಿಡಿಯನ್ನು ಪ್ರಕಟಿಸುವುದನ್ನು ಬಿಟ್ಟರೆ ಸರಕಾರ ಪರಿಸ್ಥಿತಿಯನ್ನು ಎದುರಿಸಲು ಏನೂ ಮಾಡುತ್ತಿಲ್ಲ.

ಬರದಿಂದಾಗಿ ಕೃಷಿ ಉತ್ಪಾದನೆ ಇಳಿಯುತ್ತದೆ, ಅದರಲ್ಲೂ ಭತ್ತದ ಉತ್ಪಾದನೆಯನ್ನು ಅದು ತೀವ್ರವಾಗಿ ತಟ್ಟಲಿದೆ. ಇದು ಬೆಲೆಗಳ ಮೇಲೆ ಇನ್ನಷ್ಟು ದುಷ್ಪರಿಣಾಮ ಬೀರಲಿದೆ. ಬರ ಬಡರೈತರು ಮತ್ತು ಕೃಷಿ ಕೂಲಿಕಾರರಿಗೆ ಅಪಾರ ಸಂಕಟಗಳನ್ನು ತರಲಿದೆ, ಉದ್ಯೋಗದ ಅಭಾವದಿಂದ ಅವರು ನರಳುವಂತಾಗುತ್ತದೆ. ಬಡರೈತರು ತಮ್ಮ ಜಾನುವಾರುಗಳಿಗೆ ಮೇವು ಕೊಡಲಾಗದೆ ಅವನ್ನು ಮಾರಬೇಕಾಗಿ ಬಂದಿದೆ. ಹಲವು ಸ್ಥಳಗಳಲ್ಲಿ ನೀರಿನ ಅಭಾವ ಕಾಣುತ್ತಿದೆ.

ಬೆಲೆ ಏರಿಕೆ ತಡೆಗೆ ಅಗತ್ಯ ಕ್ರಮ

ಬೆಲೆಯೇರಿಕೆಯನ್ನು ತಡೆಯಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು. ಈ ಕ್ರಮಗಳೆಂದರೆ ಆವಶ್ಯಕ ಸರಕುಗಳಲ್ಲಿ ವಾಯಿದಾ ಅಂದರೆ ಮುಂಗಡ ವ್ಯಾಪಾರವನ್ನು ನಿಷೇಧಿಸುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದು, ಕಳ್ಳ ದಾಸ್ತಾನುಗಳನ್ನು ಹೊರಗೆಳೆಯುವುದು ಮತ್ತು ಇಂತಹ ಕಳ್ಳ ದಾಸ್ತಾನುಗಾರರು ಹಾಗೂ ಕಾಳಸಂತೆಕೋರರ ವಿರುದ್ಧ ಬಲವಾದ ಕ್ರಮ ಮತ್ತು ಪೆಟ್ರೋಲ್, ಡೀಸೆಲ್ ದರ ಏರಿಕೆಗಳನ್ನು ಹಿಂತೆಗೆದುಕೊಳ್ಳುವುದು.

ಬರ ಪರಿಹಾರ ಕ್ರಮಗಳು

ಬರಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳಬೇಕಾಗಿರುವ ಕ್ರಮಗಳು. ಎಲ್ಲಾ ಬರಪೀಡಿತ ಕುಟುಂಬಗಳಿಗೆ ತುರ್ತಾಗಿ ಆಹಾರಧಾನ್ಯಗಳ ವಿತರಣೆ; ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ತುರ್ತಾಗಿ ಸಂಪನ್ಮೂಲಗಳನ್ನು ಒದಗಿಸಿ ಕೆಲಸ ಕೇಳುವವರಿಗೆ ಒಂದು ಕೆಲಸದ ದಿನಕ್ಕೆ ಕನಿಷ್ಟ 100ರೂ. ನಿಜ ಆದಾಯ ಬರುವಂತೆ ಬರಪೀಡಿತ ಪ್ರದೇಶಗಳಲ್ಲಿ ವ್ಯಾಪಕವಾಗಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರಕಾರಗಳಿಗೆ ನೆರವು; 100ದಿನಗಳ ಮಿತಿಯನ್ನು ತೆಗೆದು ಕೆಲಸ ಕೇಳುವವರಿಗೆ ಕೆಲಸ ಕೊಡಬೇಕು; ಎಲ್ಲಿ ಅಗತ್ಯವೋ ಅಲ್ಲಿ ನಗದಿನ ಜೊತೆಗೆ ಆಹಾರಧಾನ್ಯಗಳ ರೂಪದಲ್ಲಿಯೂ ಪಾವತಿಯಾಗಬೇಕು; ಕುಡಿಯುವ ನೀರಿನ ನಿಯಮಿತ ಪೂರೈಕೆ ಜಾನುವಾರುಗಳಿಗೆ ಮೇವು ಪೂರೈಕೆ.

ಆಹಾರ ಭದ್ರತೆಗಾಗಿ ಮತ್ತು ಬೆಲೆಯೇರಿಕೆಯ ವಿರುದ್ಧ ರಾಷ್ಟ್ರೀಯ ಸಮಾವೇಶದ ಕರೆಯನ್ನು ಮತ್ತು ಆಹಾರಭದ್ರತೆ, ಬರ ಮತ್ತು ಬೆಲೆಯೇರಿಕೆಗಳ ಪ್ರಶ್ನೆಗಳ ಮೇಲೆ ರಾಜ್ಯಮಟ್ಟದ ಸಮಾವೇಶಗಳನ್ನು ನಡೆಸಬೇಕೆಂಬ ಎಡಪಕ್ಷಗಳ ಕರೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅನುಮೋದಿಸುತ್ತದೆ. ಇದನ್ನು ಅನುಸರಿಸಿ ನವಂಬರ್ ತಿಂಗಳಲ್ಲಿ ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್ ರ್‍ಯಾಲಿಗಳು ನಡೆಯಬೇಕು, ಈ ಪ್ರಚಾರ ಕಾರ್ಯವನ್ನು ಎಲ್ಲಾ ಸಿಪಿಐ(ಎಂ) ಘಟಕಗಳು ಯಶಸ್ವಿಗೊಳಿಸಬೇಕು.

ಆಸಿಯಾನ್‌ನೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ

ಸರಕಾರ ದಕ್ಷಿಣ ಪೂರ್ವ (ಆಗ್ನೇಯ) ಏಶ್ಯನ್ ದೇಶಗಳ ಸಂಘ(ಆಸಿಯಾನ್)ದೊಡನೆ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದ ಆತಂಕಕಾರಿಯಾಗಿದೆ. ಇದರ ಪ್ರತಿಕೂಲ ಪರಿಣಾಮಗಳ ಬಗ್ಗೆ ಭಯ ವ್ಯಕ್ತಗೊಂಡಿದ್ದರೂ ಲೆಕ್ಕಿಸದೆ ಸರಕಾರ ಈ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದ ತಟ್ಟಬಹುದಾದ ರಾಜ್ಯ ಸರಕಾರಗಳೊಡನೆ ಸಮಾಲೋಚನೆಗಳನ್ನು ನಡೆಸಲಿಲ್ಲ. ಈ ಮುಕ್ತ ವ್ಯಾಪಾರ ಒಪ್ಪಂದದಿಂದಾಗಿ ಹಲವಾರು ಕೃಷಿ ಮತ್ತು ಕೈಗಾರಿಕಾ ಸರಕುಗಳ ಮೇಲೆ ಸುಂಕಗಳು ರದ್ದಾಗುತ್ತವೆ ಅಥವಾ ಇಳಿಕೆಯಾಗುತ್ತವೆ. ಮೆಣಸು, ಚಹಾ, ಏಲಕ್ಕಿ ಮತ್ತು ತಾಳೆಎಣ್ಣೆ ಆಮದು ಉದಾರಗೊಳ್ಳುವ ಸರಕುಗಳ ಪಟ್ಟಿಯಲ್ಲಿ ಇರುವುದರಿಂದ ಇದು ಕೇರಳವನ್ನು ಬಹಳವಾಗಿ ತಟ್ಟಲಿದೆ.

ಡಬ್ಲ್ಯುಟಿಒ ಮಾತುಕತೆ-ಏಕೀ ಮುತುವರ್ಜಿ?

ಡಬ್ಲ್ಯುಟಿಒ ದೋಹಾಸುತ್ತಿನ ಮಾತುಕತೆಗಳನ್ನು ಕುರಿತು ನವದೆಹಲಿಯಲ್ಲಿ ನಡೆದ ಮಂತ್ರಿಮಟ್ಟದ ಸಭೆ ಕೃಷಿ ಮತ್ತು ಕೃಷಿಯೇತರ ಮಾರುಕಟ್ಟೆ ಅವಕಾಶ(ನಾಮಾ) ಕುರಿತ ಮಾತುಕತೆಗಳನ್ನು ಪುನರಾರಂಭಿಸಲು ಸದ್ಯದಲ್ಲೇ ಜಿನಿವಾದಲ್ಲಿ ಸಭೆ ಸೇರಲು ನಿರ್ಧರಿಸಿದೆ. ಭಾರತೀಯ ಕೃಷಿ ಮತ್ತು ರೈತರ ರಕ್ಷಣೆಗಾಗಿ ಭಾರತ ತಳೆದ ದೃಢ ನಿಲುವಿನಿಂದಾಗಿ ಈ ಮಾತುಕತೆಗಳು ಸ್ಥಗಿತಗೊಂಡಿದ್ದವು. ಈಗ ಇದನ್ನು ಮುರಿಯಲು ಭಾರತ ಸರಕಾರವೇ ಮುಂದಾಗಿರುವುದು ಹಲವು ಸಂದೇಹಗಳನ್ನು ಹುಟ್ಟುಹಾಕಿದೆ. ಮಾತುಕತೆಗಳಿಗೆ ಆಧಾರವಾದ ಪಠ್ಯ ಈಗಲೂ ತಮ್ಮ ಉತ್ಪನ್ನಗಳಿಗೆ ಭಾರೀ ಪ್ರಮಾಣದ ಸಬ್ಸಿಡಿಗಳನ್ನು ಕೊಡುವ ಮುಂದುವರೆದ ದೇಶಗಳಿಂದ ಪ್ರವಾಹದಂತೆ ಹರಿದು ಬರಬಹುದಾದ ಅಗ್ಗದ ಆಮದುಗಳಿಂದ ನಮ್ಮ ಕೋಟ್ಯಂತರ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಪರಿಣಾಮಕಾರಿ ರಕ್ಷಣೆ ಒದಗಿಸುತ್ತಿಲ್ಲ. ನಾಮಾ ಕುರಿತಂತೂ ಅಭಿವೃದ್ಧಿಶೀಲ ದೇಶಗಳ ವಿರುದ್ಧವಂತೂ ಇನ್ನೂ ಎದ್ದು ಕಾಣುತ್ತದೆ.

ಕೇಂದ್ರ ಸರಕಾರ ನಮ್ಮ ರೈತರು ಮತ್ತು ಕೃಷಿಯ ಹಾಗೂ ದೇಶೀ ಕೈಗಾರಿಕೆಗಳ ಕಾರ್ಮಿಕರ ಹಿತಾಸಕ್ತಿಗಳನ್ನು ಪ್ರತಿಕೂಲವಾಗಿ ತಟ್ಟುವ ಯಾವುದೇ ಕ್ರಮಗಳನ್ನು ಕೈಗೊಳ್ಳಬಾರದು.



ಅಮೆರಿಕಾದೊಂದಿಗೆ ಅವಮಾನಕಾರಿ ಸಂಬಂಧಗಳು

ಹಿಲರಿ ಕ್ಲಿಂಟನ್ ಭೇಟಿಯ ಅವಧಿಯಲ್ಲಿ ಸಹಿ ಮಾಡಿದ 'ಅಂತಿಮ ಬಳಕೆ ಮೇಲುಸ್ತುವಾರಿ ಒಪ್ಪಂದ' (ಇಯುಎಂಎ) ಅಮೆರಿಕಾದಿಂದ ತಂದ ಶಸ್ತ್ರಾಸ್ತ್ರಗಳು ಮತ್ತು ಸಲಕರಣೆಗಳನ್ನು ನಾವು ಹೇಗೆ ಬಳಸುತ್ತೇವೆ ಎಂಬುದರ ತಪಾಸಣೆ ಮಾಡುವ ಅವಕಾಶ ಒದಗಿಸುತ್ತದೆ. ಈ ಅತಿಕ್ರಮಣಕಾರಿ ತಪಾಸಣೆಗಳು ಭಾರತದ ಸಾರ್ವಭೌಮತೆಗೊಂದು ಅವಮಾನ.

ಅಮೆರಿಕಾದ ಒತ್ತಡದಿಂದಾಗಿ ಭಾರತ ಒಂದು 'ನಾಗರಿಕ ಪರಮಾಣು ಬಾಧ್ಯತೆ ಕಾನೂನ[...] ಅಂಗೀಕರಿಸುವುದಾಗಿಯೂ ಮಾತು ಕೊಟ್ಟಿದೆ. [...] ಪ್ರಕಾರ ಯಾವುದೇ ಪರಮಾಣು ಸೌಲಭ್[...] ಅಪಘಾತವಾದಾಗ ಕೊಡಬಹುದಾದ ಪರಿಹಾ[...] ಕೋಟಿ ಡಾಲರುಗಳನ್ನು ಮೀರುವುದಿಲ್ಲ ಎಂದು [...] ಹಾಕಲಾಗುತ್ತದೆ. ಇಷ್ಟೇ ಅಲ್ಲ, ಪರಿಹಾರ ಕೊ[...] ಬಾಧ್ಯತೆ ಅಮೆರಿಕನ್ ರಿಯಾಕ್[...] ಪೂರೈಕೆದಾರರದ್ದಲ್ಲ, ಬದಲಾಗಿ ಅದನ್ನು ಭಾರತ[...] ನಿರ್ವಹಿಸುವವರದ್ದು, ಅಂದರೆ ಭಾರತ ಪರಮ[...] ವಿದ್ಯುತ್ ನಿಗಮದ್ದು!

ಇಂತಹ ಒಂದು ಬಾಧ್ಯತೆ ಕಾನೂನನ್ನು [...] ಮಾಡಿಸುವುದನ್ನು ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್[...] ವಿರೋಧಿಸಬೇಕಾಗಿದೆ.

ಬಿಜೆಪಿ ಅವ್ಯವಸ್ಥೆ

ಬಿಜೆಪಿಯೊಳಗಣ ಬಿಕ್ಕಟ್ಟು ಮತ್ತು ಮುಖ[...] ಕುರಿತು ತೀವ್ರಗೊಂಡಿರುವ ಭಿನ್ನಾಭಿಪ್ರಾಯಗ[...] ಆರೆಸ್ಸೆಸ್‌ನ ಮಧ್ಯಪ್ರವೇಶದಿಂದ ಬಗೆಹರಿ[...] ಪ್ರಯತ್ನ ನಡೆದಿದೆ. ತಾನೊಂದು ಸಾಂಸ್[...] ಸಂಘಟನೆಯಾದ್ದರಿಂದ ಬಿಜೆಪಿಯ ನೀತಿ ನಿರ್ಧಾ[...] ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸುವುದಿಲ್ಲ [...] ಆರೆಸ್ಸೆಸ್ ಹೇಳಿಕೊಂಡು ಬರುತ್ತಿತ್ತು. ಈ ಮಿಥ್ಯ[...] ಆರೆಸ್ಸೆಸ್ ಮುಖ್ಯಸ್ಥರು ಎಲ್ಲಾ ಬಿ[...] ಮುಖಂಡರನ್ನು ಕರೆಸಿಕೊಂಡು ಮುಖಂ[...] ಪ್ರಶ್ನೆಯನ್ನು ಬಗೆಹರಿಸಲು ಒಂದು ಸೂತ್ರ[...] ರೂಪಿಸಿರುವ ರೀತಿಯಿಂದಾಗಿ ಬಯಲಾಗಿದೆ.

ಬಿಜೆಪಿ ಎಂಬುದು ಆರೆಸ್ಸೆಸ್‌ನ ರಾಜಕೀ[...] ಸಾಧನವಲ್ಲದೆ ಬೇರೇನೂ ಅಲ್ಲ. ಆರೆಸ್ಸೆಸ್‌ನ [...] ಈ ಮಧ್ಯಪ್ರವೇಶ ಆ ಪಕ್ಷದ ಮೇಲೆ [...] ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸುತ್ತದೆ, ಇದರಿಂ[...] ಆ ಪಕ್ಷದ ವಿಚಾರಗಳು ಮತ್ತು ಧೋ[...] ಮೇಲೆಯೂ ಪರಿಣಾಮವಾಗಲಿದೆ. [...] ಆರೆಸ್ಸೆಸ್ ಹಿಂದುತ್ವಕ್ಕೆ ಬದ್ಧವಾಗಿರುವ[...] ಈ ವಿಚ್ಛಿದ್ರಕಾರಿ ಕೋಮುವಾದಿ [...] ವಿರುದ್ಧ ಹೋರಾಟ[...] ಮುಂದುವರೆಸಬೇಕಾಗಿದೆ.

ಪಶ್ಚಿಮ ಬಂಗಾಳದಲ್ಲಿ ನಿಲ್ಲದ ಹ[...]

ಸಿಪಿಐ(ಎಂ) ಮತ್ತು [...] ಕಾರ್ಯಕರ್ತರ ಮೇಲೆ ಪಶ್ಚಿಮ ಬಂಗಾ[...] ನಡೆಯುತ್ತಿರುವ ಹಲ್ಲೆಗಳನ್ನು ಸಿಪಿ[...] ಪೊಲಿಟ್‌ಬ್ಯುರೊ ಖಂಡಿಸಿದೆ. ತೃಣಮೂಲ[...] ಮಾವೋವಾದಿ ಕೂಟದ ಕೊಲೆಗಡು[...] ಲೋಕಸಭಾ ಚುನಾವಣೆಗಳ ನಂತರವೂ ನಿ[...] ಲಾಲ್‌ಗಡ ಪ್ರದೇಶದಲ್ಲಿ ಮಾವೋವಾ[...] ಸಿಪಿಐ(ಎಂ) ಕಾರ್ಯಕರ್ತರು ಮತ್ತು ಬೆಂಬ[...] ಮೇಲೆ ಗುರಿಯಿಟ್ಟು ಕೊಲೆಗಳನ್ನು ನಡೆಸು[...] ಇದ್ದಾರೆ. ಪೂರ್ವ ಮಿದ್ನಪುರದ ಖೆಜುರಿಯ[...] ಕೆಲವು ಪ್ರದೇಶಗಳಲ್ಲಿ ತೃಣಮೂ[...] ದಾಳಿಗಳಿಂದಾಗಿ ನೂರಾರು ಕುಟುಂಬಗಳು [...] ಮನೆಮಾರು ಬಿಟ್ಟು ಹೋಗಬೇಕಾಗಿದೆ.

ಇಲ್ಲಿ ಪರಿಸ್ಥಿತಿಯನ್ನು ರಾಜಕೀಯವಾಗಿ

ಪುಟ[...]


ತನ್ನ ಮೂಲಸೂತ್ರದತ್ತ ಮರಳುತ್ತಿದೆ ಹತಾಶ ಕೇಸರೀ ಕೂಟ

ಒಂದು ವಾರದ ಕಾಲ ಪಶ್ಚಿಮ ಮಹಾರಾಷ್ಟ್ರದ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಹೊಗೆಯಾಡುತ್ತಿದ್ದ ಕೋಮು ಉದ್ವೇಗ ಜ್ವಾಲೆಯಾಗಿ ಭುಗಿಲೇಳುವ ಅಪಾಯ ಉಂಟಾಯಿತು. ಇವೆಲ್ಲಾ ಮುಂಬರುವ ದಿನಗಳು ಹೇಗಿರಬಹುದು ಎಂಬುದರ ಸಂಕೇತ.

ಆರೆಸ್ಸೆಸ್/ಬಿಜೆಪಿಗೆ ಈಗ ಮತ್ತೆ ಕಟ್ಟಾ ಹಿಂದುತ್ವದ ಆಕ್ರಮಣಕಾರೀ ಅನುಸರಣೆ, ಅದರಿಂದಾಗಿ ಇನ್ನಷ್ಟು ಕೋಮುಧ್ರುವೀಕರಣ ಎಂಬುದೇ ದಿವ್ಯ ಸೂತ್ರ.

ಬಿಜೆಪಿಯ ಮೇಲೆ ಆರೆಸ್ಸೆಸ್ ಹಿಡಿತ ಬಿಗಿಯಾದಂತೆ ಕೋಮು ಸಾಮರಸ್ಯಕ್ಕೆ ಮತ್ತು ಶಾಂತಿಗೆ ಅಪಾಯ ಹೆಚ್ಚುತ್ತದೆ ಎಂಬುದು ಸಾಮಾನ್ಯ ಅನುಭವದ ಮಾತು. ಇತ್ತೀಚೆಗೆ ಜಸ್ವಂತ ಸಿಂಗ್ ಉಚ್ಚಾಟನೆಯೊಂದಿಗೆ ಬಿಜೆಪಿಯೊಳಗೆ ಉಂಟಾದ ಭಿನ್ನಾಭಿಪ್ರಾಯಗಳು, ಸಂಘಟನಾ ಸಮಸ್ಯೆಗಳು ಹತೋಟಿ ಮೀರಿ ಹೋಗುವಂತೆ ಕಾಣುತ್ತಿದ್ದಾಗ ಆರೆಸ್ಸೆಸ್ ಅಲ್ಲಿ ಸ್ವಲ್ಪ ಮಟ್ಟಿನ ಕೆಲಸವಾದರೂ ನಡೆಯುವಂತೆ ಮಾಡಲು ಮಧ್ಯಪ್ರವೇಶಿಸಿತು. ಬಿಜೆಪಿ ಎಂಬುದು ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ಕೆಲಸ ಮಾಡುತ್ತಿದ್ದರೂ, ಈಗ ಆರೆಸ್ಸೆಸ್ ನೇರ ಹತೋಟಿ ಪಡೆದಿರುವಂತೆ ಕಾಣುತ್ತದೆ. ಇದರ ಜೊತೆಗೆ, ನಿರೀಕ್ಷಿಸಿದಂತೆ ಆಕ್ರಮಣಕಾರಿ ಕಟ್ಟಾ ಹಿಂದುತ್ವ ಅಜೆಂಡಾ ಮತ್ತೆ ಮುಂಚೂಣಿಗೆ ಬರುತ್ತಿದೆ. ಇದು ಕೋಮು ಭಾವೋದ್ವೇಗಗಳನ್ನು ತೀಕ್ಷ್ಣಗೊಳಿಸಿ ಶಾಂತಿ ಮತ್ತು ಸಾಮರಸ್ಯವನ್ನು ಕದಡಬಹುದು ಎಂಬ ಆತಂಕ ಹೆಚ್ಚುತ್ತಿದೆ. ಏಕೆಂದರೆ ಕಟ್ಟಾ ಕೋಮುವಾದವನ್ನು ಆಕ್ರಾಮಕ ರೀತಿಯಲ್ಲಿ ಪ್ರದರ್ಶಿಸಿಯೇ ಸಮಾಜದಲ್ಲಿ ಕೋಮುಧ್ರುವೀಕರಣ ತರಲು ಹಾಗೂ ತನ್ನ 'ವೋಟ್ ಬ್ಯಾಂಕ'ನ್ನು ಕ್ರೋಢೀಕರಿಸಲು ಸಾಧ್ಯ ಎಂಬ ತೀರ್ಮಾನಕ್ಕೆ ಆರೆಸ್ಸೆಸ್/ಬಿಜೆಪಿ ಬಂದಂತೆ ಕಾಣುತ್ತದೆ.

ಈ ಆತಂಕ, ದುರದೃಷ್ಟವಶಾತ್ ನಿಜವಾಗುತ್ತಿದೆ. ಒಂದು ವಾರದಿಂದ ಪಶ್ಚಿಮ ಮಹಾರಾಷ್ಟ್ರದ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಹೊಗೆಯಾಡುತ್ತಿರುವ ಕೋಮು ಉದ್ವೇಗ ಜ್ವಾಲೆಯಾಗಿ ಭುಗಿಲೇಳುವ ಅಪಾಯ ಉಂಟಾಗಿದೆ. ಗಣೇಶೋತ್ಸವದ ಕೊನೆಯ ದಿನ ಸಾಂಗ್ಲಿ ಜಿಲ್ಲೆಯ ಮಿರಜ್ ಪಟ್ಟಣದಲ್ಲಿ ಹಿಂಸಾಚಾರ ಭುಗಿಲೆದ್ದಿತು. ಬೇಗನೇ ಅದು ದೇಶದ ಸಕ್ಕರೆ ಬೋಗುಣಿಯೆನಿಸಿರುವ ನೆರೆಯ ಜಿಲ್ಲೆಗಳಿಗೆ ವ್ಯಾಪಿಸಿತು.



ಇಲ್ಲೂ ಇತ್ತು ಪಿತೂರಿ

ಇಂತಹ ಹಿಂಸಾಚಾರವನ್ನು ಉದ್ರೇಕಿಸುವಲ್ಲಿ ಸದಾ ಒಂದು ಪಿತೂರಿ ಇರುತ್ತದೆ. ಗಣೇಶ ಮಂಡಳಗಳಲ್ಲಿ ಒಂದರಲ್ಲಿ ಶಿವಾಜಿ ಮಹಾರಾಜ ಅಫ್ಜಲಖಾನನನ್ನು ಕೊಲ್ಲುವ ಒಂದು ಅಲಂಕಾರಿಕ ಪೋಸ್ಟರನ್ನು ಪೋಲೀಸರು ವಶಪಡಿಸಿಕೊಂಡರು. ಇದರೊಂದಿಗೆ ಗಲಭೆ ಆರಂಭವಾಯಿತು. ಒಂದು ಕಿತ್ತಾಟವನ್ನು ಪ್ರಚೋದಿಸಲೆಂದೇ ಇದನ್ನು ಹಾಕಲಾಗಿತ್ತು. ಪೋಲೀಸ್ ಕ್ರಮವನ್ನು ಪ್ರತಿಭಟಿಸಿ ಮಿರಜ ಪಟ್ಟಣದ ಗಣೇಶ ಮಂಡಳಗಳು ಗಣೇಶನ ಪ್ರತಿಮೆಗಳ ವಿಸರ್ಜನೆ ನಡೆಸಲು ನಿರಾಕರಿಸಿದರು. ಬಿಗು ಪರಿಸ್ಥಿತಿ ಹರಡಿದಂತೆ ಗಲಭೆಗಳು ರಾಜ್ಯದ ನೆರೆಹೊರೆ ಪ್ರದೇಶಗಳಿಗೂ ವ್ಯಾಪಿಸಿದವು.

ಇಲ್ಲೊಂದು ಐತಿಹಾಸಿಕ ಹಿನ್ನೆಲೆಯಿದೆ. ಅದನ್ನು ಬಿಜೆಪಿ-ಶಿವಸೇನೆ ಕೂಟ ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದೆ. 1659ರಲ್ಲಿ ಶಿವಾಜಿ ಮತ್ತು ಬಿಜಾಪುರದ ಆದಿಲ್‌ಶಾಹನ ನಡುವಿನ ಯುದ್ಧದಲ್ಲಿ ಆದಿಲ್ ಶಾಹನ ಸೇನಾಧಿಪತಿ ಅಫ್ಜಲ ಖಾನನನ್ನು ಶಿವಾಜಿ ಸತಾರಾ ನಗರದ ಬಳಿಯಿರುವ ಪ್ರತಾಪಗಢ ಕೋಟೆಯಲ್ಲಿ ಕೊಂದಿದ್ದ. ಈ ಸಮರದ ನಂತರ ಕೋಟೆಯ ಬಳಿ ಅಫ್ಜಲ ಖಾನನ ಸಮಾಧಿಯನ್ನು ಕಟ್ಟಲಾಯಿತು. ಪ್ರತಾಪಗಢದ ಅಫ್ಜಲ ಖಾನ್ ಟ್ರಸ್ಟ್ ಮತ್ತು ಕೋಮುವಾದಿ ಸಂಘಟನೆಗಳ ನಡುವೆ ಕೆಲವು ವಿವಾದಗಳು ಮತ್ತು ಅತಿಕ್ರಮಣದ ಆಪಾದನೆಗಳ ಮೇಲೆ ಸತತವಾಗಿ ಕಿತ್ತಾಟಗಳು ನಡೆಯುತ್ತಿದ್ದವು.

ಸತಾರಾ, ಸಾಂಗ್ಲಿ ಮತ್ತು ಕೊಲ್ಹಾಪುರ ಶಿವಾಜಿಯು ರಾಜ್ಯಭಾರಕ್ಕೆ ಒಳಗಾಗಿದ್ದರೆ, ಪ್ರತಾಪಗಢದಲ್ಲಿನ ಅಫ್ಜಲ ಖಾನನ ಸಮಾಧಿಯ ಬಳಿ ಮುಸ್ಲಿಮರು ಸಾಮುದಾಯಿಕ ಆಚರಣೆ ನಡೆಸುತ್ತಾರೆ. ಇದು ಆರೆಸ್ಸೆಸ್/ಬಿಜೆಪಿಗೆ ಹೇಳಿ ಮಾಡಿಸಿದ ಸನ್ನಿವೇಶ. 2002ರಲ್ಲಿ ಕೋಮುವಾದಿ ಶಕ್ತಿಗಳು ಸಮಾಧಿಗೆ ಹಾನಿಯುಂಟು ಮಾಡಲು ಪ್ರಯತ್ನಿಸಿದರು. ಇದರಿಂದ ಸತಾರಾದಲ್ಲಿ ಗಲಭೆಗಳು ಮತ್ತು ವ್ಯಾಪಕ ಕೋಮುವಾದಿ ಘರ್ಷಣೆಗಳು ನಡೆದವು. ಈ ಹಿನ್ನೆಲೆಯಲ್ಲಿ, ಅಫ್ಜಲ ಖಾನನನ್ನು ಶಿವಾಜಿ ಕೊಲ್ಲುವುದನ್ನು ಒಂದು ಗಣೇಶೋತ್ಸವ ಮಂಡಳದಲ್ಲಿ ಚಿತ್ರಿಸಿದ್ದು ಈ ಮೊದಲು ಹೇಳಿದಂತೆ, ಒಂದು ಯೋಜಿತ ಪ್ರಚೋದನೆ.

ರಾಜಕೀಯ ಲಾಭಕ್ಕಾಗಿಯೇ

ಇದರಿಂದ ಒಂದು ವಾರದ ಕಾಲ ಈ ಜಿಲ್ಲೆಗಳಲ್ಲಿ ಹಿಂಸಾಚಾರ, ಕೋಮು ಘರ್ಷಣೆಗಳು ನಡೆದಿವೆ. ಹಲವೆಡೆ ಕರ್ಫ್ಯೂ ಜಾರಿಯಾಗಿದೆ. ಕೊಲ್ಹಾಪುರ ಜಿಲ್ಲೆಯ ಇಚಲಕರಂಜಿ ಒಬ್ಬ ಕೂಲಿಕಾರನನ್ನು ಇರಿದು ಕೊಂದ ಹಿನ್ನೆಲೆಯಲ್ಲಿ ನಡೆದ ಹಿಂಸಾಚಾರದಿಂದಾಗಿ ಕರ್ಫ್ಯೂಗೊಳಗಾಗಿದೆ. ಪವರ್‌ಲೂಮ್ ಪಟ್ಟಣವಾದ ಇಲ್ಲಿಂದ ಸಿಪಿಐ(ಎಂ)ಪ್ರತಿನಿಧಿ ಈ ಹಿಂದೆ ಕೆಲವು ಬಾರಿ ರಾಜ್ಯ ವಿಧಾನಸಭೆಗೆ ಆರಿಸಿ ಹೋಗಿದ್ದರು ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು. 'ಜನಜಂಗುಳಿ ಧಾರ್ಮಿಕ ಸ್ಥಳಗಳನ್ನು ಅಪವಿತ್ರಗೊಳಿಸಿತು, ಲೂಟಿ ನಡೆಸಿತು. ಅವರು ಪೋಲೀಸ್ ಠಾಣೆಗಳ ಮೇಲೂ ದಾಳಿ ನಡೆಸಿದರು' ಎಂದು ಈ ಪಟ್ಟಣದ ಪೋಲೀಸ್ ಸೂಪರಿಂಟೆಂಡೆಂಟ್ ಮಾಧ್ಯಮಗಳಿಗೆ ಹೇಳಿದ್ದಾರೆ. ಸಾಂಗ್ಲಿ, ಕೊಲ್ಹಾಪುರ ಮತ್ತು ಸತಾರಾ ಜಿಲ್ಲೆಗಳಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ-ಪಾಸ್ತಿ ಭಸ್ಮವಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಈ ರೀತಿ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸುವ ನೇರ ಗುರಿ ಕೋಮುವಾದಿ ಧ್ರುವೀಕರಣದ ಮೂಲಕ ರಾಜಕೀಯ ಲಾಭ ಗಿಟ್ಟಿಸುವುದು ಎಂಬುದರಲ್ಲಿ ಏನೂ ಸಂದೇಹವಿಲ್ಲ. ಮಹಾರಾಷ್ಟ್ರದಲ್ಲಿ ಮುಂದಿನ ತಿಂಗಳು ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಮಾಧ್ಯಮಗಳೂ ಇದನ್ನು ಗಮನಿಸಿವೆ. ಕೇಸರಿ ಕೂಟಕ್ಕೆ ಬಹಳ ಅಗತ್ಯವಾಗಿದ್ದ ರಾಜಕೀಯ ಪ್ರಯೋಜನ ದಕ್ಕಿದೆ ಎಂದು ಅವು ಟಿಪ್ಪಣಿ ಮಾಡಿವೆ. ಆದರೆ ಅಲ್ಲಿನ ಕಾಂಗ್ರೆಸ್-ಎನ್‌ಸಿಪಿ ರಾಜ್ಯ ಸರಕಾರ ಘರ್ಷಣೆಯ ವಾತಾವರಣ ಒಂದು ವಾರ ಮುಂದುವರೆಯಲು ಅವಕಾಶ ಕೊಟ್ಟಿತೇಕೆ ಎಂದು ವಿವರಿಸಬೇಕಾಗಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ತಕ್ಷಣ ಪರಿಣಾಮಕಾರಿ ಕ್ರಮ ಸಾಧ್ಯವಾಗಲಿಲ್ಲ ಎಂದು, ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಪರಿಣಾಮಕಾರಿಯಾಗಿ ಕಾನೂನು ವ್ಯವಸ್ಥೆ ಕಾಪಾಡಲು ಚುನಾವಣಾ ನೀತಿ ಸಂಹಿತೆ ಎಂದೂ ಅಡ್ಡಿ ಬರದು.

ನಡುಕ ಹುಟ್ಟಿಸುವ ಸಂಕೇತ

ಕೊನೆಗೂ ಸಪ್ಟೆಂಬರ್ 8ರಂದು ಮುಖ್ಯ ಮಂತ್ರಿಗಳು ಸರ್ವ ಪಕ್ಷ ಸಭೆ ಕರೆದರು. ಅಲ್ಲಿ ಮರುದಿನದಿಂದ ಗಣೇಶ ವಿಸರ್ಜನೆ ಆರಂಭವಾಗುವದು ಎಂಬ ಒಮ್ಮತಕ್ಕೆ ಬರಲಾಯಿತು. ಆದರೆ ವಾತಾವರಣ ಇನ್ನೂ ತಿಳಿಯಾಗಿಲ್ಲ.

ಇವೆಲ್ಲಾ ಮುಂಬರುವ ದಿನಗಳು ಹೇಗಿರಬಹುದು ಎಂಬುದರ ಸಂಕೇತ. ನಿಜವಾಗಿಯೂ ನಡುಕ ಹುಟ್ಟಿಸುವಂತದ್ದು. ಆರೆಸ್ಸೆಸ್/ಬಿಜೆಪಿಗೆ ತಮ್ಮ ಆಂತರಿಕ ಸಮಸ್ಯೆಗಳನ್ನು ಮರೆ ಮಾಚಲು, ಸ್ವಲ್ಪವಾದರೂ ರಾಜಕೀಯ ಅವಕಾಶವನ್ನು ಮರಳಿ ಪಡೆಯಲು ಕಟ್ಟಾ ಹಿಂದುತ್ವದ ಆಕ್ರಮಣಕಾರೀ ಅನುಸರಣೆ, ಅದರಿಂದಾಗಿ ಇನ್ನಷ್ಟು ಕೋಮುಧ್ರುವೀಕರಣ ಎಂಬುದು ದಿವ್ಯ ಸೂತ್ರ. ಆದರೆ ಇದು ಯಶಸ್ವಿಯಾಗುವುದಾದರೆ ಅದಕ್ಕೆ ದೇಶ ಭಾರೀ ಬೆಲೆ ತೆರಬೇಕಾಗುತ್ತದೆ. ಭಾರತದ ಸಮಗ್ರತೆ, ಸಾಮಾಜಿಕ ಸಾಮರಸ್ಯ ಮತ್ತು ಸಮೃದ್ಧಿಗಾಗಿ ಇಂತಹ ಒಂದು ಮಾರ್ಗಸೂಚಿಯನ್ನು ರಾಜಕೀಯವಾಗಿ ಸೋಲಿಸಬೇಕಾಗಿದೆ. ○

...ಎಳೆಯ ಮನದೊಳಗೆ ವಿಷದ ಕಳೆ...

ಪುಟ 2 ರಿಂದ

"ಖಾಸಗೀ' ಸಂಸ್ಥೆಗಳ ಸಹಭಾಗಿತ್ವ ಪಡೆಯಲಾಗಿದೆ. ಕುವೆಂಪು ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಸಾಯಿನಾಥ್, ಗೀತಾ ನಾಗಭೂಷಣರಂಥಹವರ ಬರಹಗಳಿಗೆ ಗೇಟ್‌ಪಾಸ್ ತೋರಿಸಲಾಗುತ್ತಿದೆ. ...ನ್ನು ಸಂಸ್ಕೃತ, ವೇದ ವಿಶ್ವವಿದ್ಯಾಲಯ, ಯೋಗ ವಿ.ವಿ.ಗಳು ನೆಲೆಗೊಳ್ಳುತ್ತಿವೆ. ಇನ್ನೂ ...ಭಯೋತ್ಪಾದನಾ ವಿರೋಧಿ ಅಭಿಯಾನ'ದ ...ಹೆಸರಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ನಡುವೆ ಭಯೋತ್ಪಾದನಾ ಬೀಜ ಬಿತ್ತಲಾಗಿದೆ. ಸಂಘ ಪರಿವಾರದ ಕೂಸಾಗಿರುವ ಎ.ಬಿ.ವಿ.ಪಿ ವಿದ್ಯಾರ್ಥಿ ಸಂಘಟನೆ, ಬಜರಂಗದಳ, ಶ್ರೀರಾಮಸೇನೆಗಳು, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಹಾಗೂ ಯುವಜನರ ಮೇಲೆ ಏನೋ ನೆಪವೊಡ್ಡಿ ಧಾಳಿ ನಡೆಸುತ್ತಲೇ ಇವೆ. ಉಡುಪು, ಆಹಾರದಲ್ಲಿಯೂ ಮತಾಂಧತೆ ಕೋಮು ವಿಭಜನೆ ತರಲಾಗಿದೆ. ಅದೇ ರೀತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಪ್ರಗತಿಪರ, ಚಿಂತಕರನ್ನು ದಂಡಿಸಲಾಗುತ್ತಿದೆ. ಹೀಗೆ ಒಂದೇ, ಎರಡೇ... ಇವು ಹೊರಗೆ ಕಾಣಿಸಿಕೊಂಡ ಕೆಲವು ಮಾತ್ರ !

ಇಂದು ದೇಶದ ಐಕ್ಯತೆ, ಸಮಗ್ರತೆಗೆ ಕೋಮುಸಾಮರಸ್ಯಕ್ಕೆ ಅಪಾಯವಿರುವಾಗ ಸಂಘ ಪರಿವಾರ ಪ್ರಣೀತ ಸಾಹಿತ್ಯವನ್ನು ಶಿಕ್ಷಣ ಸಂಸ್ಥೆಗಳಿಗೆ ಹಂಚುವುದು ಎಂತಹ ಅಪಾಯ ತರಲಿದೆ ಎಂಬುದನ್ನು ಪರಿಗಣಿಸಿ ಅಂತಹ ಯತ್ನಗಳನ್ನು ವಿರೋಧಿಸಬೇಕಿದೆ.

ಹಿಂದೆಯೂ ರಾಷ್ಟ್ರೋತ್ಥಾನದ ಹಲವು ಪುಸ್ತಕಗಳನ್ನು 'ಇನ್‌ಫೋಸಿಸ್' ಸಂಸ್ಥೆಯ ಟ್ರಸ್ಟ್ ಮೂಲಕ ಶಾಲೆಗಳಿಗೆ ಹಂಚಲಾಗಿದೆ ಎಂಬುದನ್ನು ಗಮನಿಸಬೇಕು. ಹೇಗಾದರೂ ಯಾವುದೇ ಸಂದಿಯಿಂದಲಾದರೂ ಒಳಗೆ ತೂರುವುದು 'ಪರಿವಾರ'ದ ಗುಣ. ಈಗಲಂತೂ ಸರ್ಕಾರವೇ ಪುಸ್ತಕ ಖರೀದಿಯ ಪ್ರಾಥಮಿಕ ನಿಯಮಗಳನ್ನು ಉಲ್ಲಂಘಿಸಿ ಪರಿವಾರದ ಪ್ರಕಾಶನಕ್ಕೆ ಬರೋಬ್ಬರಿ 17 ಕೋಟಿ ರೂಪಾಯಿಗಳ ವ್ಯವಹಾರ ನೀಡಿ ಅದನ್ನು ಆರ್ಥಿಕವಾಗಿಯೂ ಕೊಬ್ಬಿಸುತ್ತಿದೆ. ಅದರಲ್ಲೂ ಪ್ರದೇಶದ ಅಭಿವೃದ್ಧಿಗೆಂದು ಮೀಸಲಿಟ್ಟ ಶಾಸಕರ ನಿಧಿಯ ಸಾರ್ವಜನಿಕ ಹಣದ ದುರ್ವಿನಿಯೋಗವಾಗಿದೆ.

ಸರ್ಕಾರದ ಈ ಕ್ರಮಕ್ಕೆ ವ್ಯಾಪಕ ವಿರೋಧವು ವ್ಯಕ್ತವಾಗಿದೆ. ಆದ್ದರಿಂದ ಈ ಕೂಡಲೇ ಸರ್ಕಾರವು ಆ ಸಂಸ್ಥೆಯ ಜೀವವಿರೋಧಿ, ದೇಶವಿರೋಧಿ ಪುಸ್ತಕಗಳ ಖರೀದಿಯ ನಿರ್ದೇಶನವನ್ನು ಹಿಂತೆಗೆದುಕೊಳ್ಳಬೇಕು. ಇದಕ್ಕಾಗಿ ಇನ್ನೂ ಪ್ರಬಲವಾದ ಸಾರ್ವಜನಿಕ ಚಳುವಳಿ ಒತ್ತಡ ಹೆಚ್ಚಬೇಕು.

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು

ಚಳುವಳಿಗೆ ಧುಮುಕಿದ ಅಸಂಘಟಿತ ಕಾರ್ಮಿಕರು

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಅಸಂಘಟಿತ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸೆಪ್ಟೆಂಬರ್ 2 ರಿಂದ 11 ರವರೆಗೆ ರಾಜ್ಯಾದಾದ್ಯಂತ ನಡೆಯುತ್ತಿರುವ ಧರಣಿ ಸತ್ಯಾಗ್ರಹದಲ್ಲಿ ಸ್ಪೂರ್ತಿದಾಯಕವಾಗಿ ಭಾಗವಹಿಸುವುದರ ಮೂಲಕ ಹೋರಾಟದ ಸಾಗರಕ್ಕೆ ಸ್ಪೂರ್ತಿಯ ನದಿಗಳಾಗಿ ಸೇರಿದರು. 'ಎಂತಹ ದೌರ್ಜನ್ಯ ಬಂದರೂ ಎದುರಿಸುತ್ತೇವೆ. ಶ್ರೀಮಂತರ ಪರವಾಗಿರುವ ಬಿಜೆಪಿ, ಕಾಂಗ್ರೆಸ್ ಸರ್ಕಾರಗಳ ನೀತಿಗಳನ್ನು ಬಡ, ಮಧ್ಯಮವರ್ಗದ ನೌಕರರ, ಕಾರ್ಮಿಕರ ಪರವಾಗುವಂತೆ ಹೋರಾಡುತ್ತೇವೆ. ಇಲ್ಲವಾದಲ್ಲಿ ಅಂತಹ ಸರ್ಕಾರವನ್ನು ಅಧಿಕಾರದಿಂದಲೇ ಕಿತ್ತೊಗೆಯುತ್ತೇವೆ' ಎಂಬ ಸ್ಪಷ್ಟವಾದ ಸಂದೇಶವನ್ನು ಅಸಂಘಟಿತ ಕಾರ್ಮಿಕರು ಸರ್ಕಾರಕ್ಕೆ ನೀಡಿದರು. ರಾಜ್ಯದ ಎಲ್ಲಾ 29 ಜಿಲ್ಲೆಗಳಲ್ಲಿ 165ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಒಂದಲ್ಲ ಒಂದು ವಿಭಾಗಕ್ಕೆ ಸೇರಿದ ಕಾರ್ಮಿಕರು ಕೆಂಬಾವುಟ ಹಿಡಿದು ಹೋರಾಟದ ಪಣ ತೊಟ್ಟರು.

ಸೆಪ್ಟೆಂಬರ್ 15 ರಿಂದ ಜಿಲ್ಲಾಧಿಕಾರಿಗಳ ಕಛೇರಿ ಮುತ್ತಿಗೆ ಕಾರ್ಯಕ್ರಮವೂ ಅತ್ಯಂತ ಯಶಸ್ವಿಯಾಗಿ ನಡೆಯುವ ಭರವಸೆಯನ್ನು ಧರಣಿ ಸತ್ಯಾಗ್ರಹ ಮೂಡಿಸಿದೆ. ಹೆಚ್ಚು ಕಡಿಮೆ 10 ತಿಂಗಳ ಹಿಂದೆ ಸಹಿ ಸಂಗ್ರಹ ಚಳುವಳಿಯೊಂದಿಗೆ ಆರಂಭವಾದ ಈ ಚಳುವಳಿ ಕುರುಡು ಸರ್ಕಾರವನ್ನು ಎಬ್ಬಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯ್ತಿ , ಹಮಾಲಿ, ಕಟ್ಟಡ, ಆಟೋ, ಪ್ಲಾಂಟೇಷನ್, ಹೆಂಚು, ಗೇರುಬೀಜ, ಬೀಡಿ, ಸಾರಿಗೆ, ಕೈಗಾರಿಕಾ ಕಾರ್ಮಿಕರು ವಿವಿಧ ಇಲಾಖೆಗಳ ಗುತ್ತಿಗೆ ಕಾರ್ಮಿಕರು ಹೀಗೆ ಹತ್ತಾರು ಕೈಗಾರಿಕೆ, ಯೋಜನೆಗಳಿಗೆ ಸೇರಿದ ನೌಕರರು ಕಾರ್ಮಿಕರು ಒಗ್ಗಟ್ಟಾಗಿ ತಮ್ಮ ಶಕ್ತಿ ಪ್ರದರ್ಶನ ನಡೆಸಿದರು.

ಬೆಂಗಳೂರು ನಗರದಲ್ಲಿ ವಲಯವಾರು ಪ್ರತಿಭಟನೆಗಳು ನಡೆದಿದ್ದರೆ ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಹೊಸಕೋಟೆ, ನೆಲಮಂಗಲಗಳಲ್ಲಿ ಪ್ರತಿಭಟನೆ ನಡೆದಿವೆ.

ಮೈಸೂರು ಜಿಲ್ಲೆಯಲ್ಲಿ ಪ್ರತಿಭಟನೆಯ ತೀವ್ರತೆ ಜೋರಾಗಿತ್ತು. ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಬಹುತೇಕ 5 ದಿನಗಳು ಸರಾಸರಿ ನೂರರಿಂದ ನೂರೈವತ್ತು ನೌಕರರು ಧರಣಿಯಲ್ಲಿ ಭಾಗವಹಿಸಿದ್ದರು. ಟಿ.ನರಸೀಪುರದಲ್ಲಿ ಹಗಲುರಾತ್ರಿ ಧರಣಿ ನಡೆಸಿರುವುದು ವಿಶೇಷ.

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಪ್ರತಿದಿನವೂ 500 ರಿಂದ 600 ಮಂದಿ ಧರಣಿಯಲ್ಲಿ ಭಾಗವಹಿಸುತ್ತಿದ್ದರು. ಅಂಗನವಾಡಿ, ಬೀಡಿ, ಬಿಸಿಯೂಟ, ಕಟ್ಟಡ, ಆಟೋ ಚಾಲಕರು, ಹೆಂಚು ಮೊದಲಾದ ಕಾರ್ಮಿಕರು ಸರದಿಯಾಗಿ ಭಾಗವಹಿಸಿದ್ದ ಪ್ರತಿಭಟನೆಯಲ್ಲಿ



ಬೆಂಗಳೂರಿನಲ್ಲಿ ಪ್ರತಿಭಟನೆ

ಸಿಐಟಿಯು ರಾಜ್ಯ ಮುಖಂಡರಾದ ಕೆ.ಶಂಕರ್, ಜಿಲ್ಲಾ ಮುಖಂಡರಾದ ದಾಸು ಭಂಡಾರಿ, ಮಹಾಬಲ ವಡೇರ ಹೋಬಳಿ, ವಿ.ನರಸಿಂಹ, ಹೆಚ್.ನರಸಿಂಹ, ವೆಂಕಟೇಶ ಕೋಣಿ, ಚಂದ್ರಶೇಖರ್ ಮೊದಲಾದವರು ನೇತೃತ್ವ ವಹಿಸಿದ್ದರು. ಪ್ರಥಮ ದಿನ ಪಂಚಾಯಿತಿ ನೌಕರರು ಭಾಗವಹಿಸಿದ್ದು, ರಾಜ್ಯ ಉಪಾಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ ಭಾಗವಹಿಸಿದ್ದರು. ಜಿಲ್ಲಾ ಕೇಂದ್ರವಾದ ಉಡುಪಿಯಲ್ಲೂ ಪ್ರತಿಭಟನೆ ನಡೆದಿದೆ.

ದ.ಕ.: ದ.ಕ.ಜಿಲ್ಲೆಯ ಮಂಗಳೂರು, ಗುರುಪುರ ವಲಯ, ಮೂಡಬಿದ್ರೆ, ಉಳ್ಳಾಲ, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯಗಳ 200 ರಿಂದ 500 ಜನರವರೆಗೂ ಪ್ರತಿಭಟನೆ





ಮಂಗಳೂರಿನಲ್ಲಿ ಪ್ರತಿಭಟನೆ

ಕುಂದಾಪುರದಲ್ಲಿ ಬೇಡಿಕೆ ದಿನಾಚರಣೆ

ಕಲ್ಲು ಮಣ್ಣು, ಸಿಮೆಂಟ್ ಬಳಸಿ, ಬಹು ಅಂತಸ್ತಿನ ಕಟ್ಟಡ ಕಟ್ಟುವ ಕಾರ್ಮಿಕರಿಗಿಂದು ಜೋಪಡಿಯೇ ಗತಿಯಣ್ಣ, ಊರಿಗೆ ರಸ್ತೆ, ನದಿಗೆ ಸೇತುವೆ, ನೀರಾವರಿಗೆ ಅಣೆಕಟ್ಟು ಕಟ್ಟುವ ಕಾರ್ಮಿಕನ ಮನೆಗೆ ರಸ್ತೆಗಳೇ ಇಲ್ಲಣ್ಣ, ಕಾರ್ಮಿಕರಿಂದ ಓಟನ್ನು ಪಡೆದು ಸರಕಾರ ನಡೆಸುವ ಪಕ್ಷಗಳೇ ಕಾರ್ಮಿಕರ ಬದುಕನ್ನು ಕಣ್ತೆರೆದು ನೋಡಿ, ಮುಂತಾದ ಗಂಭೀರ ಘೋಷಣೆಗಳನ್ನು ಶಿಸ್ತುಬದ್ಧವಾಗಿ ಕೂಗುತ್ತ ಕುಂದಾಪುರ ತಾಲೂಕು ಕಟ್ಟಡ ಕಾರ್ಮಿಕರು ತಮ್ಮ ಸೆಪ್ಟೆಂಬರ್ 3 ರ ಬೇಡಿಕೆ ದಿನಾಚರಣೆಯನ್ನು ಅತ್ಯಂತ ಗಮನ ಸೆಳೆಯುವ ಮಾದರಿಯಲ್ಲಿ ಆಚರಿಸಿದರು. ತಾಲೂಕಿನ ವಿವಿಧ ಭಾಗಗಳಿಂದ ಸುಮಾರು 50 ಕಿಲೋ ಮೀಟರ್‌ಗಳ ದೂರದಿಂದ ತೀವ್ರವಾದ ಜಡಿ ಮಳೆಯಲ್ಲಿ ಆಗಮಿಸಿದ ಸುಮಾರು



600 ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರು ನಗರದ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆಸಿ ಕುಂದಾಪುರ ತಹಶೀಲ್ದಾರರ ಕಛೇರಿ ಎದುರು ಜಮಾಯಿಸಿ ಪ್ರತಿಭಟನಾ ಪ್ರದರ್ಶನ ನಡೆಸಿ ತಮ್ಮ ಅಖಿಲ ಭಾರತ ಮಟ್ಟದ ಬೇಡಿಕೆಗಳ ಪಟ್ಟಿಯನ್ನು ತಹಶೀಲ್ದಾರರ ಮುಖಾಂತರ ಪ್ರಧಾನ ಮಂತ್ರಿಯವರಿಗೆ ಸಲ್ಲಿಸಿದರು. ಕಳೆದ 3 ವರ್ಷಗಳಿಂದ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಸಂಘಟನೆಗೊಂಡ ಕಾರ್ಮಿಕರ ಮೊದಲ ಬೃಹತ್ ಪ್ರದರ್ಶನ ಇದಾಗಿದೆ. ಕಟ್ಟಡ ಕಾರ್ಮಿಕರೆಲ್ಲರಿಗೂ ಐಡಿ ಕಾರ್ಡ್ ವಿತರಿಸಿ, ಸಾಮಾಜಿಕ ಭದ್ರತಾ ಕಾನೂನನ್ನು ತಿದ್ದು ಪಡಿಗೊಳಿಸಿ ಎಲ್ಲಾ ರಾಜ್ಯಗಳಲ್ಲು ಜಾರಿಗೊಳಿಸಿ, ರಾಷ್ಟ್ರೀಯ ಸ್ವಸ್ತಿ ವಿಮಾ ಯೋಜನೆಯನ್ನು ಎಲ್ಲಾ ಅಸಂಘಟಿಗತ ಕಾರ್ಮಿಕರಿಗೂ ಅನ್ವಯಿಸಿ, ಕಟ್ಟಡ ಸಾಮಾಗ್ರಿಗಳ ಬೆಲೆಗಳನ್ನು ಇಳಿಸುವಂತೆ ಒತ್ತಾಯಿಸಿ ಸೇರಿದಂತೆ ಹಲವಾರು ಕಟ್ಟಡ ಕಾರ್ಮಿಕರಿಗೆ ಸೇರಿದ ಬೇಡಿಕೆಗಳನ್ನು ಪಟ್ಟಿಯಲ್ಲಿ ಒತ್ತಾಯಿಸಲಾಗಿದೆ. ಮೆರವಣಿಗೆಯ ಪೂರ್ವದಲ್ಲಿ ಕಾರ್ಮಿಕರನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ



ಚಂದ್ರಶೇಖರ ವಿ. ಕಾರ್ಮಿಕರ ಬೇಡಿಕೆಗಳ ಬಗ್ ಮತ್ತು ಹೋರಾಟದ ಬಗ್ಗೆ ಭಾಷಣ ಮಾಡಿದರು.

ಹೋರಾಟದ ನೇತೃತ್ವವನ್ನು ದಾಸ ಭಂಡಾರಿ, ಸುರೇಶ ಕಲ್ಲಾಗರ್, ವೆಂಕಟೇಶ್ ಕೋಣ ವಹಿಸಿದ್ದರು.

ವರದಿ: ಚಂದ್ರಶೇಖರ ವಿ.
ಕುಂದಾಪುರ

ಸಿದರು. ಹೆಂಚು, ಬೀಡಿ, ಗೇರುಬೀಜ,
ೋ, ಕಟ್ಟಡ ಮೊದಲಾದ ವಿಭಾಗಗಳಿಗೆ
ಿದ ಕಾರ್ಮಿಕರು ಭಾಗವಹಿಸುತ್ತಿದ್ದ ಈ
ಿಭಟನೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ



ಮಂಡ್ಯದಲ್ಲಿ

ಮಾಧವ, ಮುಖಂಡರಾದ
ರ್.ಶ್ರೀಯಾನ್, ವಸಂತ ಆಚಾರಿ,
ಲಕೃಷ್ಣಶೆಟ್ಟಿ, ಬಿ.ಎಂ.ಭಟ್, ಸುಕುಮಾರ್
ದಲಾದವರು ಭಾಗವಹಿಸಿದ್ದರು.
ಬೆಳಗಾಂ ಜಿಲ್ಲೆಯ ಬೆಳಗಾಂ, ಅಥಣಿ,
ಯಭಾಗ, ಚಿಕ್ಕೋಡಿ, ಹುಕ್ಕೇರಿ, ರಾಮದುರ್ಗ
ದಲಾದೆಡೆ ಕಾರ್ಮಿಕರು ಬೀದಿಗಿಳಿದು
ೋರಾಟ ನಡೆಸಿದ್ದು ಬಿಜಾಪುರ ಜಿಲ್ಲೆಯ
ಾಪುರ, ಇಂಡಿ, ಸಿಂಧಗಿ, ಬಾಗಲಕೋಟೆ
ಲ್ಲೆಯ ಬಾಗಲಕೋಟೆ, ಜಮಖಂಡಿ, ಬೀಳಗಿ,
ಧೋಳ ಮೊದಲಾದೆಡೆ ಉತ್ಸಾಹಭರಿತ
ಭಟನೆಗಳು ನಡೆದಿವೆ.
ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ, ಆಳಂದ,
ಚಿಂಚೋಳಿ, ಅಫಜಲಪುರ, ಜೇವರ್ಗಿ,
ಪುರ, ಸೇಡಂ, ಯಾದಗಿರಿ, ಶಹಾಪುರ,
ರ, ಬೀದರ್ ಜಿಲ್ಲೆಯ ಬಾಲ್ಕಿ,
ದ್, ಬಸವಕಲ್ಯಾಣ, ಹುಮ್ನಾಬಾದ್,
ಯಚೂರು ಜಿಲ್ಲೆಯ ರಾಯಚೂರು,
ದುರ್ಗ, ಲಿಂಗಸಗೂರು, ಮಾನ್ವಿ,
ವನೂರು, ಬಳ್ಳಾರಿ ಜಿಲ್ಲೆಯ ಬಳ್ಳಾರಿ,
ಕೂರು, ಸಿರಗುಪ್ಪ, ಹೊಸಪೇಟೆ, ಹೂವಿನ
ಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ,
ಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ,
ಗಿ, ಯಲ್ಬುರ್ಗ ತಾಲ್ಲೂಕುಗಳಲ್ಲಿ ಬಹುತೇಕ
ಲ್ಲಾ ತಾಲ್ಲೂಕುಗಳಲ್ಲಿ ಎಲ್ಲಾ ದಿನಗಳಲ್ಲಿ
ಭಟನೆ ನಡೆದಿದೆ. ಕೋಲಾರದ ಕೋಲಾರ,
ಮುಳಬಾಗಿಲು, ಬಂಗಾರಪೇಟೆ, ಮಾಲೂರು,
ಶ್ರೀನಿವಾಸಪುರ, ಚಿಂತಾಮಣಿಗಲ್ಲಿ, ತುಮಕೂರು
ಜಿಲ್ಲೆಯಲ್ಲಿ ತುಮಕೂರು, ಪಾವಗಡ, ಶಿರಾ,
ಚಿಕ್ಕನಾಯಕನಹಳ್ಳಿ, ತಿಪಟೂರು, ಗುಬ್ಬಿ,
ಕುಣಿಗಲ್, ಶಿವಮೊಗ್ಗದ ಶಿವಮೊಗ್ಗ, ಸೊರಬ,
ತೀರ್ಥಹಳ್ಳಿ, ಭದ್ರಾವತಿ ತಾಲ್ಲೂಕುಗಳಲ್ಲಿ,
ಕೊಡಗು ಜಿಲ್ಲೆ ಮಡಿಕೇರಿ, ವಿರಾಜಪೇಟೆಗಳಲ್ಲಿ,
ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲ,
ಕುಮಟಾ, ಹೊನ್ನಾವರ, ಭಟ್ಕಳ, ಸಿದ್ದಪುರ,
ಶಿರಸಿ, ಮುಂಡಗೋಡ, ಯಲ್ಲಾಪುರ,
ಹಳಿಯಾಳ, ಜೋಯ್ಡಾ ತಾಲ್ಲೂಕುಗಳಲ್ಲಿ
ಚಿತ್ರದುರ್ಗ ಮೊಳಕಾಲ್ಮೂರು, ಚಳ್ಳಕೆರೆ,
ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ,
ಹೊಸದುರ್ಗ ತಾಲ್ಲೂಕುಗಳಲ್ಲಿ, ದಾವಣಗೆರೆ
ಜಿಲ್ಲೆಯ ದಾವಣಗೆರೆ, ಹರಪನಹಳ್ಳಿ, ಹರಿಹರ,
ಗದಗ ಜಿಲ್ಲೆಯ ಗದಗ, ನರಗುಂದ, ರೋಣ,
ಮುಂಡರಗಿ, ಶಿರಹಟ್ಟಿಗಳಲ್ಲಿ, ಹಾವೇರಿಯಲ್ಲಿ
ಹಾವೇರಿ, ಹಾನಗಲ್, ಸವಣೂರು, ಬ್ಯಾಡಗಿ,
ರಾಣೆಬೆನ್ನೂರು, ಹಿರೇಕೆರೂರು, ಶಿಗ್ಗಾಂವಗಳಲ್ಲಿ
ಪ್ರತಿಭಟನೆ ನಡೆದಿದೆ. ಧಾರವಾಡ ಜಿಲ್ಲೆಗಳಲ್ಲಿ
ವಿವಿಧ ಸಂಘಟನೆಗಳಿಗೆ ಸೇರಿದ ಕಾರ್ಮಿಕರು
ಸಿಐಟಿಯು ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ
ನಡೆಸಿದರು.

ಸೆಪ್ಟೆಂಬರ್ 15ಕ್ಕೆ ಮುನ್ನಡೆ:

ಒಟ್ಟಾರೆಯಾಗಿ ಹೇಳಬೇಕೆಂದರೆ, ಬೆಲೆಗಳು ತೀವ್ರವಾಗಿ ಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಅಸಂಘಟಿತ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಿಸಬೇಕೆಂಬ ಚಳುವಳಿ ಅತ್ಯಂತ ನ್ಯಾಯಯುತವಾದುದು. ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿ, ಬಿಪಿಎಲ್ ಕಾರ್ಡು ನಿವೇಶನ, ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳಿಗಾಗಿ ನಡೆಯುತ್ತಿರುವ ಈ ಚಳುವಳಿ ಸೆಪ್ಟೆಂಬರ್ 15 ರಿಂದ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ ಹೋರಾಟಕ್ಕೆ ಇಂಬುಕೊಡುವುದರಲ್ಲಿ ಯಾವುದೇ ಸಂಶಯವಿಲ್ಲ.

ಟಿ.ನರಸಿಪುರದಲ್ಲಿ





ಕುಂದಾಪುರ : ಗ್ರಾಮ ಪಂಚಾಯತ್ ನೌಕರರ ಧರಣಿ ಮುಷ್ಕರ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಗ್ರಾಮ ಪಂಚಾಯತ್ ನೌಕರರಿಂದ ಕುಂದಾಪುರ ತಾಲ್ಲೂಕು ತಹಶೀಲ್ದಾರ್ ಕಛೇರಿ ಎದುರು ಯಶಸ್ವಿ ಮುಷ್ಕರ ನಡೆಸಲಾಯಿತು. ಗ್ರಾಮ ಪಂಚಾಯತ್ ನೌಕರರಾದ ಜಾಡಮಾಲಿ, ಜವಾನ ಪೌರ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ರೂ.6000, ಪಂಪು ಆಪರೇಟರ್, ನೀರ್ಗಂಟಿಗಳಿಗೆ ರೂ.6,900, ಕರವಸೂಲಿಗಾರ, ಗುಮಾಸ್ತ, ಗಣಕಯಂತ್ರ ಸಹಾಯಕರಿಗೆ 7,800 ರೂ.ಗಳನ್ನು ನಿಗದಿಪಡಿಸಬೇಕು. 3,196 ಗಳ ನಂತರ ಹೆಚ್ಚಳವಾದ ಸೂಚ್ಯಂಕಕ್ಕೆ ತುಟ್ಟಿಭತ್ಯೆ ನೀಡಬೇಕು. ಕರವಸೂಲಿ ಕೆಲಸವನ್ನು ಸ್ತ್ರೀ ಶಕ್ತಿ ಸಂಘಗಳಿಗಾಗಲಿ ಇತರೆ ಯಾವುದೇ ಏಜೆನ್ಸಿಗಳಿಗೆ ವಹಿಸಬಾರದು. ವೇತನ ಭದ್ರತೆಗಾಗಿ ಪ್ರತ್ಯೇಕ ಅನುದಾನ ನೀಡಬೇಕು. ಕಾರ್ಯದರ್ಶಿ 2 ಹುದ್ದೆಗೆ ಎಸ್‌ಎಸ್‌ಎಲ್‌ಸಿ ಪಾಸಾದ 10 ವರ್ಷ ಸೇವೆ ಸಲ್ಲಿಸಿದ ಎಲ್ಲಾ ನೌಕರರಿಗೆ ಶೇ.60 ರಷ್ಟು ನೇಮಕಾತಿ ನೀಡಬೇಕು. ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ) ನೇಮಕಾತಿಯಲ್ಲಿ 5 ವರ್ಷ ಸೇವೆ ಸಲ್ಲಿಸಿದ ಪದವೀಧರರಿಗೆ ಅವಕಾಶ ನೀಡಬೇಕು. ಗಣಕಯಂತ್ರ ಸಹಾಯಕರ ಹುದ್ದೆಗಳನ್ನು ಹೊರಗುತ್ತಿಗೆ ನೀಡಬಾರದು. ಪ್ರತಿಯೊಂದು ಗ್ರಾಮಪಂಚಾಯಿತಿಗೆ ಶಾಸನಬದ್ಧ ಅನುದಾನ ರೂ.25000 ಕೊಡಬೇಕು. ಗ್ರಾಮ ಪಂಚಾಯತ್ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಇತ್ಯಾದಿ ಬೇಡಿಕೆಗಳ ಮನವಿಯನ್ನು ಕುಂದಾಪುರ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯವರ ಮೂಲಕ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಅರ್ಪಿಸಲಾಯಿತು.

ಕರ್ನಾಟಕ ರಾಜ್ಯ ಗ್ರಾಮಪಂಚಾಯತ್ ನೌಕರರ ಸಂಘದ ರಾಜ್ಯ ಸಮಿತಿ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ, ಪಂಚಾಯತ್ ನೌಕರರ ಬೇಡಿಕೆಗಳನ್ನು ಈಡೇರಿಸಲು ಸೆಪ್ಟೆಂಬರ್ 15 ರ ಉಡುಪಿ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಹೇಳಿದರು. ಧರಣಿ ಮುಷ್ಕರದಲ್ಲಿ ವೆಂಕಟೇಶ ಕೋಣಿ, ನಾಗರಾಜ ದೇವಾಡಿಗ ಉಪ್ಪುಂದ, ರಾಜೇಂದ್ರ ಕೋಣಿ, ಶೇಖರ ಮರವಂತೆ, ಸಂಜೀವ ತೆಕ್ಕಟ್ಟೆ, ನಾರಾಯಣ ಬೀಜಾಡಿ, ಸುರೇಶ್‌ಕುಮಾರ್ ಶೆಟ್ಟಿ ಕಾಳಾವಾರ, ಮಾಧವ ಕೆ.ಎಂ.ಕೆದೂರು, ಚಂದ್ರ ಹೆಮ್ಮಾಡಿ, ಶಂಕರ ಬಿಲ್ಲವ ಶಿರೂರು, ಮಂಜುನಾಥ ಎಂ.ಚಿತ್ತೂರು, ಸುಮತಿ ಕೆದೂರು, ಗಜಾನನ ಸುಬ್ರಮಣ್ಯ ಪಡುವರಿ, ಉದಯ ಹಟ್ಟಿಯಂಗಡಿ, ಎಸ್.ಕೃಷ್ಣ ಹಾಲಾಡಿ, ಬಿ.ಸುಧಾಕರ ಶೆಟ್ಟಿ ಕಾಲ್ತೋಡು, ನಾರಾಯಣ ಶ್ಯಾನುಭೋಗ್ ಗಂಗೊಳ್ಳಿ ಮುಂತಾದವರು ನೇತೃತ್ವ ವಹಿಸಿದ್ದರು.

ವರದಿ: ವೆಂಕಟೇಶ ಕೋಣಿ



ಕುಂದಾಪುರದಲ್ಲಿ ಅಸಂಘಟಿತರ ಪ್ರತಿಭಟನೆ

ಸ್ಥಳ ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ. ಸಾವಿರಾರು ಜನ ಸೇರಿದ್ದಾರೆ. ನೂಕುನುಗ್ಗಲು; ಅವರ್‍ಯಾರು ಮರ್ಸಿ, ಬೆಂಜ್, ಫೋರ್ಡ್ ಕಾರು ಬುಕ್ ಮಾಡಲು ಬಂದವರಲ್ಲ. ರಾಜ್ಯ ಸರ್ಕಾರ ದಯಪಾಲಿಸುವ ರೇಷನ್ ಕಾರ್ಡ್‌ಗಾಗಿ ಅಲ್ಲಿ ನೆರದಿದ್ದಾರೆ ಅವರು. ಸ್ಥಳ ಅಂಜನಾನಗರ, ಮಾಗಡಿ ಮುಖ್ಯರಸ್ತೆಯಲ್ಲಿ ಸಿಗುವ ಒಂದು ಜಾಗ. ಅಲ್ಲೊಂದು ನೆಮ್ಮದಿ ಕೇಂದ್ರ ಅಂತ. ಆ ನೆಮ್ಮದಿ ಕೇಂದ್ರದ ಮುಂದೆ ನಿದ್ರೆಗೆಟ್ಟು, ನೆಮ್ಮದಿಗೆಟ್ಟು ನಿಂತ ಸುಮಾರು 300-400 ಜನರ ಸಾಲು. ನಡು ರಾತ್ರಿ ಯಾವ ಹೊತ್ತಿಗೆ ಬಂದು ಕ್ಯೂನಲ್ಲಿ ನಿಂತರೋ, ಇಲ್ಲ ಹಿಂದಿನ ದಿನವೇ ಇಲ್ಲಿಗೆ ಬಂದು ಇಲ್ಲೇ ಮಲಗಿದರೋ... ಜನಕ್ಕೆ ಪಡಿತರ ಚೀಟಿ ಬೇಕು. ಪಡಿತರ ಚೀಟಿ ಮಾತ್ರವಲ್ಲ. ನ್ಯಾಯವಾದ ಬೆಲೆಯ ರೇಷನ್ ಬೇಕು. ಇಲ್ಲ, ನಮ್ಮ ರಾಜ್ಯ ಕೇಂದ್ರ ಸರ್ಕಾರಗಳಿಗೆ ಅಂತಹ ಯಾವ ಉದ್ದೇಶವೂ ಇಲ್ಲ. ಹಸಿವಿನಿಂದ ಕಂಗೆಟ್ಟ ಜನರ ತೊಂದರೆಗಳ ಬಗೆಗೆ ಯಾವ ಪ್ರಾಮಾಣಿಕ ಕಳಕಳಿಯೂ ಇಲ್ಲ. ಇದ್ದಿದ್ದರೆ ಆಹಾರ ವಸ್ತುಗಳ ಮಾರುಕಟ್ಟೆಯಲ್ಲಿ ಭವಿಷ್ಯತ್ ವ್ಯಾಪಾರದಲ್ಲಿ 2007ರಲ್ಲಿ ತೊಡಗಿಸಿದ್ದ ಬಂಡವಾಳ 2009ರ ಹೊತ್ತಿಗೆ 14 ಪಟ್ಟು ಏರಲು ಅವಕಾಶ ನೀಡುತ್ತಿರಲಿಲ್ಲ.

ಕರ್ನಾಟಕದ 86 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ದೇಶದಲ್ಲಿ ಸರಿಸುಮಾರು ಅರ್ಧಕ್ಕರ್ಧ ಜಿಲ್ಲೆಗಳನ್ನು ಬರಪೀಡಿತವೆಂದು ಪರಿಗಣಿಸಲಾಗಿದೆ. ಆಹಾರದ ಉತ್ಪಾದನೆಯಲ್ಲಿ ಕುಸಿತ ಉಂಟಾಗಲಿದೆಯೆಂಬ ಅಂದಾಜುಗಳ ಪ್ರಕಟವಾಗಿವೆ. ಅಕ್ಕಿ, ಸಕ್ಕರೆ, ಬೇಳೆ, ಕಾಳು, ಎಣ್ಣೆ, ಆಹಾರ ಪದಾರ್ಥಗಳ ಬೆಲೆಗಳು ದಿನೇ ದಿನೇ ಏರುತ್ತಲೇ ನಡೆದಿವೆ. ಜನ ಆತಂಕಕ್ಕೆ ಗುರಿಯಾಗಿದ್ದಾರೆ.

ಜನರ ಆತಂಕ ಆಳುವವರಿಗೆ ಅರ್ಥವಾಗುವುದಿಲ್ಲ. ಆಳುವವರು ಅಂದಾಗ ನಮ್ಮವರು ಮಾತ್ರವಲ್ಲ. ಪೆಟ್ರೋಲ್ ತಯಾರಿಕೆಗೆ ಆಹಾರವನ್ನು ಬಳಸುವ ಅಮೇರಿಕಾ 'ಅರಸ'ರಿಗೂ ಅದು ಅರ್ಥವಾಗುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಆಹಾರ ವಸ್ತುಗಳ ಬೆಲೆಗಳು ಸುರುಳಿ ಸುರುಳಿಯಾಗಿ ಮೇಲೇರುತ್ತಿವೆ. ಫಸಲು ಬೆಳೆಯುವ ರೈತನಿಗಾದರೂ ಲಾಭವಿದೆಯೋ? ಎಂದರೆ ಅದು ಸಹ ಇಲ್ಲ. ಜೂಜು ಕಟ್ಟೆಯಲ್ಲಿ ಹಣ ತೊಡಗಿಸುವಂತೆ ಆಹಾರ ವಸ್ತುಗಳ ಮಾರುಕಟ್ಟೆಯಲ್ಲಿ ಹಣ ತೊಡಗಿಸಿದ ಖಾಸಗಿ, ದೇಶೀಯ ಬಹುರಾಷ್ಟ್ರೀಯ ಕಂಪನಿಗಳು ಲಾಭವನ್ನು ಕೊಳ್ಳೆ ಹೊಡೆಯುತ್ತವೆ. ಸರ್ಕಾರಗಳು ಇವುಗಳೊಂದಿಗೆ ಶಾಮೀಲಾಗಿವೆ.


ಪಶ್ಚಿಮ ಬಂಗಾಳ

ಐತಿಹಾಸಿಕ ಆಹಾರ ಆಂದೋಲನದ ಹೆಜ್ಜೆ ಗುರುತುಗಳು

ಆಗಸ್ಟ್ 31,2009 ರಂದು ಪಶ್ಚಿಮಬಂಗಾಳವು ಐತಿಹಾಸಿಕ ಆಹಾರ ಆಂದೋಲನದ 50ನೇ ವರ್ಷಾಚರಣೆ ಆಚರಿಸಿತು. ಈ ಆಂದೋಲನದ ಹೆಜ್ಜೆ ಗುರುತುಗಳೇನು? ಇವತ್ತಿನ ಪರಿಸ್ಥಿತಿಯಲ್ಲಿ ಈ ಕುರಿತು ನೆನಸಿಕೊಳ್ಳಬೇಕಾದ ಮಹತ್ವವೇನು? ಓದಿ...

ಈಗಾಗಲೇ ನಮ್ಮ ಮುಂದೊಂದು ಆಹಾರದ ಬಿಕ್ಕಟ್ಟಿದೆ. ಅದು ಮುಂದೆ ತೀವ್ರಗೊಳ್ಳುವುದು ಬಡಬಗ್ಗರ, ದುಡಿಯುವ ಜನರ ಬದುಕನ್ನು ಹುರಿದುಮುಕ್ಕುವಂತೆ ಆಹಾರ ವಸ್ತುಗಳ ಬೆಲೆಗಳು ಏರುವುದು ಬಹುತೇಕ ಖಾತರಿ ಎಂಬಂತೆ ಕಾಣುತ್ತಿದೆ.

ಆಗಸ್ಟ್ 31, 1959 - ಶಹೀದ್ ಮಿನಾರ್ ಚೌಕದಲ್ಲಿ ಐತಿಹಾಸಿಕ ರ್‍ಯಾಲಿ



ದೇಶದಲ್ಲಿ ಸಂಘ ಪರಿವಾರ ಜನರ ಹಿತಾಸಕ್ತಿ ಬಗೆಗೆ ಏನೊಂದು ತಲೆ ಕೆಡಿಸಿಕೊಳ್ಳದೇ ತನ್ನದೇ 'ಸೈದ್ಧಾಂತಿಕ' ಜಗಳದಲ್ಲಿ ಮುಳುಗಿದೆ. ಅದು ಆ ಕೆಸರಿನಿಂದ ಮೇಲೆದ್ದು ಜನರ ಸಂಕಟಗಳಿಗೆ ದನಿಯಾಗುವುದು ದೂರದ ಮಾತು. ಅಂತಹ ಇತಿಹಾಸ ಆ ಪಕ್ಷಕ್ಕೆ ಇಲ್ಲ. ಆಹಾರದ ಹಕ್ಕಿಗಾಗಿ, ಭೂಮಿಗಾಗಿ ಐತಿಹಾಸಿಕ ಆಂದೋಲನಗಳನ್ನು ಸಂಘಟಿಸಿದ ಹೆಮ್ಮೆಹೊಂದಿರುವ ದೇಶದ ಕಮ್ಯುನಿಸ್ಟ್ ಚಳುವಳಿ ಒಂದು ಬೃಹತ್ ಆಹಾರ ಆಂದೋಲನಕ್ಕೆ ಕರೆ ನೀಡಿದೆ. 1959ರ ಪಶ್ಚಿಮ ಬಂಗಾಳದ ಆಹಾರ ಆಂದೋಲನವನ್ನು ನೆನಸಿಕೊಳ್ಳದೇ ಆಹಾರ ಬಿಕ್ಕಟ್ಟು, ಆಹಾರದ ಸಮಸ್ಯೆ ಆಹಾರದ ಆಂದೋಲನದ ಕುರಿತು ಮಾತನಾಡುವುದೇನು? ಇದೋ ಇಲ್ಲಿ ಪಶ್ಚಿಮ ಬಂಗಾಳ ರಾಜ್ಯದ ರಾಜಕೀಯ ಚಿತ್ರಣವನ್ನು ಸಮೀಕರಣವನ್ನೇ ಬದಲಿಸಲು ನೆರವಾದ ಭೂಮಿ ಆಕ್ರಮಣ ಆಂದೋಲನದಷ್ಟೇ ಪ್ರಾಮುಖ್ಯತೆ ಪಡೆದ ಆಹಾರ ಆಂದೋಲನದ ಒಂದು ನುಡಿ ಚಿತ್ರ.

'ಸ್ವಾತಂತ್ರ್ಯ'ದ 12ನೇ ವರ್ಷದಲ್ಲಿ

1940ರ ದಶಕದಲ್ಲಿ ಬಂಗಾಳದಲ್ಲಿ ಕಂಡು ಬಂದ ಭೀಕರ ಕ್ಷಾಮಕ್ಕೆ ತುತ್ತಾಗಿ ಹಸಿವಿನಿಂದ ಒದ್ದಾಡಿ ಸುಮಾರು 5 ಲಕ್ಷ ಜನ ಪ್ರಾಣ ತೆತ್ತರಂತೆ. ಮತ್ತೊಮ್ಮೆ ಆಹಾರದ ಬಿಕ್ಕಟ್ಟು ಬುಗಿಲೆದ್ದಾಗ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 12ನೇ ವರ್ಷ. ಮೊದಲನೇ ಪಂಚವಾರ್ಷಿಕ ಯೋಜನೆ ಜಾರಿಯಾಗಿ, 2ನೇ ಪಂಚವಾರ್ಷಿಕ ಯೋಜನೆ ನಡೆಯುತ್ತಿದ್ದ ಕಾಲ. ಆದರೆ ಪಶ್ಚಿಮ ಬಂಗಾಳವು ಆಹಾರ ಬಿಕ್ಕಟ್ಟಿನಿಂದ ಹೊರಗೆ ಬರಲು ಆಗಿರಲಿಲ್ಲ.

ಜನರ ನಡುವೆ ಆಹಾರಕ್ಕಾಗಿ ಆಹಾಕಾರವೆದ್ದಿತ್ತು., ಆಹಾರ ಇತ್ತು. ಆದರೆ ಜನರ ಕೈಗೆ ಸಿಕ್ಕುವಂತಿರಲಿಲ್ಲ. ಅದು ಶ್ರೀಮಂತರು, ಭೂಮಾಲಕರ, ಕಾಳ ಸಂತೆಕೋರರ ಉಗ್ರಾಣ, ಗೋಡೌನುಗಳಲ್ಲಿ ರಾಶಿ ಬಿದ್ದಿತ್ತು. ಬಂಧಿಯಾಗಿತ್ತು. ಆ ಹಂತದಲ್ಲಿ ಒಂದು ಮಣ ಅಕ್ಕಿಗೆ (10ಕೆ.ಜಿ) 20-22 ರೂಪಾಯಿ ಇದ್ದ ಬೆಲೆ ಕೆಲವೇ ದಿನಗಳಲ್ಲಿ 34-35 ರೂಪಾಯಿಗೆ ಏರಿತಂತೆ. ಜನರ ನಡುವೆ ಅಸಮಧಾನ, ಅತೃಪ್ತಿ ಹೊಗೆಯಾಡಿತು. ಅದು ಕಾಂಗ್ರೆಸ್ ಸರ್ಕಾರ. ಬಿ.ಸಿ. ರೇ ಮುಖ್ಯಮಂತ್ರಿ. ಕಾಳಸಂತೆ ಕೋರರು, ಆಹಾರವನ್ನು ಅಕ್ರಮವಾಗಿ ಸಂಗ್ರಹಿಸುತ್ತಿದ್ದ ಲೂಟಿಕೋರರ ಮೇಲೆ ಕ್ರಮ ಕೈಗೊಳ್ಳುವಲ್ಲಿ ಏನೊಂದು ಆಸಕ್ತಿ ತೋರದ ಸರ್ಕಾರ ಆಹಾರ ಕೊರತೆ ನೆಪ ಹೇಳಿ ಕೈ ಚೆಲ್ಲಿ ಕುಳಿತಿತ್ತು.



ಆ 31, 1959 ಹೊಡೆತ ತಿನ್ನುತ್ತಿರುವ ಸುಭೋದ್ ಚಂದ್ರ ಹಲ್ದಾರ್

ಜನರ ಅತೃಪ್ತಿ ಆಕ್ರೋಶಗಳಿಗೆ ತೀವ್ರ ಆಂದೋಲನದ ರೂಪಕೊಟ್ಟಿದ್ದು, ಅಖಿಲ ಭಾರತ ಕಿಸಾನ್ ಸಭಾ, ಆಗಸ್ಟ್ 8,1959 ರಂದು ಬೆಲೆ ಏರಿಕೆ ಮತ್ತು ಹಸಿವಿನ ವಿರುದ್ಧ ಮುಸ್ಲಿಂ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಸಮಾವೇಶವು ರಾಜ್ಯ ಸರ್ಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿತು.

ಮುಖ್ಯಮಂತ್ರಿ ಗುಟುರು

ಸ್ವತಃ ಮುಖ್ಯಮಂತ್ರಿ ಬಿ.ಸಿ.ರೇ, ಚ
ನಡೆಸುವುದರ ವಿರುದ್ಧ ಗುಟುರು
ಚಳುವಳಿಗಾರರನ್ನು ಬೆದರಿಸಲು ಯತ್ನಿಸಿ
ಬೆದರಿಕೆಯ ಬೆನ್ನ ಹಿಂದೆಯೇ ಕಿಸಾನ್
ಮುಖಂಡರ ತಲಾಶ್, ಬಂಧನ, ಅವರನ್ನ
ಅಟ್ಟುವ ಚಟುವಟಿಕೆಗಳು ಭರದಿಂದ ನದ
ಬಿನೋಯ್ ಚೌಧರಿ, ಬೊವಾನಿ ಸೇನ್, ಬಿ
ಮುಖರ್ಜಿ, ಶ್ಯಾಮಪ್ರಸನ್ನ ಭಟ್ಟಾಚಾರ್ಯ ವ
ಮುಖಂಡರನ್ನು ಸರ್ಕಾರ ಬಂಧಿಸಿ ಜೈಲಿಗ
ಇಷ್ಟಾಗುವ ಹೊತ್ತಿಗೆ ಕಿಸಾನ್ ಸಭಾದ ಮುಖ
ಭೂಗತರಾಗಿ ಚಳುವಳಿ ಮುನ್ನಡೆಸುವ ಸ
ಸ್ವಿಕರಿಸಿದರು.

ಐತಿಹಾಸಿಕ ರ್‍ಯಾಲಿ-ಬಲಿದಾನ :

ಆಗಸ್ಟ್ 31, 1959 ಕಿಸಾನ್ ಸಭಾ ಕರೆ
ಆಹಾರಕ್ಕಾಗಿ ರಾಜ್ಯವ್ಯಾಪಿ ಚಳುವಳಿ. ಕ
ನಗರದ ಶಹೀದ್ ಮೀನಾರ್ ಮೈದಾನದಲ್ಲಿ
ಜನ ಸೇರಿದ್ದಾರೆ. ಕೊಲ್ಕತ್ತಾ ನಗರ ಮತ್ತು ಸುತ್ತ
ಹಳ್ಳಿಗಳಿಂದ ಊರುಗಳಿಂದ ಜನ ಧಾರೆ ಧಾರ
ಹರಿದು ಬಂದಿದ್ದಾರೆ. ಬೃಹತ್ ಪ್ರತಿಭಟನ
ಮುಗಿಸಿ ಜನರು ವಾಪಸ್ ತೆರ
ಅಣಿಯಾಗಿದ್ದಾರೆ. ಬಿ.ಸಿ.ರೇ ಸರ್ಕಾರದ 14
ಜನ ಪೋಲೀಸರು ಮೈದಾನದಲ್ಲಿ
ಮೇಲೆರಗುತ್ತಾರೆ. ಹಸಿದ ತೋಳಗಳಂತೆ
ಮೇಲೆ ಬಿದ್ದ ಪೋಲೀಸರ ಲಾಠಿ ಬಂ
ನರ್ತನಕ್ಕೆ ಮೈದಾನದಲ್ಲಿ ಹತ್ತಾರ
ಹೋರಾಟಗಾರರು ಹೆಣವಾಗಿ ಕೆಳಕ್ಕೆ ಬೀಳ
ಹರಡುತ್ತಿರುವ ತೀವ್ರ ಚಳುವಳಿಯನ್ನು ಹೇಗ
ಮಾಡಿ ದಮನಮಾಡಿಯೇ ತೀರಬೇಕೆ
ಸರ್ಕಾರದ ತೀರ್ಮಾನ. ಆಗಸ್ಟ್ 31
ಸೆಪ್ಟೆಂಬರ್ 3 ರವರೆಗೆ ಪೋಲಿಸರ ಗುಂಡು,
ಬಲಿಯಾದವರ ಸಂಖ್ಯೆ 80. 300ಕ್ಕೂ ಹ
ತೀವ್ರವಾಗಿ ಗಾಯಗೊಂಡು ಆಸ್ಪತ್ರ
ದಾಖಲಾಗುತ್ತಾರೆ. ಸರ್ಕಾರ 21 ಸಾ
ಹೆಚ್ಚು ಜನರನ್ನು ಬಂಧಿಸಿ ಜೈಲಿಗೆ ತ
ಯಾವ ವಿಚಾರಣೆಯೂ ಇಲ್ಲ. 'ಪ್ರಿವೆ
ಡಿಟೆನ್‌ಷನ್ ಆಕ್ಟ್' ಎಂಬ ದವ
ಕಾನೂನಿನ ಬಳಕೆ ಜನಪರ ಆಂದೋ
ಮರ್ಧಿಸಲು, ಹೊಸಕಿ ಹಾಕಿ ಬಿಡಲ

ದಿಢೀರ್ ಚಳುವಳಿ ಅಲ್ಲ

ಈ ಚಳುವಳಿ ಏಕಾಏಕಿ ಹುಟ್ಟ
ಸಾಂದರ್ಭಿಕ ಪ್ರತಿಕ್ರಿಯೆ ಏನೂ ಆಗ
ಅಖಿಲ ಭಾರತ ಕಿಸಾನ್ ಸಭಾ ಈ
ಆಹಾರದ ಪರಿಸ್ಥಿತಿಯನ್ನು ಜನರ
ಪಡಿಪಾಟಲುಗಳನ್ನು ನಿರಂತ
ಗಮನಿಸುತ್ತಲೇ ಆ ಬಗ್ಗೆ ಸೂಕ್ತ ಅ
ಮಾಡುತ್ತಲೇ ಬರುತ್ತಿತ್ತು.

ದೇಶ 'ಸ್ವಾತಂತ್ರ್ಯ' ಗಳಿಸಿ 1 ಡಜನ್
ದಾಟಿದ ಮೇಲೆ ಕಾಂಗ್ರೆಸ್ ಆಳ್ವಿಕೆಯ ಅ
ಆಹಾರದ ಪರಿಸ್ಥಿತಿ ಏನೆಂದರೆ ಎ
ಮಹಾಯುದ್ಧ ನಡೆಯುತ್ತಿದ್ದ 1939ರ ವ

ಪು


ಅದೇ ಚೌಕದಲ್ಲೇ..... ಅವಿಸ್ಮರಣೀಯ ರ್‍ಯಾಲಿ

1959 ಆಗಸ್ಟ್ 31 ರ ಆ ಕ್ರೂರ, ದಮನ, ಪೊಲೀಸರ ರಾಕ್ಷಸೀ ಲಾಠಿ ಪ್ರಹಾರ, ಗುಂಡುಗಳ ಮೊರೆತದ ಸದ್ದು, ರಕ್ತಸಿಕ್ತ ದೇಹಗಳು, ನೆಲಕ್ಕುರುಳಿದ್ದ ಸಂಗಾತಿಗಳನ್ನು ಕಂಡ ಎಷ್ಟೋ ಜನ ಈಗಲೂ ಇದ್ದಾರೆ. 50 ವರುಷಗಳು ಅಂದರೆ ಅರ್ಧ ಶತಮಾನಗಳು ಸರಿದುಹೋಗಿವೆ. ಇಲ್ಲಿ ಇದೇ ಚೌಕದಲ್ಲಿ ತಮ್ಮ 22 ರ ವಯಸ್ಸಿನಲ್ಲಿ ತೀವ್ರ ಲಾಠಿ ಪ್ರಹಾರಕ್ಕೆ ತುತ್ತಾದ ಸುಭೋದ್ ಚಂದ್ರ ಹಲ್ದಾರ್, ಈ ಅದೇ ಸುಭೋದ್‌ರಾಯ್ ಚೌಕದಲ್ಲಿ ಆಹಾರ ಆಂದೋಲನದ 50ನೇ ವರ್ಷಾಚರಣೆಯ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸುತ್ತಿದ್ದಾರೆ. 50 ವರ್ಷಗಳಲ್ಲಿ ಗಂಗಾನದಿಯಲ್ಲಿ ಹರಿದು ಸಮುದ್ರ ಸೇರಿದ ನೀರೆಷ್ಟು? ಈ ನಡುವೆ ಏನೆಲ್ಲಾ ಐತಿಹಾಸಿಕ ಘಟನಾವಳಿಗಳು, ಸ್ಥಿತ್ಯಂತರಗಳು ಆಗಿಹೋದವು.

ಆಗಸ್ಟ್ 31, 1959 ರ ಐತಿಹಾಸಿಕ ರ್‍ಯಾಲಿ ಬಂಗಾಳದ ಜಲಿಯನ್‌ವಾಲಾಬಾಗ್ ಎಂದೇ ಹೆಸರಾಯಿತು. ಎಡಪಕ್ಷಗಳ ನೇತೃತ್ವದ ಭೂಹೀನರ ಭೂಮಿ ಆಕ್ರಮಣ, ಆಂದೋಲನ, ಆಹಾರ ಆಂದೋಲನ ಇತ್ಯಾದಿ ಆಂದೋಲನಗಳು ಬಂಗಾಳದ ರಾಜಕಾರಣದ ದಿಕ್ಕನ್ನೇ ಬದಲಿಸಿದವು. ಮುಂದುವರಿದ ತೀವ್ರ ಆಂದೋಲನದ ಪ್ರತಿಫಲನವಾಗಿ 1967, 1969 ರಲ್ಲಿ ಸಿಪಿಐ(ಎಂ) ಭಾಗಿಯಾದ ಸಮ್ಮಿಶ್ರ ಸರ್ಕಾರಗಳು ಅಧಿಕಾರಕ್ಕೆ ಬಂದವು. ಜನತೆಗೆ, ಕೋಟಿ ಕೋಟಿ ದುಡಿಯುವ ಜನತೆಗೆ ತಮ್ಮ ಮಿತ್ರರಾರು, ಶತ್ರುಗಳು ಯಾರು ಎಂಬುದು ತಮ್ಮ ಜೀವನಾನುಭವದ ಮೂಲಕ ಮನವರಿಕೆಯಾಗುತ್ತಾ ಹೋಯಿತು. 1972 ರಿಂದ 1977 ರ ನಡುವೆ ಬಂಗಾಳದ ಕರಾಳ ತುರ್ತು ಪರಿಸ್ಥಿತಿ ಹಾಗೂ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯ ಕಠಿಣ ಅಗ್ನಿ ಪರೀಕ್ಷೆಯನ್ನು ಎದುರಿಸಿ ಗೆದ್ದು ಸಿಪಿಐ(ಎಂ) ಪಕ್ಷ ಎಡ ಚಳುವಳಿ ದೊಡ್ಡ ಮುನ್ನಡೆ ಗಳಿಸಿತು. 3000 ಜನ ಸಿಪಿಐ(ಎಂ) ಕಾರ್ಯಕರ್ತರು ಕಾಂಗ್ರೆಸ್ ಗೂಂಡಾಗಿರಿ ಮತ್ತು ಪೊಲೀಸ್ ದೌರ್ಜನ್ಯಗಳಲ್ಲಿ ಹುತಾತ್ಮರಾಗಿ ಹೋದರು. ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಬಂದ ಮೇಲೆ ಭೂಮಿತಿಗಿಂತ ಹೆಚ್ಚುವರಿಯಾದ ಭೂಮಿಯನ್ನು ಭೂಮಾಲಿಕರಿಂದ ಪಡೆದುಕೊಂಡು ಭೂಹೀನ ಕೂಲಿಕಾರರು ಬಡರೈತರಿಗೆ ಭೂಮಿ ಹಂಚುವ ಭೂ ಸುಧಾರಣೆ, ಗೇಣಿದಾರರಿಗೆ ಗೇಣಿಯ ಹಕ್ಕನ್ನು ಖಾತ್ರಿಪಡಿಸುವ ಗೇಣಿದಾರರ ನೊಂದಣಿ ಇಂತಹ ಹಲವು ಕ್ರಮಗಳಿಂದಾಗಿ ಇಂದು ಪಶ್ಚಿಮ ಬಂಗಾಳ ಆಹಾರ ಉತ್ಪಾದನೆಯಲ್ಲಿ ಪಂಜಾಬ್ ಹರ್ಯಾಣದಂತಹ ಉತ್ತರ ನೀರಾವರಿಯ ರಾಜ್ಯಗಳನ್ನು ಮೀರಿ ಪ್ರಥಮ ಸ್ಥಾನಕ್ಕೆ ಬಂದಿದೆ. 1940 ರ ದಶಕದಲ್ಲಿ 50, 60 ರ ದಶಕದಲ್ಲಿ ಕಂಡುಬಂದಂತಹ ಆಹಾರ ಬಿಕ್ಕಟ್ಟುಗಳು ಇಂದು ಪಶ್ಚಿಮ ಬಂಗಾಳವನ್ನು ಬಾಧಿಸುವ ಪರಿಸ್ಥಿತಿ ಇಲ್ಲ. ಅಕ್ಕಿ, ಆಲೂಗಡ್ಡೆ, ತರಕಾರಿ, ಹಣ್ಣುಗಳು, ಮೀನು, ಇತ್ಯಾದಿಗಳ ಉತ್ಪಾದನೆಯಲ್ಲಿ ಪಶ್ಚಿಮ ಬಂಗಾಳ ದೇಶಕ್ಕೆ ಮುಂಚೂಣಿಯಲ್ಲಿ ನಿಂತಿದೆ. ರಾಜ್ಯದ ಶೇ. 84 ರಷ್ಟು ಭೂಮಿ ಬಡವರ ಒಡೆತನಕ್ಕೆ



ಸೇರಿದೆ. ಸಮಗ್ರ ಭೂಸುಧಾರಣೆಯ ಮೂಲಕ ಕೃಷಿ ಪ್ರಗತಿಗೆ ಭದ್ರ ಬುನಾದಿ, ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ಅಧಿಕಾರ ವಿಕೇಂದ್ರೀಕರಣ, ಜನರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವಂತಹ ರಾಜಕೀಯ ಕ್ರಮಗಳಿಂದ ಸಿಪಿಐ(ಎಂ) ಮತ್ತು ಎಡರಂಗಗಳು ಪಶ್ಚಿಮ ಬಂಗಾಳದಲ್ಲಿ ಬಲವಾಗಿ ಬೇರೂರಿದವು. ಏಳು ವಿಧಾನಸಭಾ ಚುನಾವಣೆಗಳಲ್ಲಿ ನಿರಂತರವಾಗಿ ಸ್ಪಷ್ಟ ಬಹುಮತ ಸಾಧಿಸಿದವು.



ಸುಬೋದ್ - 31, 2009 ರ ರ್‍ಯಾಲಿಯಲ್ಲಿ

1977 ರಿಂದ 2009 32 ವರ್ಷಗಳ ಎಡರಂಗದ ಆಳ್ವಿಕೆ. ಆಳುವ ಕೇಂದ್ರ ಸರ್ಕಾರಗಳ ನಿರಂತರ ತಾರತಮ್ಯ - ಪಶ್ಚಿಮ ಬಂಗಾಳದ್ದೇ ಆದ ಹಲವು ಸಂಕೀರ್ಣತೆ-ಸಮಸ್ಯೆಗಳ ನಿರ್ದಿಷ್ಟ ಪರಿಸ್ಥಿತಿಯಲ್ಲಿಯೂ ಕೃಷಿ ಪ್ರಗತಿಯ ಭದ್ರ ಬುನಾದಿಯ ಮೇಲೆ ಕೈಗಾರಿಕಾ ಪ್ರಗತಿಯತ್ತ ರಾಜ್ಯವನ್ನು ಕೊಂಡೊಯ್ಯಲು ನಿರಂತರವಾಗಿ ಎಡರಂಗ ಶ್ರಮಿಸುತ್ತಿರುವಾಗ ರಾಜ್ಯದಲ್ಲಿ ಹೊಸ ಹೊಸ ಸವಾಲುಗಳು ಎದುರಾಗಿವೆ. ಕೇರಳದ ನಂತರ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯ ಪಶ್ಚಿಮ ಬಂಗಾಳದಲ್ಲಿ (ಪಶ್ಚಿಮ ಬಂಗಾಳ 948 ನಿರುದ್ಯೋಗದ ತೀವ್ರತೆ ಹೆಚ್ಚುತ್ತಿದೆ. ಅಭಿವೃದ್ಧಿಯ ಸಹಜ ಆಕಾಂಕ್ಷೆಗಳು ಜನರಲ್ಲಿ ರೂಪು ತಳೆದಿವೆ. 1977 ರಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹುಟ್ಟಿದ ಮಕ್ಕಳು ಇದೀಗ ಯುವಜನರಾಗಿದ್ದಾರೆ. ರಾಜ್ಯದ ಜನ ಸಂಖ್ಯೆಯ ದೊಡ್ಡ ಭಾಗವಾಗಿದ್ದಾರೆ. 1959 ರ ಆಹಾರ ಚಳುವಳಿ ಇರಲಿ, 1970 ರ ದಶಕದ ಕಾಂಗ್ರೆಸ್‌ನ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು, ಗೂಂಡಾಗಿರಿಯನ್ನು ಎದುರಿಸಿ ಸಿಪಿಐ(ಎಂ)ನ ಸಾವಿರಾರು ಕಾರ್ಯಕರ್ತರು ಜನತೆಗಾಗಿ, ಜನತೆಯ ಹಕ್ಕುಗಳಿಗಾಗಿ ತಮ್ಮ ಪ್ರಾಣಗಳನ್ನೇ ಅರ್ಪಿಸಿದ ತ್ಯಾಗವನ್ನು ಹೋರಾಟದ ಅಧ್ಯಾಯವನ್ನು ಅವರು ಕಂಡವರಲ್ಲ.

32 ವರ್ಷಗಳ ನಿರಂತರ ಅಧಿಕಾರ, ಎಡರಂಗ ಸರ್ಕಾರ ಕಾರ್ಯಕ್ರಮಗಳು ಹಾಗೂ ಪಕ್ಷದ ಸಂಘಟನೆಯಲ್ಲೂ ಉಳಿದುಹೋದ, ನುಸುಳಿಕೊಂಡ ದೌರ್ಬಲ್ಯಗಳು ಇತ್ತೀಚಿನ ಹಿನ್ನಡೆಗೆ ಒಂದಷ್ಟು ಕಾಣಿಕೆ ನೀಡಿವೆ. ಅದರ ಜೊತೆಗೆ ಎಡರಂಗದ ದುಡಿಯುವ ಜನರ ಪರವಾದ ನೀತಿಗಳನ್ನು ಹಾಗೂ ಪ್ರಾಬಲ್ಯವನ್ನು ಸಹಿಸಲಾರದೇ ಅಭಿವೃದ್ಧಿ ದಾರಿಯಲ್ಲಿ ನಿರಂತರವಾಗಿ ಅಡೆತಡೆಗಳನ್ನೇ ಒಡ್ಡುತ್ತಾ ರಾಜ್ಯದಲ್ಲಿ ಅರಾಜಕತೆ, ಹಿಂಸಾಚಾರ ಸೃಷ್ಟಿಸಲು ಮುಂದಾಗಿರುವ ಪಶ್ಚಿಮ ಬಂಗಾಳದ ಎಡರಂಗ ವಿರೋಧಿಗಳ ಅನೈತಿಕ ಮೈತ್ರಿಕೂಟ ಮತ್ತು ಈ ಮೈತ್ರಿಕೂಟದ ಅನಾಗರೀಕ, ಪ್ರಜಾಪ್ರಭುತ್ವ ವಿರೋಧಿ ಹಿಂಸಾ ರಾಜಕೀಯ ಮತ್ತು ಅರೆಸತ್ಯ, ಹಸೀ ಸುಳ್ಳುಗಳನ್ನಾಧರಿಸಿದ ಅಪಪ್ರಚಾರಗಳು ಫಲಿತಾಂಶದ ಮೇಲೆ ಪ್ರಭಾವ ಬೀರಿದೆ.

ಈ ಪರಿಸ್ಥಿತಿಯಲ್ಲಿ 2009 ರ ಲೋಕಸಭಾ ಚುನಾವಣಾ ಫಲಿತಾಂಶ ಎಡರಂಗಕ್ಕೆ ಒಂದು ಗಂಭೀರ ಹಿನ್ನಡೆಯಾಗಿ ಬಂದಿದೆ. 1984 ರ ಇಂದಿರಾ ಹತ್ಯೆಯ ಸಂದರ್ಭದ ಅನುಕಂಪದ ಅಲೆಯ ನಡುವೆಯೂ ಫಲಿತಾಂಶದಲ್ಲಿ ಬಹುಮತ ಕಾಯ್ದುಕೊಂಡ ಎಡರಂಗ ಇಂದು ಹಿನ್ನಡೆ ಕಂಡಿದೆ.

ಎಲ್ಲವೂ ಮುಗಿದಿಲ್ಲ

ಇಷ್ಟಾದರೂ ಎಲ್ಲವೂ ಮುಗಿದೇ ಹೋಗಿದೆಯೆಂಬ ಹತಾಶೆಯ ಭಾವನೆ ಸಿಪಿಐ(ಎಂ) ಮತ್ತು ಎಡರಂಗದಲ್ಲಿ ಇಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ 1 ಕೋಟಿ 85 ಲಕ್ಷಕ್ಕೂ ಹೆಚ್ಚು ಜನ ಎಡರಂಗಕ್ಕೆ ಮತ ನೀಡಿದ್ದಾರೆ. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ನಕ್ಸಲೀಯರು, ಮುಸ್ಲಿಂ ಮೂಲಭೂತವಾದಿಗಳಂತಹ ಹಲವು ಎಡರಂಗ ವಿರೋಧಿ ಕೂಟದ ಅತ್ಯಂತ ವ್ಯವಸ್ಥಿತ ದಾಳಿ, ಅಪಪ್ರಚಾರ, ವಿಷ ಪ್ರಚಾರದ ನಡುವೆಯೂ ಎಡರಂಗದ ಮೇಲೆ ವಿಶ್ವಾಸವಿಟ್ಟ ದೊಡ್ಡ ಸಮುದಾಯವಿದೆ.

ಹೊಮ್ಮಿತು ಹೊಸ ಉತ್ಸಾಹ

ದೂರಸರಿದ ಕೆಲವೊಂದು ಜನವಿಭಾಗಗಳ ವಿಶ್ವಾಸವನ್ನು ಮರಳಿ ಗಳಿಸುವ ಎಡರಂಗದ ಪ್ರಾಮಾಣಿಕ ಪ್ರಯತ್ನ, ತನ್ನ ತಪ್ಪುಗಳನ್ನು ತಿದ್ದುಕೊಳ್ಳುವ- ಕೊರತೆಗಳನ್ನು ಸರಿಪಡಿಸಿಕೊಳ್ಳುವ ಸಿಪಿಐ(ಎಂ) ಮತ್ತು ಎಡರಂಗದ ಸರ್ಕಾರದ ಪ್ರಾಮಾಣಿಕ ಪ್ರಯತ್ನಕ್ಕೆ ಫಲ ಸಿಗಲಾರಂಭಿಸಿದೆ ಎಂಬುದಕ್ಕೆ ಆಗಸ್ಟ್ 31, 2009 ರಂದು ಅದೇ ಐತಿಹಾಸಿಕ ಶಹೀದ್ ಮಿನಾರ್ ಚೌಕದಲ್ಲಿ ನಡೆದ ಅವಿಸ್ಮರಣೀಯ ರ್‍ಯಾಲಿ ಸಾಕ್ಷಿಯಾಯಿತು. ಅಲ್ಲಿ ನೆರೆದ ಎಡರಂಗದ ಕಾರ್ಯಕರ್ತರಲ್ಲಿ ಹುರುಪು ತುಂಬಿತ್ತು. ಉತ್ಸಾಹ ಹೊಮ್ಮುತ್ತಿತ್ತು.

ರ್‍ಯಾಲಿಯಲ್ಲಿ ನೆರೆದದ್ದು ಬರೋಬ್ಬರಿ 6-7 ಲಕ್ಷ ಜನ. ತೀರಾ ಬಿಗಿಹಿಡಿದು ಲೆಕ್ಕ ಹಾಕಿದವರೂ 5 ಲಕ್ಷಕ್ಕಿಂತ ಕಮ್ಮಿ ಇಲ್ಲ ಎಂದಿದ್ದಾರೆ. ತನ್ನ ಎಂದಿನ ತ್ಯಾಗ ಬಲಿದಾನದ ಪರಂಪರೆಯಲ್ಲಿ ಪುಟಿದೆದ್ದು ನಿಲ್ಲುವ ಸ್ಥೈರ್ಯವನ್ನು ಎಡರಂಗದ ಕಾರ್ಯಕರ್ತರಲ್ಲಿ ತುಂಬಿದ್ದೇ ಈ ಬೃಹತ್ ರ್‍ಯಾಲಿಯ ದೊಡ್ಡ ಸಾಧನೆ.

ಆಗಸ್ಟ್, ಸೆಪ್ಟೆಂಬರ್ 1959 ರಲ್ಲಿ ಪ್ರಾಣಾರ್ಪಣೆ ಮಾಡಿದ 80 ಜನ ಸಂಗಾತಿಗಳಿಗೆ ಲಕ್ಷಾಂತರ ಜನತೆ ತಮ್ಮ ಶ್ರದ್ಧಾಂಜಲಿ, ಗೌರವ ಸಲ್ಲಿಸಿದರು. ಅಷ್ಟು ಮಾತ್ರವಲ್ಲ, ಮೇ 14, 2006 ರಂದು ಎಡರಂಗ ಸರ್ಕಾರ ಸತತ 7ನೇ ಬಾರಿಗೆ ಅಧಿಕಾರಕ್ಕೆ ಬಂದ ಮೇಲೆ ತೃಣಮೂಲ, ನಕ್ಸಲ್, ಕಾಂಗ್ರೆಸ್ ಗೂಂಡಾದಾಳಿಯಲ್ಲಿ ಇಲ್ಲಿಯವರೆಗೆ ಪ್ರಾಣ ಕಳೆದುಕೊಂಡ ಒಟ್ಟು 293 ಸಂಗಾತಿಗಳಿಗೂ ನೆರೆದ ಲಕ್ಷಾಂತರ ಜನ ಎಡರಂಗದ ಬೆಂಬಲಿಗರು ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

1959 ರ ಆಹಾರ ಆಂದೋಲನದ ನೇತಾರ, ದೇಶದ ಕಮ್ಯೂನಿಸ್ಟ್ ಚಳುವಳಿ ಹಿರಿಯ ಚೇತನ ಕಾಮ್ರೇಡ್ ಜ್ಯೋತಿ ಬಸು ನೇರವಾಗಿ ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೂ ತಮ್ಮ ಅಮೂಲ್ಯ ಸಂದೇಶವನ್ನು ಕಳಿಸಿದ್ದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಎಡರಂಗದ ಅಧ್ಯಕ್ಷರಾದ ಕಾಂ.ಭೀಮನ್ ಬಸು ಮುಂತಾದವರು ರ್‍ಯಾಲಿಯಲ್ಲಿ ನೆರೆದ ಜನರನ್ನುದ್ದೇಶಿಸಿ ಮಾತನಾಡಿದ್ದಾರೆ.

ವೇದಿಕೆಯಲ್ಲಿ ಮೇಲೆ ಹೇಳಲಾದ ನಾಯಕರು ಮಾತ್ರವೇ ಇರಲಿಲ್ಲ. 1959 ರ ಚಳುವಳಿಯಲ್ಲಿ ಪ್ರಾಣ ಅರ್ಪಿಸಿದ ಸಂಗಾತಿಗಳ ಬಂಧುಗಳು ಹಾಗೂ 2006 ರಿಂದೀಚೆಗೆ ಎಡರಂಗ ವಿರೋಧಿಗಳ ದಾಳಿಗೆ ಗುರಿಯಾಗಿ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳ ಬಂಧುಗಳು ಇದ್ದರು. ಅವರಿಗಾಗಿ ವಿಶೇಷವಾದ ವೇದಿಕೆಯನ್ನು ಸಿದ್ಧ ಮಾಡಲಾಗಿತ್ತು.

'ಮನುಸ್ಮೃತಿ'ಯಲ್ಲಿ ಮಹಿಳೆ

ಭಾಗ 2

'ಪತಿ ಸೇವೆಯೇ ಎಲ್ಲ ಯಜ್ಞ - ಪೂಜೆ'

ಜಿ.ಎನ್.ನಾಗರಾಜ್

ನಾಸ್ತಿ ಸ್ತ್ರೀಣಾ ಪೃಥಗ್ಯಾಜ್ಞೋ ನವ್ರತಂ ನಾಪ್ಯುಪೋಷಿತಂ
ಪತಿ ಶುಶ್ರೂಷತೇಯೇನತೇನ ಸ್ವರ್ಗೇ ಮಹೀಯತೇ 5 (155)

ಸ್ತ್ರೀಗೆ ಯಜ್ಞ ಪೂಜೆ ವ್ರತ, ಉಪವಾಸಬೇಕಾಗಿಲ್ಲ. ಪತಿ ಶುಶ್ರೂಷೆಯಿಂದಲೇ ಸ್ವರ್ಗವನ್ನು ಪಡೆಯುತ್ತಾಳೆ

ಕೆಟ್ಟವನಾಗಿದ್ದರೂ, ಕಾಮುಕನಾಗಿದ್ದರೂ ಪತಿ ಸೇವೆ ಮಾಡಬೇಕು

ವಿಶೀಲಃ ಕಾಮವೃತ್ತೋ ವಾಗುಣೈರ್ವಾನ ಪರಿವರ್ಜಿತಃ
ಉಪಚರ್ಯಃ ಸ್ತ್ರೀ ಯಾ ಸ್ವಾಧ್ವ್ಯಾಸತತಂ ದೇವವತ್ಪತಿಃ

ಪತಿಯು ನಡತೆ ಕೆಟ್ಟವನಾಗಿದ್ದರೂ, ಕಾಮಾತುರನಾಗಿ ಪರಸ್ತ್ರೀ ಸಂಬಂಧ ಹೊಂದಿದ್ದರೂ,ಗುಣಹೀನನಾಗಿದ್ದರೂ ಸ್ತ್ರೀ ಗಂಡನನ್ನು ಸತತವಾಗಿ ದೇವರೆಂದೇ ಭಾವಿಸಿ ಸೇವೆ ಸಲ್ಲಿಸಬೇಕು.

ಸ್ತ್ರೀ ಚಂಚಲೆ, ಚಪಲಚಿತ್ತಳು ಎಂಬ ವೇದೋಕ್ತಿ

ತಥಾಚಶ್ರುತಯೋ ಬಹ್ವ್ಯೋನಿಗೀತಾ ನಿಗಮೇಷ್ವಪಿ - 9 (19)

ಸ್ತ್ರೀಯರು ಸಾಮಾನ್ಯವಾಗಿ ಚಪಲ ಚಿತ್ತವುಳ್ಳವರು, ವ್ಯಭಿಚಾರ ಮನಸ್ಕರು ಎಂಬ ಬಗ್ಗೆ ವೇದಗಳಲ್ಲಿಯೇ ಪ್ರಮಾಣಗಳಿವೆ. ಪಾಂಶ್ಚಲ್ಯಾಚ್ಚಲಚಿತ್ತಾಚ್ಚ ನೈಸ್ನೇಹ್ಯಾಚ್ಚ ಸ್ವಭಾವತಃ - 9 (15)

ಚಂಚಲಚಿತ್ತರಾದ ಸ್ತ್ರೀಯರು, ಚಪಲತೆಯಿಂದ ಪತಿಯಲ್ಲಿ ಸ್ನೇಹಾನುರಕ್ತಿ ಇಲ್ಲದಿರುವುದರಿಂದ ಗಂಡಂದಿರಿಗೆ ದ್ರೋಹ ಬಗೆಯುತ್ತಾರೆ.

ಶಯ್ಯಾ ಸನಮಲಂಕಾರಂ ಕಾಮಂ ಕ್ರೋಧಾ ಮನಾರ್ಜವಂ

ದ್ರೋಹಭಾವಂ ಕುಚರ್ಯಾಂಚ ಸ್ತ್ರೀಭ್ಯೋ ಮನುರಕಲ್ಪಯತ್

ಮಲಗುವುದು, ಆಸನ, ಅಲಂಕಾರ ಇವುಗಳ ಮೋಹ, ಕಾಮ, ಕ್ರೋಧ, ಅಪ್ರಮಾಣಿಕತೆ, ಪತಿ ದ್ರೋಹ, ದುರ್ನಡತೆ ಸ್ತ್ರೀಯಲ್ಲಿರುವ ಸ್ವಾಭಾವಿಕ ಗುಣಗಳೆಂದು ಮನುವು ಹೇಳುತ್ತಾನೆ.

ಏವಂ ಸ್ವಭಾವಂ ಜ್ಞಾತ್ವಾಸಾಂ ಪ್ರಜಾಪತಿ ನಿಸರ್ಗಜಂ
ಪರಮಂ ಯತ್ನ ಮಾತಿಷ್ಠೇತ್ಪುರುಷೋ ರಕ್ಷಣಂ ಪ್ರತಿ
- 9-16

ಇಂತಹ ಸ್ವಭಾವಗಳು ಸ್ತ್ರೀಯರಿಗೆ ನಿಸರ್ಗ ಸಹಜ. ಆದ್ದರಿಂದ ಪುರುಷನು ಪರಮ ಯತ್ನ ಮಾಡಿ ಅವಳ ರಕ್ಷಣೆ ಮಾಡಬೇಕು.

ಅಷ್ಟೇ ಅಲ್ಲ ನಾರೀಣಾಂ ನರಾಣಮಿವ ದೂಷಣಂ

ಸ್ವಭಾವ ಏಷ ನಾರೀಣಾಂ ನಾರಾಣಮಿಹ ದೂಷಣಂ
- 2-213

ಪುರುಷರ ಮನಸ್ಸನ್ನು ಕೆಡಿಸುವುದೇ ನಾರಿಯರ ಸ್ವಭಾವವಾಗಿದೆ.

ಪ್ರಮದಾ ಹ್ಯುತ್ಪಥಂ ನೇತುಂ ಕಾಮಕ್ರೋಧವಶಾನುಗಂ
- 2-214

ಪಂಡಿತನೇ ಇರಲಿ ಪಾಮರನೇ ಇರಲಿ, ಪುರುಷನನ್ನು ದಾರಿ ತಪ್ಪಿಸುವುದು ಸ್ತ್ರೀಯರ ಗುಣ.

ನೈತಾ ರೂಪಂ ಪರೀಕ್ಷಂತೇ ನಾಸಾಂ ವಯಸಿ ಸಂಸ್ಥಿತಿಃ
ಸುರೂಪಂ ವಾ ವಿರೂಪಂ ವಾ ಪುಮಾನಿತ್ಯೇಯ ಭುಂಜತೇ - 9-14

ಸ್ತ್ರೀಯರು ಸುರೂಪಿಯೇ ಕುರೂಪಿಯೇ ವಯಸ್ಸೇನು ಎಂಬುದನ್ನು ಲೆಕ್ಕಿಸದೇ ಪುರುಷನನ್ನು ಭೋಗಿಸುವರು.

ಚಂಚಲೆ ಎಂಬ ದೂಷಣೆ ಏಕೆ?

ಸ್ತ್ರೀಯರು ಸ್ವಭಾವ ಸಹಜವಾಗಿ ಚಂಚಲೆಯರು ಚಪಲಚಿತ್ತೆಯರು, ಪುರುಷರನ್ನು ಕೆಡಿಸುವವರು, ರೂಪ, ವಯಸ್ಸುಗಳನ್ನು ನೋಡದೇ ಭೋಗಿಸುವವರು ಎಂದು ದೂಷಣೆಯ ಹೊರೆಯನ್ನೇ ಹೇರುವ ಮನುಸ್ಮೃತಿಕಾರ ಪುರುಷರ ಕಾಮುಕತನ, ಚಪಲತೆಗಳ ಬಗ್ಗೆ ಏನು ಹೇಳುತ್ತಾನೆ? ಏನೂ ಹೇಳುವುದಿಲ್ಲ. ಹಾಗಾದರೆ ಪುರುಷರ ಈ ಸದ್ಗುಣ(?)ದ ಬಗ್ಗೆ ಅವನಿಗೆ ಏನೂ ತಿಳಿಯದೇ? ಅಥವಾ ಮುಚ್ಚಿಡಬಯಸುತ್ತಾನೆಯೇ? ಮನುಸ್ಮೃತಿಯ ಹಲವೆಡೆಯಲ್ಲಿ ಪುರುಷರ ಕಾಮುಕತನದ ಬಗ್ಗೆ....

ಪುರುಷರ ಕಾಮುಕತನದ ಬಗ್ಗೆ ಮನುಸ್ಮೃತಿಕಾರನಿಗೆ ಸಾಕಷ್ಟು ಗೊತ್ತಿದೆ ಎಂಬ ಬಗ್ಗೆ ಉದ್ದಕ್ಕೂ ಪುರಾವೆಗಳು ಸಿಗುತ್ತವೆ. ಆದರೆ ಸ್ತ್ರೀಯರನ್ನು ವಾಚಾಮಗೋಚರವಾಗಿ ನಿಂದಿಸುವಂತೆ, ಖಂಡಿಸುವಂತೆ, ಅವರ "ರಕ್ಷಣೆ" ಮಾಡುವಂತೆ ಒತ್ತಾಯಿಸುವಂತೆ ಪುರುಷರ ಈ ಸುಗುಣದ ಬಣ್ಣನೆಗೆ ಕೈಹಾಕುವುದಿಲ್ಲ. ಬದಲಾಗಿ ಹಲವು ಬಾರಿ ಮೇಲೆ 2(213), 2(214) ಶ್ಲೋಕಗಳಲ್ಲಿ ನೋಡಿದಂತೆ ಪುರುಷರ ಚಪಲದ ಹೊಣೆಯನ್ನೂ ಸ್ತ್ರೀಯರಿಗೇ ವರ್ಗಾಯಿಸಲಾಗಿದೆ. ಉಳಿದಂತೆಲ್ಲಾ ಕಾಮುಕತನಕ್ಕೆ ಅರ್ಧ ಸಮ್ಮತಿ ಅಥವಾ ಆಕ್ಷೇಪಣೆ ಹಾಕುವ ನೆಪದಲ್ಲಿ ಪೂರ್ಣಸಮ್ಮತಿಯನ್ನೂ ನೀಡಿದೆ. ಕೆಲವು ದಂಡ ಹಾಕುವ ಮೂಲಕ ಜಾತಿಪದ್ಧತಿಯ ನಿಯಮಗಳ ಬೇಲಿಯೊಳಗೆ ತಮ್ಮ ಚಪಲವನ್ನು ತಣಿಸಿಕೊಳ್ಳುವಂತೆ ಸೂಚನೆ ನೀಡಿದೆ.

ಗಂಡಸರ ಕಾಮುಕತನಕ್ಕೆ ಲೈಸೆನ್ಸ್

ಸವರ್ಣಾಗ್ರೇದ್ವಿಜಾತಿನಾಂ ಪ್ರಶಸ್ತಾದಾರ ಕರ್ಮಣಿ ಕಾಮತಸ್ತು ಪ್ರವೃತ್ತಾನಾಮಿಮಾಃ ಸ್ಯುಃಕ್ರಮಶೋವರಾಃ 3(12)

ದ್ವಿಜಾತಿ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮೊದಲಾದ ಮೇಲಿನ ಮೂರು ವರ್ಣಗಳು)ಗಳು ಮೊದಲ ವಿವಾಹದಲ್ಲಿ ತಮ್ಮ ತಮ್ಮ ಜಾತಿಯ ಕನ್ಯೆಯೇ ಆಗಬೇಕು. ಕಾಮುಕ್ಕಾಗಿ ನಂತರ ಬೇಕಾದ ಜಾತಿಯವಳನ್ನು ಮದುವೆಯಾಗಬಹುದು.

ಹೀಗೆ ಸ್ತ್ರೀ ಚಂಚಲೆ, ಆದ್ದರಿಂದ ಅವಳನ್ನು ನಿಯಂತ್ರಣದಲ್ಲಿಡಬೇಕು. ಪತಿಯನ್ನು ಬಿಟ್ಟು ಬೇರೆಯವರನ್ನು ಕಣ್ಣೆತ್ತಿಯೂ ನೋಡಬಾರದು. ಆದರೆ ಗಂಡು ಬೇಕಾದಷ್ಟು ಜನರನ್ನು ಮದುವೆಯಾಗಬಹುದು. ಕಾಮಕ್ಕಾಗಿ ತಮ್ಮ ಜಾತಿಯವರಲ್ಲದವರನ್ನು ಬೇಕಾದರೂ ಮದುವೆಯಾಗಬಹುದು. ಮುಸ್ಮೃತಿಯಲ್ಲೆಲ್ಲೂ ಇಷ್ಟೇ ಮದುವೆಯಾಗಬೇಕು ಎಂಬ ನಿರ್ಬಂಧವನ್ನು ಗಂಡಸಿಗೆ ವಿಧಿಸಿಲ್ಲ. ಜಾತಿ ವ್ಯವಸ್ಥೆ ಕುಸಿದುಬೀಳದಂತೆ ಮದುವೆ, ಆಸ್ತಿಯ ಹಂಚಿಕೆಯಾಗಬೇಕು ಎಂಬ ಕಾಳಜಿ ಮಾತ್ರ ಅಪಾರವಾಗಿ ವ್ಯಕ್ತವಾಗಿದೆ. ಅದಕ್ಕಾಗಿ ಮೇಲಿನ ಶ್ಲೋಕ ಸೂಚಿಸುವಂತೆ ಮೊದಲ ಮದುವೆ ತಮ್ಮ ಜಾತಿಯಲ್ಲಿಯೇ ಆಗಬೇಕು ಅಷ್ಟೇ. ಸುಮಾರು ಆರು ಶ್ಲೋಕಗಳು ಇಂತಹುದೇ ಆತಂಕವನ್ನು ವ್ಯಕ್ತಪಡಿಸಿವೆ.

ಎಂಥ ಅನಿವಾರ್ಯವಾದ ಸಂದರ್ಭಧಲ್ಲಿಯೂ ಬ್ರಾಹ್ಮಣ ಮತ್ತು ಕ್ಷತ್ರಿಯರು ಶೂದ್ರಳನ್ನು ಮೊದಲ ಹೆಂಡತಿಯನ್ನಾಗಿ ವಿವಾಹ ಮಾಡಿಕೊಳ್ಳಬಾರದು (3-14)

ಈ ಮೂರು ವರ್ಣಗಳು ಆಕಸ್ಮಾತ್ ಹಾಗೇ ಶೂದ್ರಳನ್ನು ವಿವಾಹವಾದರೆ ಅವರ ಕುಲವೇ ಶೂದ್ರತ್ವವನ್ನು ಹೊಂದುತ್ತದೆ. (3-15) ಬ್ರಾಹ್ಮಣರು ಹಾಗೆ ಶೂದ್ರಳನ್ನು ವಿವಾಹವಾದರೆ ಅಧೋಗತಿಯನ್ನು ಹೊಂದುತ್ತಾರೆ (3-17, 1-18)

ಬಹುವಿವಾಹದಲ್ಲಿ ಮೇಲು ಕೀಳು, ಜಾತಿಪದ್ಧತಿ, ಅನುಲೋಮ ವಿವಾಹ

ಶೂದ್ರೈವ ಬಾರ್ಯಾ ಶೂದ್ರಸ್ಯ ಸಾಚಸ್ವಾಚವಿಶಃಸ್ಮೃತೇ ತೇಚ ಸ್ವಾಚೈವ ರಾಜ್ಞಶ್ಚ ತಾಶ್ಚಸ್ವಾ ಚಾಗ್ರಜನ್ಮನಃ
(3 -13)

ಹೀಗೆ ಬಹುವಿವಾಹವಾಗುವಾಗ ಶೂದ್ರ ಕೇವಲ ಶೂದ್ರ ಹೆಣ್ಣನ್ನು ಮಾತ್ರ ಮದುವೆಯಾಗಬೇಕು. ಮೇಲಿನ ಮೂರು ವರ್ಣಗಳವರು ತಂತಮ್ಮ ಕೆಳವರ್ಣಗಳ ಹೆಣ್ಣುಗಳನ್ನು ಮದುವೆಯಾಗಬಹುದು. ಬ್ರಾಹ್ಮಣ, ಮೂರು ಕೆಳ ವರ್ಣಗಳ ಹೆಣ್ಣುಗಳನ್ನು ಮದುವೆಯಾಗಬಹುದು, ಕ್ಷತ್ರಿಯ, ಕ್ಷತ್ರಿಯ ಹೆಣ್ಣುಗಳ ಜೊತೆಗೆ ಉಳಿದೆರಡು ಕೆಳವರ್ಣಗಳ ಹೆಣ್ಣುಗಳನ್ನು, ವೈಶ್ಯ, ವೈಶ್ಯ ಹಾಗೂ ಶೂದ್ರ ಹೆಣ್ಣುಗಳನ್ನು ಮದುವೆಯಾಗಬಹುದು. ಇದನ್ನೇ ಅನುಲೋಮ ವಿವಾಹ ಎನ್ನುತ್ತಾರೆ.

ಹೀಗೆ ಮೇಲುಜಾತಿಯವರಿಗೆ ಕೆಳಜಾತಿಯ ಯಾವುದೇ ಹೆಣ್ಣು ಭೋಗ ವಸ್ತು. ಹಾಗೆ ಮದುವೆಯಾಗದೆ ಕೂಡ ಬ್ರಾಹ್ಮಣ ಹೆಣ್ಣುಗಳ ಜೊತೆಗೆ ಮೇಲು ಜಾತಿಯವರು ಕೆಳಜಾತಿಯ ಹೆಣ್ಣುಗಳನ್ನು ಭೋಗಿಸಿದರೆ ಕಡಿಮೆ ದಂಡ. ಇದು ಮನುಸ್ಮೃತಿ ಸಾರುವ ಧರ್ಮ.

ಇದು ಮನುಸ್ಮೃತಿ ಸಾರುವ ವಿವಾಹ ಧರ್ಮ

ಇದು ರಾಮಾ ಜೋಯಿಸರು ಹೇಳ
ಭಾರತೀಯ ದಾರ್ಶನಿಕರ ಅಮೂಲ್ಯ ಕೊಡುಗೆ


ಚಂಚಲೆ ಎಂಬ ದೂಷಣೆ ಏಕೆ?

ಪುರುಷನ ಕಾಮುಕತೆಗೆ ಹೀಗೆ ವ
ಅವಕಾಶವನ್ನು ನೀಡುವ ಮನುಸ್ಮೃತಿ ಸ್ತ್ರೀಯರ
ಚಂಚಲೆ ಇತ್ಯಾದಿ ಏಕೆ ಆರೋಪವನ್ನು ಹೊರಿಸು
ಈ ದ್ವಂದ್ವ ನೀತಿ ಏಕೆ? ಆಕೆಯನ್ನು ಮನೆಯಲ್ಲಿ
ಬಂಧಿಯಾಗಿಸಲು ಇನ್ನು ಅನೇಕ ನಿರ್ಬಂಧಗಳ
ಒಂದು ನೆಪವನ್ನಾಗಿ ಮಾಡಲಾಗಿದೆ. ಅಷ್ಟೇ ಎಂಬ
ಮನುಸ್ಮೃತಿಯಲ್ಲಿ ಕಣ್ಣಿಗೆ ರಾಚುತ್ತದೆ.

ಅಹಿಂಸೆ

ಸ್ತ್ರೀ ಹತ್ಯೆ ಶಿಶು ಹತ್ಯೆ ಮಾಡಿಯೂ ಇಂದೆ
ಗೋಹತ್ಯೆ ಕಡು ಪಾಪ ಎಂಬವರ ಕಂಡೆ
ಉಪದೇಶ ಮಾಡಲೂ ಯೋಗ್ಯತೆಯು ಬೇಕು
ಎಸೆದು ಮಾತನ್ನಾಡಿ ತ್ರಿಶೂಲ ಚಾಕು

ಏಡಂಬ



'ಹೆಣ್ಣು ಹುಡ್ಗೀರತರ ಅಳತೀಯಲ್ಲೋ'?!

'ಎಂತಾ.. ಮಾಣಿ ಹೆಣ್ಣು ಹುಡ್ಗೀರ ತ
ಅಳತಿಯಲ್ಲ..ಛೇ...?

ದೊಡ್ಡಪ್ಪ ಅಕ್ಕನ ಮಗನ್ನ ಬೈತಾ ಹೆಬ್ಬಾಗಿ
ದಾಟಿ ಒಳಗೆ ಬಂದರು. ಅಲ್ಲೇ ಇದ್ದ ತ
ಜಗಳಕ್ಕೆ ಎದ್ದೇ ಬಿಟ್ಟು. 'ಏನು ಗರ್ಲ್ಸ್ ಮಾ
ಅಳೋದಾ...' ಅಂತ. ಜೊತೆಗಿದ್ದ ಗರ್
ಗ್ಯಾಂಗ್ ಸ್ವರಗೂಡಿದರು. 'ಊರ
ಬಂದಾಗಿಂದ ನೋಡ್ತಾ ಇದ್ದೀವಿ. ಅವನು ದಿ
ಅಳ್ತಾನೆ' ಮತ್ಯಾಕೆ ಗರ್ಲ್ಸ್ ತರ ಅಂತೀ
ಒಂದು ಅಖಾಡವೇ ರೆಡಿ ಆಯ್ತು.

ಈ ಕಡೆ ದೊಡ್ಡ ಅಣ್ಣ ಬಂದು, ಪು
ತಂಗಿಯರ ಗುಂಪನ್ನು ಪುಸಲಾಯಿಸುತ್ತಾ
'ಅಲ್ಲ ಕಣೇ... usually ಗರ್
ಅಳ್ತಾರಲ್ಲಾ...' ಅಲ್ಲೇ ಇದ್ದ ಅಜ್ಜಿ.. '
ಪುಟ್ಟಿ, ಅದು ವಾಡಿಕೆ ನಮ್ಮ ಕಾಲದ
ಹೇಳ್ತಿದ್ರು' ಅಂತ ಕೂಸನ್ನ ಮುದ್ದಿಸ
ಹೊರಟರು. ಅಸಹನೆಯಲ್ಲಿ 'ಹೂಂ.. ನೀ
ನಿಮ್ಮ ಕಾಲದಲ್ಲಿ ಯಾಕೆ ಅಂತ ಪ್ರಶ್ನಿಸಿದ್ದರೆ ಈ
ನಮ್ಮ ಕಾಲದಲ್ಲೂ ಅದ್ನೇ ಹೇಳ್ತಾ ಇರಲಿ
ಗುಪ್ ಎಂದು ಎದ್ದು ಹೋದಳು.

ಹೌದು ಅಲ್ವ, ವಾಡಿಕೆ ಮಾತು ಅ
ಏನೆಲ್ಲ ಸಹಿಸ್ಕೋ ಬೇಕು. ಅದನ್ನ ಕೆಲವ
ಪ್ರಶ್ನೆ ಮಾಡ್ತೀವಿ ನಿಜ, ಆದ್ರೆ ಮತ್ತೆ ಬಳಸದ
ಏನು ಮಾಡ್ತೀವಿ?

-ಸು

'ನೂರು ದಿನಗಳ ಅಜೆಂಡಾ'ಗಳ ವ್ಯಥೆ

ಯುಪಿಎ II ದರ್ಬಾರ್‌ನಲ್ಲಿ



ಯುಪಿಎ-2 ಸರಕಾರ ಅಧಿಕಾರ ...ಸಿಕೊಂಡಾಗ ಪ್ರಧಾನ ಮಂತ್ರಿಗಳು ತಮ್ಮ ...ತ್ರಿಗಳಿಗೆಲ್ಲಾ 'ನೂರು ದಿನಗಳ ಅಜೆಂಡಾ' ...ೀಕರಿಸಿ ಎಂದಿದ್ದರು. ಈಗ ಈ ನೂರು ದಿನಗಳಲ್ಲಿ ...ರೆಲ್ಲಾ ತಾವುಗಳು ಸಾಧಿಸಿದ ಪ್ರಗತಿಯ ಬಗ್ಗೆ, ...ರಲ್ಲೂ ಬಡಜನರಿಗಾಗಿ ಸಾರಿದ ಕಾರ್ಯಕ್ರಮಗಳ ...ರಿಯ ಬಗ್ಗೆ ಮೌನವಾಗಿರುವುದು ಪ್ರಧಾನ ...ತ್ರಿಗಳ ಕಚೇರಿಯಲ್ಲಿ ಬೇಸರ ಉಂಟು ಮಾಡಿದೆ ...ದು ವರದಿಯಾಗಿದೆ. ಸಿಪಿಐ(ಎಂ) ಪೊಲಿಟ್ ...ರೊ ವಿಶ್ಲೇಷಿಸಿದಂತೆ ನವ- ಉದಾರವಾದಿ ...ಗಳನ್ನು ಮುಂದುವರೆಸಿದ್ದಷ್ಟೇ ಈ ನೂರು ದಿನಗಳ ...ಧನೆ'. ಸಪ್ಟಂಬರ್ 15ರಿಂದ 20ರ ನಡುವೆ ವಿವಿಧ ...ಖೆಗಳು ತಂತಮ್ಮ ನೂರು ದಿನಗಳ 'ಸಾಧನೆ' ಬಗ್ಗೆ ಹೇಳಲು ಪತ್ರಿಕಾ ಸಮ್ಮೇಳನಗಳನ್ನು ...ಲಿವೆ ಎಂದು ಪ್ರಧಾನ ಮಂತ್ರಿಗಳ ಕಚೇರಿ ...ದಿಯಂತೆ.

ಪಂಚತಾರಾ ಹೋಟೆಲುಗಳಲ್ಲಿ ನೂರು ದಿನಗಳು!

ವಿದೇಶಾಂಗ ಮಂತ್ರಿ ಕರ್ನಾಟಕದ ...ಎಂ.ಕೃಷ್ಣ ಮತ್ತು ಅವರ ಸಹಾಯಕ ಮಂತ್ರಿ ...ಳದ ಶಶಿ ತರೂರ್‌ರವರ ನೂರು ದಿನಗಳ ...ನೆಯೆಂದರೆ ಈ ಸಂಪೂರ್ಣ ಅವಧಿಯಲ್ಲಿ ...ಚತಾರಾ ಹೋಟೇಲಿನಲ್ಲಿ ವಾಸ. ಪಾಪ, ಅವರೇನು ಮಾಡಿಯಾರು? ಅವರಿಗೆ ಒದಗಿಸಿದ್ದ ಅಧಿಕೃತ ನಿವಾಸಗಳು ಇನ್ನೂ 'ದುರಸ್ತಿ'ಯಾಗಿಲ್ಲ. ಅಲ್ಲದೆ ಈ ಹೋಟೇಲುಗಳಲ್ಲಿ ಅವರು ಇದ್ದುದು ಸ್ವಂತ ಖರ್ಚಿನಲ್ಲೇ, ಸರಕಾರೀ ಖರ್ಚಿನಲ್ಲಿ ಅಲ್ಲವಂತೆ. ಅಷ್ಟೊಂದು 'ಶಕ್ತಿವಂತ'ರು ಕಾಂಗ್ರೆಸ್ ಮಂತ್ರಿಗಳು. ಈಗ ಹಣಕಾಸು ಮಂತ್ರಿಗಳ 'ಕೋರಿಕೆ'ಯ ಮೇರೆಗೆ ಅವರು ಕಡಿಮೆ ಖರ್ಚಿನ ನಿವಾಸಗಳಿಗೆ ಹೋಗಿದ್ದಾರೆ. ಆದರೆ ಅವರು' 'ಕೇಳಿ'ಕೊಂಡಂತೆ ಕರ್ನಾಟಕ ಭವನಕ್ಕಾಗಲೀ, ಕೇರಳ ಭವನಕ್ಕಾಗಲೀ ಹೋಗಲು ಅವರು ನಿರಾಕರಿಸಿದ್ದಾರೆ, ಅಲ್ಲಿ ತಮಗೆ ತಕ್ಕ ವ್ಯವಸ್ಥೆಗಳು ಇಲ್ಲವೆಂದು.

ವೈಎಸ್‌ಆರ್ ಮಗ ಮಾಧ್ಯಮ ದೊರೆ

ಕಾಂಗ್ರೆಸ್ ಸಂಸತ್ ಸದಸ್ಯರ 'ಶಕ್ತಿ' ಗೆ ಇನ್ನೊಂದು ಉದಾಹರಣೆ ಇತ್ತೀಚೆಗೆ ಹೆಲಿಕಾಪ್ಟರ್ ದುರಂತದಲ್ಲಿ ಮಡಿದ ಆಂಧ್ರ ಮುಖ್ಯಮಂತ್ರಿ ವೈಎಸ್ ರಾಜಶೇಖರ ರೆಡ್ಡಿಯವರ ಪುತ್ರ ಜಗನ್ಮೋಹನ ರೆಡ್ಡಿ. ಈತ 'ಸಾಕ್ಷಿ' ಎಂಬ ಪತ್ರಿಕೆ ಹಾಗೂ ಅದೇ ಹೆಸರಿನ ಟಿವಿ ವಾಹಿನಿಯ ಮಾಲಕ. ತನ್ನ ತಂದೆಯ ಉತ್ತರಾಧಿಕಾರಿಯಾಗುವ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿರುವಾತ. ಇಂದಿರಾ ಗಾಂಧಿಯವರು ಹತ್ಯೆಯಾದಾಗ 'ಅನನುಭವಿ' ರಾಜೀವ ಗಾಂಧಿ ಅವರ ಸ್ಥಾನ ತುಂಬಲು ಪ್ರಧಾನ ಮಂತ್ರಿಯಾಗಬಹುದಾದರೆ 37 ವರ್ಷದ ಜಗನ್ಮೋಹನ ರೆಡ್ಡಿ ತನ್ನ ತಂದೆಯ ಸ್ಥಾನ ತುಂಬಲು ಆಂಧ್ರದ ಮುಖ್ಯ ಮಂತ್ರಿಯಾಗಲು ಸಾಧ್ಯವಿಲ್ಲವೇ ಎಂದು ಆತನ ಬೆಂಬಲಿಗರು ಕೇಳುತ್ತಿದ್ದಾರಂತೆ.

ಮಹಿಳಾ ಆಯೋಗಕ್ಕೆ ಇನ್ನೂ ಮುಖ್ಯಸ್ಥರಿಲ್ಲ

ಸಪ್ಟಂಬರ್ 8ರಂದು ಪ್ರಧಾನ ಮಂತ್ರಿಗಳು ಮಹಿಳೆಯರ ಸಬಲೀಕರಣದ ಮತ್ತೊಂದು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಆದರೆ ಮಹಿಳಾ ಸಬಲೀಕರಣದ ಬಗ್ಗೆ ಯುಪಿಎ ಸರಕಾರಕ್ಕೆ ನಿಜವಾಗಿಯೂ ಕಾಳಜಿಯಿದೆಯೇ? ಹಾಗಿದ್ದರೆ ಮಹಿಳೆಯರ ಸಂವಿಧಾನಿಕ, ಕಾನೂನು ಹಕ್ಕುಗಳ ಪಾಲನೆಯ, ಮಹಿಳೆಯರನ್ನು ಕುರಿತಂತೆ ಸರಕಾರದ ಕಾರ್ಯಕ್ರಮಗಳ ಜಾರಿಯ ಹೊಣೆಯಿರುವ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಕಳೆದ ಮೂರು ತಿಂಗಳಿಂದ ಒಬ್ಬ ಅಧ್ಯಕ್ಷೆಯನ್ನು ನೇಮಿಸಿಲ್ಲವೇಕೆ ಎಂದು ಪ್ರಶ್ನಿಸಲಾಗುತ್ತಿದೆ. ಹಿಂದಿನ ಅಧ್ಯಕ್ಷೆ ಗಿರಿಜಾ ವ್ಯಾಸ್ ಲೋಕಸಭೆಗೆ ಆರಿಸಿ ಹೋಗಿರುವುದರಿಂದ ಈ ಸ್ಥಾನ ತೆರವಾಗಿದೆ. ಇಷ್ಟೇ ಅಲ್ಲ, ಮಹಿಳಾ ಆಂದೋಲನದ ದೀರ್ಘ ಹೋರಾಟದ ಫಲವಾಗಿ ರಚನೆಗೊಂಡ ಈ ರಾಷ್ಟ್ರೀಯ ಆಯೋಗದ ಅಧ್ಯಕ್ಷರಿಗೆ ಇತರ ಆಯೋಗಗಳ ಅಧ್ಯಕ್ಷರಂತೆ ಸಂಪುಟ ದರ್ಜೆಯ ಸ್ಥಾನವನ್ನು ಇನ್ನೂ ಕೊಡಲಾಗಿಲ್ಲ. ಈ ವಿಷಯಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೋ ಸದಸ್ಯೆ ಹಾಗೂ ರಾಜ್ಯಸಭಾ ಸದಸ್ಯೆ ಬೃಂದಾ ಕರಾಟ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಪಾಕಿಸ್ತಾನದ ಪರಮಾಣು ಬಾಂಬಿಗೆ ಅಮೆರಿಕಾ 'ತಥಾಸ್ತು'!

ಪಾಕಿಸ್ತಾನದ ಪರಮಾಣು ಕಾರ್ಯಕ್ರಮದ ಆರಂಭದ ಅವಧಿಯಲ್ಲಿ ಅಮೆರಿಕಾ ಆ ಬಗ್ಗೆ ಗೊತ್ತಿದ್ದೂ ಕಣ್ಣು ಮುಚ್ಚಿ ಕೂತಿತ್ತು ಎಂದು ಈಗ ಬಹಳ ಟೀಕೆಗೊಳಗಾಗಿರುವ ಪರಮಾಣು ವಿಜ್ಞಾನಿ ಡಾ. ಎ.ಕ್ಯು. ಖಾನ್ ಹೊರಗೆಡಹಿದ್ದಾರೆ. ಎಪ್ಪತ್ತರ ದಶಕದ ಕೊನೆಯ ಭಾಗ ಮತ್ತು ಎಂಭತ್ತರ ದಶಕದ ಆರಂಭದಲ್ಲಿ ಸೋವಿಯೆತ್ ಒಕ್ಕೂಟದ ವಿರುದ್ಧ ಅಫಘಾನ್ ಯುದ್ದದಲ್ಲಿ ಪಾಕಿಸ್ತಾನೀ ಆಳರಸರು ನೆರವು ನೀಡಿದ್ದೇ ಇದಕ್ಕೆ ಕಾರಣ ಎಂದು ಅವರು ಹೇಳಿದ್ದಾರೆ. ಅದರಿಂದಲೇ ಆರು ವರ್ಷಗಳಲ್ಲೇ ಪಾಕಿಸ್ತಾನೀ ಬಾಂಬು ತಯಾರಿಸಲು ಸಾಧ್ಯವಾಯಿತಂತೆ. ಅಫಘಾನ್ ಯುದ್ಧ ಪಾಕಿಸ್ತಾನಕ್ಕೆ ಪರಮಾಣು ಸಾಮರ್ಥ್ಯ ಒದಗಿಸಿತು ಎಂದು ಈ ವಿಜ್ಞಾನಿ ಪಾಕಿಸ್ತಾನಿ ಉರ್ದು ಟೆಲಿವಿಜನಿಗೆ ನೀಡಿದ ಸಂದರ್ಶನದಲ್ಲಿ ಒತ್ತಿ ಹೇಳಿದ್ದಾರೆ.

'ಹಿಂದುತ್ವ' ಎಂಬ ವಿಷದ ರುಚಿ



...ಜೆಪಿ ದರ್ಬಾರ್‌ನಲ್ಲಿ

...ರ್ನಾಟಕದಲ್ಲಿ ಅಧಿಕಾರಕ್ಕೇರಿರುವುದು ...ದುತ್ವ'ವಾದಿ ಮತಾಂಧ ಸಿದ್ಧಾಂತದಿಂದ ...ತವಾದ ಕುಖ್ಯಾತ ಆರೆಸ್ಸೆಸ್‌ನ ಹಿಡಿತದಲ್ಲಿರುವ ...ಪಿ ಸರಕಾರ ಎಂಬುದನ್ನು ಪತ್ರಿಕೆಯಲ್ಲಿ ಪದೇ ... ಹೇಳಲಾಗಿದೆ. ಆಗಬಾರದ ಏನೇನೋ ಈ ... ನಂಬಿಕೆ ಬರದೇ ಯಡಿಯೂರಪ್ಪ ರೈತ ...ಂಡರೆಂದೋ ಮತ್ತೇನೋ ಎಂದೋ ನಂಬುವ ...ದ್ದಾರೆ. ಅಂತಹವರು ಈ ಕೆಳಗಿನ ...ಟನೆಗಗಳನ್ನು ಗಮನಿಸಬಹುದು.

...ರೆಸ್ಸೆಸ್‌ನ ವಿಷಕಾರಿ ಪುಸ್ತಕ ಶಾಲಾ ಮಕ್ಕಳಿಗೆ

...ಕಸಾಂಗ ದ್ವೇಷದ ಉದ್ರೇಕವನ್ನು ಬಡಿದೆಬ್ಬಿಸಲು ...ಕವಾಗಿ ನಿರೂಪಿಸಲಾದ ಆರೆಸ್ಸೆಸ್‌ನ ...ತ್ಥಾನ ಪ್ರಕಾಶನ'ದ 'ಭಾರತ ಭಾರತಿ' ...ಗಳನ್ನು ಖರೀದಿಸಿ ಶಾಲಾ ಮಕ್ಕಳಿಗೆ ಒದಗಿಸಲು ರಾಜ್ಯಸರ್ಕಾರ ಆದೇಶ ನೀಡಿದೆ. ಬೆಳೆಯುವ ವಯಸ್ಸಿನ ಎಳೆಯ ಮಕ್ಕಳ ಮೆದುಳಿನೊಳಕ್ಕೆ ವಿಷ ಸುರಿಯುವ ಈ ಅಪಾಯಕಾರಿ ಆಟದ ಹಿಂದೆ ರೈತರ ಹಿತಾಸಕ್ತಿ, ಜನರ ಹಿತಾಸಕ್ತಿಯಾದರೂ ಏನಿದೆ. ಕೋಮುಗಲಭೆ, ಹಿಂಸೆ ಬಡಿದೆಬ್ಬಿಸುವುದನ್ನು ಬಿಟ್ಟು?

ಚರ್ಚ್ ಮೇಲಿನ ಹೀನಾಯ ದಾಳಿ

ಬೆಂಗಳೂರಿನ ಹೊಸೂರು ರಸ್ತೆಯ ಹೆಬ್ಬುಗೋಡಿಯಲ್ಲಿ ಚರ್ಚ್‌ನ ಮೇಲೆ ಧಾಳಿಯಾಗಿದೆ. ಏಸು, ಮಾತೆ ಮೇರಿ ಮುಂತಾದ ಮೂರ್ತಿಗಳನ್ನು ಧ್ವಂಸ ಮಾಡಲಾಗಿದೆ. 'ದುಷ್ಕರ್ಮಿಗಳನ್ನು ಬಂಧಿಸಲು ಆದೇಶಿಸಲಾಗಿದೆ. ಅಲ್ಪ ಸಂಖ್ಯಾತರು ಭಯಪಡಬೇಕಿಲ್ಲ' ಎನ್ನುವ ಮುಖ್ಯಮಂತ್ರಿ ಯಡಿಯೂರಪ್ಪನವರು ಅದೇ ಉಸಿರಿನಲ್ಲಿ ಹೇಳುವುದೇನು? ಚೆನ್ನಾಗಿ ನಡೆಯುತ್ತಿರುವ ತಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ದಾಳಿ ನಡೆದಿದೆ ಅಂತ. ಅಂದರೇನು ಇದರಲ್ಲೇನೋ ವಿರೋಧಿಗಳ ಕುತಂತ್ರವಿದೆ ಅಂತ. ದಾವಣಗೆರೆ, ಮಂಗಳೂರು ಮುಂತಾದ ಕಡೆ ಧಾಳಿ ನಡೆದಾಗಲೂ ಹಾಗೆಯೇ ಅಂದಿದ್ದರು. ಅಂದರೆ ಆಗಿನ ನಿಜವಾದ ದಾಳಿಕೋರರಾದ ಸಂಘ ಪರಿವಾರದ ದುಷ್ಕರ್ಮಿಗಳ ಬಗೆಗೆ ಬಿಗಿಯಾದ ಮಾತೇ ಆಡಲಿಲ್ಲ. ಪೊಲೀಸರಿಗೆ, ಆಡಳಿತ ವರ್ಗಕ್ಕೆ ಇವೆಲ್ಲಾ ಸಂಜ್ಞೆ, ಸೂಚನೆಗಳೇ. ಇರಲಿ.

ಬೆಳಗಿನ ಜಾವ 4 ಗಂಟೆಯ ಸುಮಾರಿಗೆ ದಾಳಿ ನಡೆದ ಮಧ್ಯಾಹ್ನ ಸಂಜೆಯ ಹೊತ್ತಿಗೂ ಮುಖ್ಯಮಂತ್ರಿಗಳು 'ನನಗೆ ಆ ಬಗೆಗೆ ಮಾಹಿತಿ ಸಿಕ್ಕಿಲ್ಲ' ಎನ್ನುತ್ತಾರೆ. ಮಾಹಿತಿ ತಿಳಿದುಕೊಳ್ಳುವ ಆಸಕ್ತಿ ಇದ್ದರಲ್ಲವೇ ಮಾಹಿತಿ ಸಿಗುವುದು?

ವರ್ಗಾವಣೆ ಜಟಾಪಟಿ

ಪೊಲೀಸ್ ಇಲಾಖೆಯ ಅಧಿಕಾರಿಗಳ ವರ್ಗಾವಣೆ ಸಂಬಂಧವಾಗಿ ರಾಜ್ಯದ ಪೊಲೀಸ್ ಮಹಾನಿರ್ದೇಶಕರಿಗೂ ರಾಜ್ಯ ಮುಖ್ಯಮಂತ್ರಿ ಯಡಿಯೂರಪ್ಪನವರಿಗೂ ಜಟಾಪಟಿ ನಡೆದಿದೆ ಎಂಬ ವರದಿಗಳು ಹೊರಬರುತ್ತಿವೆ.

ಸರಕಾರ ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡಬಾರದೆಂಬ ಕಾರಣಕ್ಕಾಗಿಯೇ ಸುಪ್ರಿಂಕೋರ್ಟ್‌ನ ನಿರ್ದೇಶನದಂತೆ ಇತ್ತೀಚೆಗೆ 'ಪೊಲೀಸ್ ಸಿಬ್ಬಂದಿ ಮಂಡಳಿ' ರಚಿಸಲಾಗಿದೆ. ಈ ಮಂಡಳಿಯ ಪ್ರಸ್ತಾಪವನ್ನು ಬದಲಿಸಿ ಅಂತ ಸಿ.ಎಂ.ಫರ್ಮಾನು. ಅದನ್ನು ಉಳಿಸಿಕೊಳ್ಳಲು ಡಿಜಿಪಿ ಯವರ ಯತ್ನ ಇದೆಯಂತೆ. ಯಡಿಯೂರಪ್ಪ ಇಲ್ಲೇಕೆ ಮೂಗು ತೂರಿಸುತ್ತಿದ್ದಾರೆ.?

ಇದೆಲ್ಲಾ ಕೇಳಬಾರದ ಪ್ರಶ್ನೆ. ಮಂತ್ರಿಗಳು, ಶಾಸಕರು, ಮಾಡುವ ಒತ್ತಾಯಕ್ಕೆ ಬೆಲೆ ಕೊಡದಿದ್ದರೆ ಅವರು ಸುಮ್ಮನಿರುತ್ತಾರೆಯೇ? ಅವರು ಸುಮ್ಮನಿದ್ದರೂ ಇರಬಹುದು. ಈಗ ಸಂಸದರಾಗಿ ಇನ್ನೂ ಬಲಿತಿರುವ ಸುಪುತ್ರ ರಾಘವೇಂದ್ರ ರಾಯರು ಸುಮ್ಮನಿದ್ದಾರೆಯೇ? ಅಂತ ಜನ ಮಾತಾಡಿಕೊಳ್ಳುತ್ತಿದ್ದಾರೆ. ಕಳೆದ ಬಾರಿ ಪೊಲೀಸ್ ಅಧಿಕಾರಿಗಳ ವರ್ಗಾವಣೆಯ ಸಂದರ್ಭದಲ್ಲಿ ಎದ್ದ ದುರ್ನಾತವನ್ನು ಬಲ್ಲ ಜನ ಅವರು. 'ಒಳಹೊರಗೂ' ಬಲ್ಲವರು. ○

ನಾಗರಾಜ ಜಂಬಗಿಯನ್ನು ಕೊಂದವರಾರು?

ಹಲವು ಕೊಲೆ, ದರೋಡೆಗಳಲ್ಲಿ ಭಾಗಿಯಾಗಿದ್ದ, ಅದಕ್ಕಿಂತಲೂ ಮುಖ್ಯವಾಗಿ ಹುಬ್ಬಳ್ಳಿ ನ್ಯಾಯಾಲಯದೊಳಗೆ ಕಳೆದ ವಿಧಾನಸಭಾ ಚುನಾವಣೆಗೆ ಮುಂಚೆ ಬಾಂಬ್ ಸ್ಫೋಟಿಸಿದ ಪ್ರಕರಣದ ಪ್ರಮುಖ ಆರೋಪಿ ನಾಗರಾಜ ಜಂಬಗಿ ಸತ್ತಿದ್ದಾನೆ. ಜುಲೈ 18 ರಂದು ಬಾಗಲ ಕೋಟೆಯ ಕಾರಾಗೃಹದಲ್ಲಿ ತನ್ನ ಸಹಚರರಿಂದಲೇ ಈತ ಹಲ್ಲೆಗೆ ಗುರಿಯಾಗಿದ್ದ. ಈತನ ತಲೆಯ ಮೇಲೆ ಜೈಲಿನಲ್ಲೇ ಕಲ್ಲು ಎತ್ತಿಹಾಕಲಾಗಿತ್ತು.

ಶ್ರೀರಾಮಸೇನೆಯ ಮುಖಂಡ ಪ್ರಮೋದ್ ಮುತಾಲಿಕ್‌ಗೂ ಈತನಿಗೂ ಇದ್ದ ನಿಕಟ ಒಡನಾಟದ ಬಗೆಗೆ ಮಾಧ್ಯಮಗಳಲ್ಲಿ ದಾಖಲೆಗಳು, ವರದಿಗಳು ಪ್ರಕಟವಾಗಿದ್ದವು. ಹುಬ್ಬಳ್ಳಿ ನ್ಯಾಯಾಲಯ ಸ್ಫೋಟದ ವಿಚಾರವಾಗಿ - ಯಾವುದೇ ಬಾಂಬ್‌ಸ್ಫೋಟ ನಡೆದರೂ ಆಗುವಂತೆ ಮುಸ್ಲಿಂ ಅಲ್ಪಸಂಖ್ಯಾತರ ಬಗೆಗೆ ಅಪಪ್ರಚಾರ ಇಲ್ಲೂ ನಡೆದಿತು. ಇವೆಲ್ಲಾ ಘಟನೆಗಳಿಂದ ಬಿಜೆಪಿ ಲಾಭ ಪಡೆಯಿತು ಎಂಬುದು ಇದೀಗ ಎಲ್ಲರಿಗೂ ತಿಳಿದ ವಿಚಾರ. ಮುತಾಲಿಕ್, ನಾಗರಾಜ್ ಜಂಬಗಿಗೂ ನಡುವಿನ ಒಡನಾಟ ಒಳ ಹೊರಗು ಏನು? ಹುಬ್ಬಳ್ಳಿ ಸ್ಫೋಟದಲ್ಲಿ ಯಾರ್ಯಾರ ಪಾತ್ರ ಏನು ಎಂಬುದು ಖಚಿತವಾಗುವ ಮೊದಲೇ ನಾಗರಾಜ ಜಂಬಗಿ ಸತ್ತಿದ್ದಾನೆ. ಜಂಬಗಿಯ ಹಲ್ಲೆಯ ಹಿಂದೆ ಯಾರಿದ್ದಾರೆ ಏನು ಎಂಬುದು ಸೇರಿದಂತೆ ಒಟ್ಟು ಪ್ರಕರಣದ ಬಗೆಗೆ ತನಿಖೆ ಆಗಬೇಕಲ್ಲವೇ? ಬಿಜೆಪಿ ಸರ್ಕಾರದ ಆಡಿಯಲ್ಲಿ ಇಂಥದ್ದೊಂದು ತನಿಖೆ ಆಗಬಹುದೇ?

ಜಗದಗಲ

■ ಜಯ

ಹಂದಿ ಜ್ವರ: ಅಮೆರಿಕ-ಮೆಕ್ಸಿಕೊ ಅಪರಾಧಿಗಳ

ಹಂದಿ ಜ್ವರ ಹೇಗೆ ಹರಡಿತು ಎಂಬುದರ ಕುರಿತು ಹುದುಗಿದ್ದ ನೈಜ ಸುದ್ದಿಗಳು ಇದೀಗಷ್ಟೆ ಹೊರಬೀಳುತ್ತಿವೆ. ಇದನ್ನು ಪ್ರಥಮ ಬಾರಿಗೆ ಪ್ರಸ್ತಾಪಿಸಿದ್ದು ಫಿಡೆಲ್ ಕ್ಯಾಸ್ಟ್ರೋ ರವರು ತಮ್ಮ 'ರಿಫ್ಲೆಕ್ಷನ್ಸ್' ಎಂಬ ಅಂಕಣದಲ್ಲಿ. ಹೆಚ್1ಎನ್1 ಎಂದೇ ಕರೆಯಲಾಗುವ ಈ ಜ್ವರ ಮೆಕ್ಸಿಕೋದಲ್ಲಿ ದೊಡ್ಡ ಪ್ರಮಾಣದಲ್ಲಿ ಹರಡುತ್ತಿರುವಾಗಲೇ ಅದರ ಕುರಿತ ಸುದ್ದಿಯನ್ನು ಜಗತ್ತಿನ ಇತರೆ ದೇಶಗಳಿಗೆ ತಲುಪದಂತೆ ರಹಸ್ಯವಾಗಿ ತಡೆಹಿಡಿಯಲಾಗಿತ್ತಂತೆ. ಹೀಗೆ ಜನರನ್ನು ಸಾವಿನಂಚಿಗೆ ತಳ್ಳುವ ಜ್ವರದ ಮಾಹಿತಿಯನ್ನೇ ತಡೆಹಿಡಿದದ್ದೇಕೆಂದರೆ ಅಮೇರಿಕಾದ ಅಧ್ಯಕ್ಷ ಬರಾಕ್ ಒಬಾಮ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಹೊಸತರಲ್ಲಿ ಪ್ರಥಮಬಾರಿಗೆ ಮೆಕ್ಸಿಕೋ ದೇಶಕ್ಕೆ ಏಪ್ರಿಲ್ 16ರಂದು ಭೇಟಿ ನೀಡುವವರಿದ್ದರು. ಈ ಭೇಟಿಯ ನಂತರವಷ್ಟೆ ಹಂದಿ ಜ್ವರ ವ್ಯಾಪಕವಾಗಿ ಹರಡುತ್ತಿದೆಯೆಂದು ಮೆಕ್ಸಿಕೋ ಬಹಿರಂಗವಾಗಿ ಘೋಷಿಸಿತು. ಅಷ್ಟರಲ್ಲಾಗಲೇ ನವೆಂಬರ್ ಮತ್ತು ಮಾರ್ಚ್ ತಿಂಗಳ ನಡುವೆ, ಮೆಕ್ಸಿಕೋ ಒಂದರಲ್ಲೇ 23,000ಕ್ಕೂ ಹೆಚ್ಚಿನ ಹೆಚ್1ಎನ್1 ಪ್ರಕರಣಗಳು ದಾಖಲಾಗಿ ಇಡೀ ದೇಶದಲ್ಲಿ ವ್ಯಾಪಾರ ವಹಿವಾಟುಗಳು ಸ್ಥಗಿತಗೊಂಡಿದ್ದವು.


ವಿಶ್ವ ಆರೋಗ್ಯ ಸಂಸ್ಥೆಯು ಈ ಜ್ವರವು ಕಳೆದ ನಾಲ್ಕು ತಿಂಗಳಲ್ಲಿ 160 ದೇಶಗಳಿಗೆ ಹರಡಿದೆಯೆಂದು, ಇಡೀ ಮನುಕುಲವೇ ಅಪಾಯಕ್ಕೆ ಸಿಲುಕಿದೆಯೆಂದು, ಇದನ್ನು 'ಗಂಡಾಂತರಕಾರಿ ಜ್ವರ' ವೆಂದು ವರ್ಗೀಕರಣ ಮಾಡಿತ್ತು. ಆದರೆ, ಹೀಗೆ ಭಯಪಡಿಸುವ ವರ್ಗೀಕರಣದ ಅವಶ್ಯವಿರಲಿಲ್ಲವೆಂದು, ವಿಶ್ವ ಆರೋಗ್ಯ ಸಂಸ್ಥೆಯು ಅನವಶ್ಯಕವಾಗಿ ಅಪಾಯದ ಗಂಟೆ ಬಾರಿಸುತ್ತಿದೆಯೆಂದು ಜಗತ್ತಿನ ಹಲವು ವಿಜ್ಞಾನಿಗಳು ಮತ್ತು ವೈಜ್ಞಾನಿಕ ಸಂಸ್ಥೆಗಳು ಅಭಿಪ್ರಾಯಪಟ್ಟಿದ್ದಾರೆ.

1918ರ ವ್ಯಾಪಕ ಜ್ವರದಿಂದಾಗಿ ವಿಶ್ವದಾದ್ಯಂತ 5ಕೋಟಿಯವರೆಗೂ ಜನ ಸಾವನ್ನಪ್ಪಿದ್ದಾರೆ. ಆದರೆ ಸಾಮಾನ್ಯ ಜನರಿಗೆ ವೈದ್ಯಕೀಯ ಔಷಧಗಳಾಗಲೀ ನೈರ್ಮಲ್ಯ ಪರಿಸರವಾಗಲೀ ಲಭ್ಯವಿಲ್ಲದಿರುವುದು ಇಂಥಹ ಸಾವಿಗೆ ಹೆಚ್ಚಿನ ಕಾರಣವೆನಿಸಿದೆ. 1957ರ ಜ್ವರದಲ್ಲಿ 20 ಲಕ್ಷ ಜನ ಸಾವಿಗೀಡಾಗಿದ್ದಾರೆ. 1968ರ ಜ್ವರದಲ್ಲಿ 30ಲಕ್ಷ ಜನ ಸತ್ತಿದ್ದಾರೆ. ಪ್ರತಿ ವರ್ಷ ಜ್ವರದಿಂದಾಗಿ 5ಲಕ್ಷದವರೆಗೂ ಸಾವುಗಳಾಗುತ್ತವೆ ಮತ್ತು ಇತರೆ ರೋಗಗಳು ಇನ್ನಷ್ಟು ಸಾವುಗಳಿಗೆ ಕಾರಣವಾಗಿವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರತಿವರ್ಷ ಮಲೇರಿಯಾದಿಂದಾಗಿ 10 ಲಕ್ಷ ಜನ ಮತ್ತು ಏಡ್ಸ್ ರೋಗದಿಂದ 20 ಲಕ್ಷ ಜನ ಸಾಯುತ್ತಾರೆ.

ಹಂದಿ ಜ್ವರದ ಹಿನ್ನೆಲೆಯಲ್ಲಿ ಕ್ಯೂಬಾ ಕಟ್ಟೆಚ್ಚರ:

ಮೆಕ್ಸಿಕೋ ದೇಶದ ಅಧ್ಯಕ್ಷ ಕ್ಯೂಬಾಗೆ ಭೇಟಿ ನೀಡುವುದಿತ್ತು. ಆದರೆ, ಕ್ಯೂಬಾ ಮೆಕ್ಸಿಕೋದಿಂದ ಬರುವ ಎಲ್ಲ ವಿಮಾನಗಳನ್ನು ರದ್ದುಗೊಳಿಸಿದ್ದರಿಂದ ಮೆಕ್ಸಿಕೋ ಅಧ್ಯಕ್ಷ ತನ್ನ ಕ್ಯೂಬಾ ಭೇಟಿಯನ್ನು ಮುಂದೂಡಬೇಕಾಗಿ ಕೋಪಗೊಂಡರಂತೆ. ಆದರೆ, ಮೆಕ್ಸಿಕೋದಿಂದ ಹವಾನಕ್ಕೆ ಬಂದಿಳಿದ ಪ್ರಯಾಣಿಕನೊಬ್ಬ ಹಂದಿ ಜ್ವರ ಸೋಂಕನ್ನು ಹೊಂದಿದ್ದರಿಂದ ಕ್ಯೂಬಾ ಈ ಕ್ರಮ ಕೈಗೊಳ್ಳಬೇಕಾಯಿತು. ಪೆರು, ಅರ್ಜೆಂಟೈನಾ, ಚೀನಾ ಇತ್ಯಾದಿ ರಾಷ್ಟ್ರಗಳು ಕೂಡ ಮೆಕ್ಸಿಕೋದಿಂದ ಬರುವ ಎಲ್ಲ ವಿಮಾನಗಳನ್ನು ನಂತರದಲ್ಲಿ ರದ್ದುಪಡಿಸಿದವು.

1971ರಲ್ಲಿ ಅಮೇರಿಕಾದ ಗೂಢಚರ್ಯ ಸಂಸ್ಥೆ ಸಿಐಎ 'ಆಫ್ರಿಕಾದ ಹಂದಿ ಜ್ವರ'ವನ್ನು ಕ್ಯೂಬಾದೊಳಕ್ಕೆ ತಂದು ಹರಡಿತ್ತು. ಇದರಿಂದಾಗಿ ಕ್ಯೂಬಾ ಈ ಸೋಂಕು ದೇಶದಾದ್ಯಂತ ದೊಡ್ಡ ಪ್ರಮಾಣದಲ್ಲಿ ಹರಡದಂತೆ ತಡೆಯುಲೋಸುಗ ತನ್ನ ಫಾರ್ಮುಗಳಲ್ಲಿದ್ದ 5ಲಕ್ಷಕ್ಕೂ ಹೆಚ್ಚಿನ ಹಂದಿಗಳನ್ನು ಕೊಲ್ಲಬೇಕಾಯಿತು. ನಂತರ ಈ ಕ್ಯಾಸ್ಟ್ರೋ-ವಿರೋಧಿ ಭಯೋತ್ಪಾದನಾ ಕೃತ್ಯದಲ್ಲಿ ಭಾಗಿಯಾಗಿದ್ದ ಸಿಐಎ ಗುಪ್ತಚರನು ಅದರ ಬಗ್ಗೆ ಮಾಹಿತಿ ಹೊರಗೆಡವಿದ್ದರಿಂದ ಇದು ತಿಳಿದುಬಂತು. ತನಗೆ ಸಿಐಎ ತರಬೇತಿ ನೆಲೆಯಿರುವ ಪನಾಮ ಕಾಲುವೆಯ ವಲಯದಲ್ಲಿ ಒಂದು ಸೀಲು ಮಾಡಿರುವ ಪ್ಯಾಕೆಟ್ಟಿನಲ್ಲಿ ರೋಗಾಣುಗಳನ್ನು ಕೊಟ್ಟು ಕ್ಯೂಬಾಗೆ ಕಳುಹಿಸಲಾಯಿತೆಂದು ತಿಳಿಸಿದ್ದಾನೆ.



ರೋಗ ಹರಡಲು ಅಮೇರಿಕಾ ಮತ್ತು ಮೆಕ್ಸಿಕೋ ಕಾರಣ:

ಹಂದಿ ಜ್ವರ ಮೊದಲ ಬಾರಿಗೆ ಮೆಕ್ಸಿಕೋ ದೇಶ ವೆರಾ ಕ್ರಜ್ ಎಂಬ ರಾಜ್ಯದಲ್ಲಿ ಹರಡಿತು. ಇದನ್ನು ಮೊದಲಿಗೆ 'ನ್ಯಾಪ್ತಾ ಜ್ವರ' ಎಂದು ಕರೆಯುತ್ತಿದ್ದರು. ಏಕೆಂದರೆ ಅಮೇರಿಕಾ ಮತ್ತು ಮೆಕ್ಸಿಕೋ ದೇಶಗಳು ನ್ಯಾಪ್ತಾ (ಉತ್ತರ ಅಮೇರಿಕಾ ಖಂಡದ ಮುಕ್ತ ವ್ಯಾಪಾರ) ಒಪ್ಪಂದಕ್ಕೆ ಸಹಿ ಹಾಕಿದ್ದು, ಆ ಮುಕ್ತ ವಲಯದಲ್ಲಿ ರೋಗವು ಹರಡಿತ್ತು. ಮೊದಲಿಗೆ ಅಮೇರಿಕಾದಲ್ಲಿದ್ದ ಹಂದಿ ಸಾಕಾಣಿಕೆ ಕೇಂದ್ರವನ್ನು ಅದು ಮಾಡುತ್ತಿರುವ ಆರೋಗ್ಯ ಕೆಡುವ, ಪರಿಸರ ಹಾಳು ಮಾಡುವ ಚಟುವಟಿಕೆಗಳಿಂದಾಗಿ ಭಾರಿ ದಂಡ ವಿಧಿಸಿ ಸಾಕಾಣಿಕೆ ಕೇಂದ್ರವನ್ನು ಮುಚ್ಚಲು ಈ ಕೇಂದ್ರದ



ಒಡೆತನದ ಕಂಪನಿ 'ಸ್ಮಿತ್‌ಫೀಲ್ಡ್ ಫುಡ್ಸ್' ಕಂಪನಿಗೆ ಅಮೇರಿಕಾದ ಮಾಲಿನ್ಯ ನಿಯಂತ್ರಣ ಸಂಸ್ಥೆಯು ಆದೇಶಿಸಿತು. ಆದರೆ, ಅಮೇರಿಕಾದ ಬಂಡವಾಳವನ್ನು ಆಕರ್ಷಿಸಲು ತುದಿಗಾಲ ಮೇಲೆ ನಿಂತಿದ್ದ ಮೆಕ್ಸಿಕೋ, ಅದೇ ಹಂದಿ ಸಾಕಾಣೆ ಕಂಪನಿಯನ್ನು ತನ್ನ ದೇಶದೊಳಕ್ಕೆ ಆಹ್ವಾನಿಸಿ, ನೆಲೆ ಒದಗಿಸಿತು. ಆ ಕಂಪನಿಯಿರುವ ವ್ಯಾಪ್ತಿಯಲ್ಲಿ ಮೊದಲಿಗೆ ಹಂದಿ ಜ್ವರ ಹರಡಿತು. ನಂತರ ನ್ಯಾಪ್ತಾ ಮುಕ್ತ ವಲಯದಲ್ಲಿ ರೋಗವು ಮುಕ್ತವಾಗಿ ಹರಡಿತು. ಈ ಹಿನ್ನೆಲೆಯಲ್ಲಿ ಅಮೇರಿಕಾ ಮತ್ತು ಮೆಕ್ಸಿಕೋ ದೇಶಗಳು ವಿಶ್ವದಾದ್ಯಂತ ಹಂದಿ ಜ್ವರವನ್ನು ರಫ್ತು ಮಾಡುತ್ತಿದ್ದು, ಹಂದಿಜ್ವರ ವ್ಯಾಪಕವಾಗಿ ಹರಡಲು ಆ ದೇಶಗಳು ಹೊಣೆ ಹೊರಬೇಕು ಎಂದು ಫಿಡೆಲ್ ಹೇಳಿದ್ದಾರೆ.

ಹೇಳುವುದು ಒಂದು ಮಾಡುವುದು ಇನ್ನೊಂದು:

ವ್ಯಾಪಕವಾಗಿ ಹರಡುತ್ತಿದ್ದ ಹಂದಿ ಜ್ವರವನ್ನು ತಾವು ನ್ಯಾಪ್ತಾ ಒಪ್ಪಂದ ಮಾಡಿಕೊಂಡಿದ್ದರಿಂದ ಸಂಪೂರ್ಣ ಹತೋಟಿಗೆ ತರಲು ಸಾಧ್ಯವಾಯಿತೆಂದು ಅಮೇರಿಕಾ, ಕೆನಡಾ ಮತ್ತು ಮೆಕ್ಸಿಕೋ ದೇಶಗಳು ಇತ್ತೀಚಿಗೆ ನಡೆದ ಮೂರು ದೇಶಗಳ ಸಭೆಯಲ್ಲಿ ಹೇಳಿಕೊಂಡಿವೆ. ಆದರೆ, ಮೆಕ್ಸಿಕೋದಲ್ಲಿ ಮೊದಲಿಗೆ ರೋಗ ತಗುಲಿಕೊಂಡಾಗ ಕನಿಷ್ಟ ವೈರಸ್ ಪತ್ತೆ ಮಾಡುವ ಉಪಕರಣಗಳನ್ನೂ ಮೆಕ್ಸಿಕೋಗೆ ಈ ದೇಶಗಳು ನೀಡಿರಲಿಲ್ಲ. ರೋಗ ತಗುಲಿದ ರಕ್ತದ ಸ್ಯಾಂಪಲ್‌ನ್ನು ಕೆನಡಾದ ಪ್ರಯೋಗಾಲಯಕ್ಕೆ ಮೆಕ್ಸಿಕೋ ಕಳುಹಿಸಿ ವೈರಸ್‌ನ್ನು ಪತ್ತೆ ಮಾಡಿದಾಗಷ್ಟೆ ಇದು ಮೆಕ್ಸಿಕೋದಲ್ಲಿ ಮಾತ್ರವಲ್ಲ ಇಡೀ ವಿಶ್ವಕ್ಕೇ ಹೊಸತಾದ ವೈ ಎಂದು ಗೊತ್ತಾದದ್ದು.

ಆಮೇಲೂ ಕೂಡ ರೋಗ ನಿಯಂತ್ರ ಮೆಕ್ಸಿಕೋಗೆ ಯಾವುದೇ ನೆರವು ನೀಡದ ಈ ರಾಷ್ಟ್ ಒಂದೆಡೆಯಾದರೆ, ಮೆಕ್ಸಿಕೋ ಸರ್ಕಾರ ರ ನಿಯಂತ್ರಣದ ಬಗ್ಗೆ ತುರ್ತು ಕ್ರಮ ಕೈಗೊ ಅಮೇರಿಕಾ ಅಧ್ಯಕ್ಷರ ಭೇಟಿಯ ಕಾರ್ಯಕ್ರಮ ಹೆಚ್ಚಿನ ತಲೆಕೆಡಿಸಿಕೊಂಡಿತ್ತು. ಈ ರ ಕಾಡ್ಗಿಚ್ಚಿನಂತೆ ನಿಯಂತ್ರಣಕ್ಕೆ ಸಿ ಹರಡತೊಡಗಿದಂತೆ ಅದಕ್ಕೆ ಹೆಚ್ಚಿನ ಸಂಖ್ ಬಲಿಬಿದ್ದವರೆಂದರೆ ವೈದ್ಯಕೀಯ ಚಿಕಿತ್ಸೆ ಔಷಧಿಗಳನ್ನು ಕೊಳ್ಳಲಾಗದ ಬಡಜನತೆ ಅಮೇರಿಕಾದಲ್ಲೂ ಕೂಡ ಆರನೇ ಒಂದು ಜನತೆಗೆ ಆರೋಗ್ಯ ವಿಮಾ ಸೌಲಭ್ಯವಿಲ್ಲ. ಆ ಆರೋಗ್ಯ ವಿಮೆಯಿಲ್ಲದಿದ್ದಲ್ಲಿ ಅ ಬಡರೋಗಿಗಳು ರೋಗ ಬಂದಾಗ ಚಿಕಿತ್ಸೆ ಪಡೆ ಹಣವಿಲ್ಲದೆ ಸಾಯುವುದೊಂದೇ ಮಾ ಏಕೆಂದರೆ, ಅಮೇರಿಕಾದಲ್ಲಿ ಆರೋಗ್ಯ ಕಾಪಾ ಚಿಕಿತ್ಸೆ ಪಡೆಯಲು ದೊಡ್ಡ ಮಟ್ಟದ ಬಿಲ್ಲನ್ನು ತೆ ಚಿಕಿತ್ಸೆ ದೊರೆಯುವುದು.

ಹಂದಿ ಜ್ವರಕ್ಕೆ ಲಭ್ಯವಿರುವ ಔಷಧಿಗಳು ಹೆಚ್ಚಿನ ಪ್ರಮಾಣದಲ್ಲಿ ಶ್ರೀಮಂತ ರಾ ಪಾಲಾಗುತ್ತಿದ್ದು, ಬಡರಾಷ್ಟ್ರಗಳಲ್ಲಿ ಅತಿ ಜನಸಂಖ್ಯೆಯಿದ್ದರೂ ಸೂಕ್ತ ಪ್ರಮಾ ಲಭಿಸುತ್ತಿಲ್ಲ. ಅಮೇರಿಕಾ ಪ್ರತ್ಯೇಕ ಕಾನೂನನ್ನು ತಂದು ಕ್ಯೂಬಾ ದೇಶಕ್ಕೆ ಯಾವುದೇ ರ ವೈದ್ಯಕೀಯ ಸೇವೆಗಳು, ಉಪಕರಣ ಔಷಧಿಗಳನ್ನು ಬೇರಾವುದೇ ರಾ ನೀಡಬಾರದೆಂದು ತಾಕೀತು ಮಾಡಿದ ದಿಗ್ಬಂಧನದಿಂದಾಗಿ ಕ್ಯೂಬಾ ತನ್ನದೇ ವೈದ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿಕೊಂಡು ಈ ದೇಶದೊಳಗೆ ನುಸುಳದಂತೆ ನೋಡಿಕೊ ಯಶಸ್ವಿಯಾಗಿದೆ.

ಹಂದಿಜ್ವರವು ವ್ಯಾಪಕವಾಗಿ ಹರಡು ಹಿನ್ನೆಲೆಯಲ್ಲಿ ಬಹುರಾಷ್ಟ್ರೀಯ ಕಂಪ ನಡೆಸುತ್ತಿರುವ ಹಂದಿ ಸಾಕಾಣೆ ಮತ್ತು ಇತರ ಸಾಕಣೆ ಕೇಂದ್ರಗಳ ನೈರ್ಮಲ್ಯ ವ್ಯವಸ್ ಸರಿಯಾಗಿ ನಿರ್ವಹಿಸುತ್ತಿರುವ ಕುರಿತು ಧ್ವನಿ ಇಂಥಹ ಸಾಕಾಣೆ ಕೇಂದ್ರಗಳ ಬಳಿ ಉತ್ಪತ್ತಿಯ ಸಗಣಿ, ತ್ಯಾಜ್ಯ ವಸ್ತುಗಳು, ವಿಷಕಾರಿ ಔಷ ಸತ್ತ ಪ್ರಾಣಿಗಳು, ಇತ್ಯಾದಿಗಳನ್ನು ಎಲ್ಲೆ ಬಿಸಾಡಿ ಹೂಳುವುದರಿಂದ, ಸರಿಯಾಗಿ ಶುದ್ಧ ವಿಸರ್ಜನೆ ಮಾಡದೇ ಇರುವುದರಿಂದ 'ಸ್ಮಿತ್ ಕಂಪನಿಯ 'ಲಾ ಗ್ಲೋರಿಯಾ' ಎಂಬ

ಪು

ತಿಹಾಸಿಕ ಆಹಾರ ಆಂದೋಲನದ ...

0 ರಿಂದ

ಗತಿ! ಕೇಂದ್ರ ಸರ್ಕಾರವನ್ನು ಕೇಳಿದರೆ ರಾಜ್ಯಕ್ಕೆ ಆಹಾರ ಧಾನ್ಯವನ್ನು ಕಳಿಸಿದ್ದೇವೆ ಎನ್ನುತ್ತದೆ. ಸಭಾ ಆಹಾರ ಸಾಮಗ್ರಿ ಸಾಗಿ ಹೋದ ು ಜಾಡುಪತ್ತೆ ಹಚ್ಚಿತು. ಓಹೋ ಆಹಾರ ದು ಕಳ್ಳ ದಾಸ್ತಾನುಗಾರರ ಗೋಡೌನ್‌ಗಳಿಗೆ, ತೆಕೋರರ ಜೋಳಿಗೆಗಳಿಗೆ.

ಮೆ ಎಣ್ಣೆ ಅಭಾವ ಕಂಡಾಗಲೇ...

ವರಿ 1959ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅಕ್ಕಿ ಸೀಮೆಎಣ್ಣೆಯ ತೀವ್ರ ಅಭಾವ ಾದಾಗಲೇ ಕಿಸಾನ್ ಸಭಾ ಸಮಸ್ಯೆಯ ರಕ್ಕೆ ಒತ್ತಾಯಿಸಿತ್ತು. ಮತ್ತು ಆ ನಿಟ್ಟಿನಲ್ಲಿ ಕ್ರಮಗಳನ್ನು ಸಹ ಸೂಚಿಸಿತ್ತು. ಆ ಹಂತದಲ್ಲಿ ದರಲ್ಲಿದ್ದ ಸುಗ್ಗಿಯಲ್ಲಿ ಸರ್ಕಾರ ಅಕ್ಕಿಯನ್ನು ನೇರವಾಗಿ ಸಂಗ್ರಹಿಸಬೇಕು. ಅಕ್ಕಿ ಂದ 5 ಲಕ್ಷ ಟನ್ ಅಕ್ಕಿಯನ್ನು ರೈತರಿಂದ ಗಿ ಸಂಗ್ರಹಿಸಬೇಕು. ಅಕ್ಕಿ ಗಿರಣಿಗಳಿಂದ ಷ್ಟು ಲೆವಿಯಾಗಿ ಅಕ್ಕಿಯನ್ನು ಸಂಗ್ರಹಿಸಬೇಕು ್ಯಾಂಕ್‌ಗಳು ಅಕ್ಕಿ ಗಿರಣಿ ಮಾಲೀಕರಿಗೆ ಮತ್ತು ಸ್ತಾನುಗಾರರು ಮತ್ತು ವ್ಯವಹಾರಸ್ಥರಿಗೆ ಸಾಲ ಕೊಡಬಾರದು ಮತ್ತು ಸರ್ಕಾರದ ಖರೀದಿಗೆ ವನ್ನು ನೀಡಬೇಕೆಂದು ಒತ್ತಾಯಿಸಿತು. ಅದೇ ಗಿ ಮಣ ಅಕ್ಕಿಗೆ ಕನಿಷ್ಠ ಮತ್ತು ಗರಿಷ್ಠ ಬೆಲೆಯನ್ನು ಕ್ರಮವಾಗಿ 12 ರೂ ಮತ್ತು 13 ಗದಿ ಮಾಡಲು ಒತ್ತಾಯಿಸಿತ್ತು.

ಲ್ಲದೆ ಸಾರ್ವಜನಿಕರಿಗೆ ಪಡಿತರ ಚೀಟಿಗಳ ಮಣ ಅಕ್ಕಿಗೆ 17.50 ರೂಪಾಯಿಗೆ ಕೆಂದೂ ಕಿಸಾನ್ ಸಭಾ ಒತ್ತಾಯಿಸಿತು. ಸರ್ಕಾರ ಈ ಯಾವ ಬೇಡಿಕೆಗಳಿಗೂ ಸೊಪ್ಪ ಭೂ ಮಾಲಕರು, ದೊಡ್ಡ ವ್ಯಾಪಾರಸ್ಥರು, ಗಾರರಿಗೆ, ಬಡ್ಡಿ ವ್ಯಾಪಾರಿಗಳಿಗೆ ಸುಗ್ಗಿಯ ಿಜವಾಗಿಯೂ 'ಸುಗ್ಗಿ'ಯನ್ನೇ ತಂದಿತು. ೇ ಆಹಾರ ವಸ್ತುಗಳ ತೀವ್ರ ಬೆಲೆ ಏರಿಕೆ. ತೀವ್ರ ಕೊರತೆ. ಕೃತಕ ಕೊರತೆ ಕೂಡ ೇರಿತು. ಜನರು ಆಹಾರ, ಉದ್ಯೋಗದ ತದಲ್ಲಿ ಹಳ್ಳಿಗಳನ್ನು ಬಿಟ್ಟು, ಕೊಲ್ಕತ್ತಾ ನಗರಕ್ಕೆ ಟ್ಟು ಅಲೆಯುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಇಂತಹ ಸನ್ನಿವೇಶದಲ್ಲಿ ಕಿಸಾನ್ ಸಭಾ ಚಳುವಳಿಯನ್ನು ತೀವ್ರಗೊಳಿಸಲು ತೀರ್ಮಾನಿಸಿತು. ಕಿಸಾನ್ ಸಭಾ ನಿಯೋಗವು ಮೇ-ಜೂನ್ ತಿಂಗಳುಗಳಲ್ಲಿ ರಾಜ್ಯ ವ್ಯಾಪ್ತಿಯಾಗಿ ವಲಯ ಮಟ್ಟದಲ್ಲಿ ಸರ್ಕಾರದ ಆಡಳಿತಾಧಿಕಾರಿಗಳನ್ನು ಭೇಟಿ ಮಾಡಿ ಬೇಡಿಕೆಗಳನ್ನು ಮಂಡಿಸಿ, ಜಾರಿಗೆ ಒತ್ತಾಯಿಸಿದವು. ಜೂನ್ 1 ಮತ್ತು 2 ರಂದು ಕಿಸಾನ್ ಸಭಾ ರಾಜ್ಯ ಘಟಕವು ಬರ್ಧ್ವಾನ್ ಜಿಲ್ಲೆಯ ಗೋವಿಂದಪುರದಲ್ಲಿ ಸೇರಿ ಜೂನ್ 15 ರ ಮತ್ತು ಮುಂದಿನ ಹಂತದ ಹೋರಾಟಕ್ಕೆ ಕರೆ ನೀಡಿತ್ತು.

ಇದಕ್ಕೆಲ್ಲ ಪೂರಕವಾಗಿ ವಿವಿಧ ರಾಜಕೀಯ 'ಪಕ್ಷಗಳನ್ನೊಳಗೊಂಡ ದುರ್ಭಿಕ್ಷ ಮತ್ತು ಬೆಲೆ ಏರಿಕೆ ಪ್ರತಿರೋಧ ಸಮಿತಿ'ಯು ಮೇ ಮೂರನೇ ವಾರದಲ್ಲಿ ವ್ಯಾಪಕ ಸಾರ್ವಜನಿಕ ಸಭೆಗಳನ್ನು ನಡೆಸಿ ಜನತೆ ಈ ಪ್ರತಿರೋಧ ಚಳುವಳಿಯನ್ನು ಸೇರಲು ಆಹ್ವಾನಿಸಿ ಪ್ರಚಾರಾಂದೋಲನ ನಡೆಸಿತ್ತು. ಈ ಎಲ್ಲಾ ಪ್ರಚಾರ-ಪ್ರಕ್ಷೋಭೆ, ಹಂತ ಹಂತವಾದ ಆಂದೋಲನಗಳ ಫಲವಾಗಿಯೇ ಆಗಸ್ಟ್ 31ರಂದು ಕೋಲ್ಕತ್ತಾದಲ್ಲಿ ನೆರೆದ ಲಕ್ಷ ಲಕ್ಷ ಆಹಾರದ ಹಕ್ಕಿಗಾಗಿ ಆಗ್ರಹಿಸಿದ್ದು.

ಕಾಂಗ್ರೆಸ್ ಲಾಗ

ಚಳುವಳಿ ಪ್ರಖರಗೊಳ್ಳುತ್ತಾ ಹೋದಂತೆ ಕಾಂಗ್ರೆಸ್ ಸರ್ಕಾರವು ಜನರ ಒತ್ತಾಯಕ್ಕೆ ಮಣಿದು ತೋರಿಕೆಗಾಗಿ ಕೈಗೊಂಡಿದ್ದ ತೀರ್ಮಾನಗಳನ್ನು ಹಿಂದೆ ಪಡೆಯಿತು. ಜೂನ್ 22 ರಂದು 1959ರಂದು ಸರ್ಕಾರ ರಾಜ್ಯ ಅಕ್ಕಿ ಗಿರಣಿಗಳ ಮೇಲೆ ವಿಧಿ ಸಿದ್ದ ಲೆವಿಯನ್ನು ರದ್ದುಪಡಿಸಿತು. ಇದು ಸಾಲದೆಂದು ಅಕ್ಕಿ ಮತ್ತು ಭತ್ತದ ಬೆಲೆಯ ಮೇಲೆ ಹೇರಿದ್ದ ನಿರ್ಬಂಧ ತೆಗೆದುಹಾಕಿ 'ಮುಕ್ತ' ಬೆಲೆ ಏರಿಕೆಗೆ ಅನುವು ಮಾಡಿಕೊಟ್ಟಿತು.

ಈ ನಿರ್ಧಾರದ ವಿರುದ್ಧಕರೆ ನೀಡಲಾಗಿದ್ದ ಜೂನ್ 25ರ ಸಾರ್ವತ್ರಿಕ ಮುಷ್ಕರವೂ ಆ ರಾಜ್ಯದ್ಯಂತ ವ್ಯಾಪಕ ಬೆಂಬಲಗೊಳಿಸಿ ಪ್ರಚಂಡ ಯಶಸ್ಸು ಗಳಿಸಿತು.

ಇಂದಿರಾಗಾಂಧಿ ಪ್ರತಾಪಗಳು:

ಆಗಸ್ಟ್ 1 ರಂದು ರಾಜ್ಯ ಸರ್ಕಾರ ತೋರಿದ ದಮನಕಾರಿ ವರ್ತನೆ ಕೇವಲ ಆಕಸ್ಮಿಕವಾಗಿರಲಿಲ್ಲ. ಅದರ ಹಿಂದೆ ಸ್ಪಷ್ಟ ರಾಜಕೀಯ ಸಂಕಲ್ಪಗಳಿದ್ದವು. ಕೇವಲ ರಾಜ್ಯ ಮಟ್ಟದ ಪ್ರಶ್ನೆಗಳಲ್ಲ ರಾಷ್ಟ್ರೀಯ ಮಟ್ಟದ ರಾಜಕೀಯ ಬೆಳವಣಿಗೆಗಳ ಪ್ರಭಾವವೂ ಅದರ ಹಿಂದಿತ್ತು. 1959 ಆಗಸ್ಟ್ 31 ಕ್ಕೆ ಸರಿಯಾಗಿ 1 ತಿಂಗಳ ಹಿಂದೆ ಜುಲೈ 31 ರಂದು ಕೇರಳದ ಇ.ಎಂ.ಎಸ್. ನಂಬೂದರಿ ಪಾದ್ ಮುಖ್ಯಮಂತ್ರಿಯಾಗಿದ್ದ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಸರ್ಕಾರವನ್ನು ಕೇಂದ್ರ ಸರ್ಕಾರ ವಜಾ ಮಾಡಿತ್ತು. ಈ ಹೊತ್ತಿಗಾಗಲೇ ನೆಹರು ಪುತ್ರಿ ಇಂದಿರಾಗಾಂಧಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿದ್ದರು. ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರದ ವಿರುದ್ಧ 356ನೇ ವಿಧಿಯನ್ನು ಬಳಸಿ ವಜಾ ಮಾಡಿದ ದೇಶದ ಪ್ರಥಮ ಪ್ರಕರಣ ಇದಾಗಿತ್ತು. ಅಷ್ಟೇ ಮಾತ್ರವಲ್ಲ, ಇಂದಿರಾ ಗಾಂಧಿ ನಾಯಕತ್ವದಲ್ಲಿ 'ಕಮ್ಯುನಿಸ್ಟರನ್ನು ತೊಡೆದು ಹಾಕುವ ಆಂದೋಲನ'ಕ್ಕೆ ಇಂದಿರಾಗಾಂಧಿ ಶುರುವಿಟ್ಟುಕೊಂಡರು. ಆಗಸ್ಟ್ 31ರ ಕೊಲ್ಕತ್ತಾ ದಮನ ಕಾಂಡವನ್ನು ನಾವು ಈ ದೃಷ್ಟಿಯಿಂದಲೂ ಗಮನಿಸಬೇಕು.

ಆಗಸ್ಟ್ 31 ರ ದಮನಕಾಂಡವನ್ನು ಪ್ರತಿಭಟಿಸಿದ ಐತಿಹಾಸಿಕ ಭಾಷಣದಲ್ಲಿ ಕಾಂ.ಜ್ಯೋತಿಬಸು ಅವರು ಕಾಂಗ್ರೆಸ್ ಪಕ್ಷಕ್ಕೆ ಜನರು ಒಂದು ಐತಿಹಾಸಿಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದ್ದರು. ಜನತೆ ಬಂಗಾಳದ ಕಾಂಗ್ರೆಸ್ ಎಂದೂ ಮರೆಯಲಾಗದ ಪಾಠ ಕಲಿಸಿದ್ದು ಈಗ ಇತಿಹಾಸ.

ಸ್ಮಾರಕ -ಸ್ಫೂರ್ತಿ ಕೇಂದ್ರ:

ದಮನಕಾಂಡ ನಡೆದ ಒಂದು ವರ್ಷವಾದಾಗ ಹುತಾತ್ಮ ಸಂಗಾತಿಗಳು ಪ್ರಾಣ ಕೊಟ್ಟ ಆ ಶಹೀದ್ ಮಿನಾರ್ ಚೌಕದಲ್ಲಿ ಆಗಸ್ಟ್ 31, 1960 ರ ಹೊತ್ತಿಗೆ ಒಂದು ತಾತ್ಕಾಲಿಕ ಸ್ಮಾರಕವನ್ನು ಸ್ಥಾಪಿಸಲಾಯಿತು. ಭಾರತದ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕ ಮುಖಂಡಗಳಲ್ಲಿ ಒಬ್ಬರಾದ, ಕಾಕಬಾಬು ಎಂದೇ ಖ್ಯಾತರಾದ ಕಾಮ್ರೆಡ್ ಮುಜಾಫರ್ ಅಹಮದ್ ಈ ಸ್ಮಾರಕವನ್ನು ಅನಾವರಣ ಮಾಡಿದರು. ಆ ನಂತರದ ಆ ಸ್ಮಾರಕವನ್ನು ಒಂದು ಶಾಶ್ವತ ಸ್ಮಾರಕದ ಸ್ವರೂಪಕ್ಕೆ ಬದಲಿಸಿ ನಿರ್ಮಿಸಲಾಯಿತು. ಆ ಮುಂದಿನ ಎಡ ಚಳುವಳಿ ಕಾರ್ಯಕರ್ತರು ಹೋರಾಟ ಗಾರರಿಗೆ ಕ್ರಾಂತಿಕಾರಿ ಚಳುವಳಿಯ ಸಂಗಾತಿಗಳಿಗೆ ಒಂದೂ ಸ್ಫೂರ್ತಿ ಕೇಂದ್ರವಾಯಿತು.

ಯುಪಿಎ ಸರ್ಕಾರದ ನೂರು ದಿನಗಳ ದಾಖಲೆ...

ಪುಟ 6 ರಿಂದ

ಸಂಘಟನಾತ್ಮಕವಾಗಿ ಎದುರಿಸಲು ಸಿಪಿಐ(ಎಂ) ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿಯನ್ನು ಆಲಿಸಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ಈ ಪ್ರಜಾಪ್ರಭುತ್ವ-ವಿರೋಧಿ ದಾಳಿಗಳ ವಿರುದ್ಧ ಮತ್ತು ಅವರೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ಅಖಿಲ ಭಾರತ ಪ್ರಚಾರ ಕಾರ್ಯವನ್ನು ತೀವ್ರಗೊಳಿಸಲು ನಿರ್ಧರಿಸಿತು.

ಶ್ರೀಲಂಕಾ-ಪತ್ರಕರ್ತನಿಗೆ ಶಿಕ್ಷೆ ಆತಂಕಕಾರಿ

ಶ್ರೀಲಂಕಾದ ಒಬ್ಬ ಪತ್ರಕರ್ತ ಜೆ.ಎಸ್.ತಿಸ್ಸನಾಯಗಂ ಅವರಿಗೆ 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ತನ್ನ ಅಂಕಣದಲ್ಲಿ ಅವರು ಕೆಲವು ವಿಮರ್ಶಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಕ್ಕಾಗಿ ಈ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಒಬ್ಬ ಪತ್ರಕರ್ತನ ವಿರುದ್ಧ ಕರಾಳ ಭಯೋತ್ಪಾದಕ-ವಿರೋಧಿ ಕಾನೂನನ್ನು ಬಳಸುವುದು ಒಂದು ಆತಂಕಕಾರಿ ಸನ್ನಿವೇಶ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಶಿಕ್ಷೆಯನ್ನು ರದ್ದು ಪಡಿಸಲು ಮತ್ತು ಮಾಧ್ಯಮದ ದಮನವನ್ನು ನಿಲ್ಲಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಶ್ರೀಲಂಕಾ ಸರಕಾರವನ್ನು ಆಗ್ರಹ ಪಡಿಸಿದೆ.

ತಿದ್ದುಪಡಿ ಚಳುವಳಿ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಪಕ್ಷದೊಳಗೆ ತಿದ್ದುಪಡಿ ಚಳುವಳಿ ಒಂದು ದಸ್ತಾವೇಜಿನಲ್ಲಿ ಅಡಕವಾಗಿರಬೇಕಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿ ಈ ಆಧಾರದಲ್ಲಿ ಒಂದು ಕರಡನ್ನು ಮುಂದಿನ ಕೇಂದ್ರ ಸಮಿತಿ ಸಭೆಯಲ್ಲಿ ಮಂಡಿಸಲಾಗುವುದು ಎಂದು ಹೇಳಿದೆ. ಮುಂದಿನ ಕೇಂದ್ರ ಸಮಿತಿ ಸಭೆ ಅಕ್ಟೋಬರ್ 23ರಿಂದ 25ರ ವರೆಗೆ ನವದೆಹಲಿಯಲ್ಲಿ ನಡೆಯಲಿದೆ ಹಾಗೂ ಅದಕ್ಕೆ ಮೊದಲು ಪೊಲಿಟ್‌ಬ್ಯುರೊ ಸಭೆ ಅಕ್ಟೋಬರ್ 11ರಂದು ನಡೆಯಲಿದೆ.

ಂದಿ ಜ್ವರ ಮತ್ತು ಅಮೆರಿಕಾ....

ಂದ

ಬಳಿಯೇ ರೋಗ ಉದ್ಭವಿಸಿ ಆ ಕೇಂದ್ರದ ಸುತ್ತಲೂ ಶೇ. 30ಕ್ಕೂ ಹೆಚ್ಚಿನ ಜನತೆಗೆ ತ್ತು ಎಂದು ವರದಿಗಳು ಹೇಳಿವೆ. ಹೀಗೆ ಉದ್ಭವಿಸಿದಾಗ ತಕ್ಷಣದ ಕಡಿಮೆ ಬೆಲೆಯ ಔಷಧಗಳು ಸಾಮಾನ್ಯರಿಗೆ ದೊರೆಯದೇ ಗಿ ರೋಗವು ವ್ಯಾಪಕವಾಗಿ ಎಲ್ಲೆಡೆ ಕಾರಣವಾಯಿತು.

ಔಷಧಗಳ ಉಪಯೋಗದ ಕುರಿತು ರದಿ:

ಕಂಪನಿಗಳು ತಾವು ಹೊಸದಾಗಿ ಸಂಶೋಧಿಸುವ ಔಷಧಗಳನ್ನು ಅವುಗಳ ಹಿತಾಹಿತಗಳ ಬಗ್ಗೆ ಸಂಪೂರ್ಣ ಪರೀಕ್ಷೆಗೆ ಒಳಪಡಿಸುವ ಮುನ್ನವೇ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಒಂದೆಡೆಯಾದರೆ, ಮತ್ತೊಂದೆಡೆ ತಾವು ಹೊಸದಾಗಿ ಬಿಡುಗಡೆ ಮಾಡುವ ಔಷಧಗಳ ಕುರಿತು ಅವು ದಿವ್ಯೌಷಧಗಳೆಂದು ಹಲವು ತಜ್ಞರಿಂದ ಅಂತರಾಷ್ಟ್ರೀಯ ಪತ್ರಿಕೆಗಳು ಮತ್ತು ಜರ್ನಲ್‌ಗಳಲ್ಲಿ ಸುಳ್ಳುಸುಳ್ಳೇ ರಿವ್ಯೂ ಬರೆಸುತ್ತಿರುವ ಹಾವಳಿ ಬಹಳಷ್ಟಿದೆ. ಅಂತಹ ಔಷಧಿಗಳು ರೋಗಿಯ ಮೇಲೆ ಮತ್ತೊಂದು ರೀತಿಯ ದುಷ್ಪರಿಣಾಮ ಬೀರುತ್ತವೆಂದು ಕೆಲಸಮಯಾನಂತರ ಸಾಬೀತಾಗುವ ವೇಳೆಗೆ, ಕಂಪನಿಗಳು ಇನ್ನೊಂದು ಬ್ಯಾಂಡಿನ ಔಷಧಗಳನ್ನು ಮಾರುಕಟ್ಟೆಗೆ ಪರಿಚಯಿಸುತ್ತವೆ.

ಔಷಧಿ-ತಯಾರಿಕಾ ಕಂಪನಿಗಳು, ರೋಗದ ಭಯ ಸೃಷ್ಟಿಕರ್ತರು:

'ರೋಗದ ಭಯ ಸೃಷ್ಟಿಕರ್ತರು ಜನತೆಯು ರೋಗದಿಂದ ನರಳುತ್ತಿದ್ದಾರೆಂದು ಅಥವಾ ಸ್ವಲ್ಪ ಪ್ರಮಾಣದ ರೋಗಕ್ಕೆ ಸಿಲುಕಿದ್ದಾರೆಂದು ಭಯ ನಿರ್ಮಿಸುತ್ತಾರೆ. ರೋಗದ ಭಯ ಸೃಷ್ಟಿ ಕ್ರಿಯೆಯು ಒಂದು ದೊಡ್ಡ ವ್ಯಾಪಾರವೆನಿಸಿದೆ. ನೀವು ಸಾರ್ವಜನಿಕರಲ್ಲಿ ಭಯ ಸೃಷ್ಟಿ ಮಾಡಬೇಕೆನಿಸಿದಲ್ಲಿ, ಅದರ ಜಾಹಿರಾತಿಗಾಗಿ ಡಾಲರು ಹೊಳೆಯೇ ಹರಿಯುತ್ತದೆ, ಆಗ ಯಾವುದನ್ನೂ ಬೇಕಾದರೂ ನೀವು ರೋಗವಾಗಿ ಪರಿವರ್ತಿಸಬಹುದು' ಎಂದು ವೈದ್ಯಕೀಯ ಪತ್ರಕರ್ತ ಲಿನ್ ಪೇಯರ್ ನೇಚರ್ ಪತ್ರಿಕೆಯಲ್ಲಿ ದಾಖಲಿಸಿದ್ದಾರೆ. ಅಂತರಾಷ್ಟ್ರೀಯ ಜರ್ನಲ್‌ಗಳು, ಮಾಧ್ಯಮಗಳು ಮತ್ತು ಜಾಹಿರಾತುಗಳ ಮೂಲಕ ಜನರಲ್ಲಿ ಅಂತಹ ರೋಗ ಭಯ ನಿರ್ಮಾಣ ಮಾಡಿ ಲಾಭ ಮಾಡುವ ದೊಡ್ಡ ದಂಧೆಯೇ ಇದೆ. ಡಾಕ್ಟರುಗಳು, ಔಷಧಿ ಕಂಪನಿಗಳು, ಮತ್ತು ವಿಮಾ ಕಂಪನಿಗಳು ನಿಮಗೆ ಹೇಗೆ ರೋಗ ತರುತ್ತವೆ? ಎಂಬ ತಮ್ಮ ಪ್ರಸಿದ್ಧ ಪುಸ್ತಕದಲ್ಲಿ ಇನ್ನೂ ಆಘಾತಕಾರಿ ಅಂಶಗಳನ್ನು ಲಿನ್ ಪೇಯರ್ ಬಹಿರಂಗಗೊಳಿಸಿದ್ದಾರೆ.

ಕೃಪೆ: ಪೀಪಲ್ಸ್ ಡೆಮಾಕ್ರಸಿ

'ಕರ್ಮಕಾಂಡ ಅಜ್ಞಾನದ ಪ್ಯಾಕೇಜ್'

- ನಿಡುಮಾಮಿಡಿ ಶ್ರೀ

ಕ್ರಿಯಾಪ್ರಕಾಶನದ ಮಹತ್ವದ ಮೂರು ಕೃತಿಗಳ ಬಿಡುಗಡೆ



ಬಿಡುಗಡೆಯಾದ ಪುಸ್ತಕಗಳು

ಕ್ರಿಯಾ ಪ್ರಕಾಶನ ಹೊರತಂದ ಮೂರು ಮಹತ್ವದ ಕೃತಿಗಳ ಬಿಡುಗಡೆ ಸಮಾರಂಭವು ಸೆಪ್ಟೆಂಬರ್ 7, 2009 ರಂದು ಬೆಂಗಳೂರಿನಲ್ಲಿ ನಡೆಯಿತು. ಎಸ್.ಸಿ.ಎಂ ಸಭಾ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಒಂದು ವಿಚಾರಗೋಷ್ಠಿಯಂತಹ ವೈಚಾರಿಕ ಕಳೆ ಎದ್ದುಕಂಡಿತು.

ಕರ್ಮಕಾಂಡ ಅಜ್ಞಾನ ಪ್ಯಾಕೇಜ್

ಚಾರ್ವಾಕರಿಂದ ಮಾರ್ಕ್ಸ್‌ವರೆಗೆ ಕೃತಿಯನ್ನು ನಿಡುಮಾಮಿಡಿ ಪೀಠಾಧ್ಯಕ್ಷರಾದ ಶಿವಾಯತ ಧರ್ಮಗುರು ಶ್ರೀ ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು ಬಿಡುಗಡೆ ಮಾಡಿದರು. ಮಹಾರಾಷ್ಟ್ರದ ಕಾರ್ಮಿಕ ನಾಯಕ, ಚಿಂತಕ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡ ಪ್ರಭಾಕರ್ ಸಂಝುಗಿರಿಯವರು ಬರೆದ ಭಾರತೀಯ ತತ್ವಶಾಸ್ತ್ರ ಸೇರಿದಂತೆ ತತ್ವಶಾಸ್ತ್ರ ದ ವಿವಿಧ ಚಿಂತನ ಧಾರೆಯನ್ನು ಪರಿಚಯಿಸುವ ಅಮೂಲ್ಯ ಕೃತಿ. ಈ ಸಂದರ್ಭ ನಿಡುಮಾಮಿಡಿಸ್ವಾಮಿಗಳು ಮಾತನಾಡಿ ಭಾರತದಲ್ಲಿ ಚಾರ್ವಾಕವಾದ ವಿಚಾರವಾದ ಆದರೆ ಅದೊಂದೇ ವಿಚಾರವಾದದಲ್ಲ. ಅದಕ್ಕೆ ಮುಂಚೆಯೂ ವಿಚಾರವಾದ ಪ್ರತಿಪಾದನೆಯಾಗುತ್ತಾ ಬಂದಿತ್ತು. ಅನಂತರ ಪ್ರತಿಪಾದನೆಯಾದ ಕರ್ಮಕಾಂಡ ನಮ್ಮ ಸಮಾಜದ ಸಾಂಸ್ಕೃತಿಕ ಚಲನಶೀಲತೆಯನ್ನೇ ಕುಗ್ಗಿಸಿತು. ಕರ್ಮಕಾಂಡದ ಜೊತೆಗೆ ಪುರೋಹಿತಶಾಹಿಯೂ ಬೆಳೆದುಬಂತು. ಕರ್ಮಕಾಂಡ ಒಂದು ಅಜ್ಞಾನದ ಪ್ಯಾಕೇಜ್. ಅದು ಮನುಷ್ಯನನ್ನು, ದೇವರನ್ನು ಸಂಕುಚಿತಗೊಳಿಸಿತು. ಇದು ಜನರನ್ನು ದಾಸರನ್ನಾಗಿ ಮಾಡುವ ಪ್ರಯತ್ನ ಎಂದರು.

ಮೂಢನಂಬಿಕೆಗೆ ವಿಜ್ಞಾನದ ಲೇಪನ

ಮುಗ್ದತೆಯ ನಿರಂತರ ಶೋಷಣೆ ನಡೆದಿದೆ. ನಮ್ಮ ಆಳುವ ವರ್ಗಕ್ಕೆ ಜನ ಗುಲಾಮರಾಗಿರುವುದೇ ಬೇಕು. ಜಾತಿ ಪದ್ಧತಿ, ಸತಿ ಪದ್ಧತಿಯನ್ನೆಲ್ಲಾ ಸಮರ್ಥಿಸಲಾಗುತ್ತಿದೆ. 'ಜನಿವಾರ ಹಾಕಿಕೊಂಡರೆ ಕಿಡ್ನಿ ಸಮಸ್ಯೆ ಬರಲ್ಲ, ಲಿಂಗ ಕಟ್ಟಿಕೊಂಡರೆ ಹಾರ್ಟ್ ಸಮಸ್ಯೆ ಬರಲ್ಲ ಎಂಬಂತಹ ವಾದಗಳು ಬೆಳೆಯುತ್ತಿವೆ.



ಜಗತ್ತನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಮಾರ್ಕ್ಸ್‌ವಾದ ತುಂಬಾ ಸಹಕಾರಿ ಎಂದು ಸ್ವಾಮಿಯವರು ಹೇಳಿದರು. ಇದೇ ಸಂದರ್ಭದಲ್ಲಿ ಅವರು ಸಾಂಝಿಗಿರಿಯವರ 'ಡಾ. ಬಿ.ಆರ್. ಅಂಬೇಡ್ಕರ್ ಚಿಂತನ-ಹೋರಾಟ' ಪುಸ್ತಕವನ್ನೂ ಸಹ ಬಿಡುಗಡೆ ಮಾಡಿದರೆ.

ರೋಮಾಂಚನಕಾರಿ ಬದುಕು

ಮೇಜರ್ ಜೈಪಾಲ್‌ಸಿಂಗ್‌ರವರ 'ವಿಮೋಚನೆಯ ಸಮರದಲ್ಲಿ' ಕೃತಿಯನ್ನು ಬಿಡುಗಡೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ನಿವೃತ್ತ ನ್ಯಾಯಾಧೀಶರಾದ ಶ್ರೀ ಕೋ.ಚನ್ನಬಸಪ್ಪ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು . ಬ್ರಿಟೀಷರ ಸೈನ್ಯದಲ್ಲಿ ಅಧಿಕಾರಿಯಾಗಿದ್ದುಕೊಂಡೇ ಸೈನಿಕರನ್ನು ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಪ್ರೇರೇಪಿಸಿದ ರೋಮಾಂಚನಕಾರಿ ಬದುಕು ಮೇಜರ್ ಜೈಪಾಲ್‌ಸಿಂಗ್‌ರವರದ್ದು. ಸ್ವಾತಂತ್ರ್ಯ ಹೋರಾಟವೆಂದರೆ , ಗಾಂಧೀಜಿ, ತಿಲಕ್ ಮೆರವಣಿಗೆ, ಸತ್ಯಾಗ್ರಹ ಎಂದಷ್ಟೇ ಹೇಳಲಾಗುತ್ತದೆ. ಇತಿಹಾಸದಲ್ಲಿ ಇಂತಹ ಹೋರಾಟವನ್ನು ಹೆಚ್ಚಾಗಿ ಕಾಣಿಸಿರಲಿಲ್ಲ. ಇಂತಹ ಮಹತ್ವದ ಸ್ವಾತಂತ್ರ್ಯ ಚಳುವಳಿಯ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸುವು ಅತ್ಯಂತ ಮಹತ್ವದ ಕಾರ್ಯ ಎಂದೂ ಕೋ ಚನ್ನಬಸಪ್ಪ ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ್ರಿ ಪ್ರಕಾಶನದ ನಿರ್ದೇಶಕರಾದ ವಿ.ಜೆ.ಕೆ. ನಾಯರ್‌ರವರು ಮಾತನಾಡಿ ಮೇಜರ್ ಜೈಪಾಲ್‌ಸಿಂಗ್‌ರವರು ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಪಾತ್ರ ಮಾತ್ರವಲ್ಲದೆ, ಸ್ವಾತಂತ್ರ್ಯಾ ನಂತರ ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಯ ವಹಿಸಿದ ಪಾತ್ರ ಸ್ಮರಿಸಿದರು.

ಜನಶಕ್ತಿ ಕನ್ನಡ ವಾರಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್ ರವರು ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. 'ಪುಸ್ತಕ ಪ್ರೀತಿ'ಯ ವಸಂತರಾಜ್, ವಿಮೋಚನಾ ಸಮರದ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ವಿಶ್ವ ಕುಂದಾಪುರ ವೇದಿಕೆಯಲ್ಲಿದ್ದರು. ಕ್ರಿಯಾ ಪ್ರಕಾಶನದ ಚಂದ್ರಶೇಖರ್ ಸ್ವಾಗತಿಸಿದರು ಆರ್.ರಾಮಕೃಷ್ಣ ವಂದಿಸಿದರು.



ಎಸ್.ವೈ.ಗುರುಶಾಂತ್



ವೀರಭದ್ರ ಚನ್ನಮಲ್ಲ ಸ್ವಾಮಿ



ಕೋ. ಚನ್ನಬಸಪ್ಪ



ವಿ.ಜೆ.ಕೆ.ನಾಯರ್

ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಬಂದ ಜನತೆ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ ಫೈಲ್.